
ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
45
ಏಪ್ರಿಲ್ 2 ಬುಧವಾರ 2025
ಸಂಪುಟ: 45 | ಸಂಚಿಕೆ: 342 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಪ್ರಧಾನಿ ಮೋದಿ ಸೆಪ್ಟೆಂಬರ್‌ನಲ್ಲಿ ನಿವೃತ್ತಿಯಾಗ್ತಾರೆ!

• ಶಿವಸೇನೆ ಉದ್ಧವ್ ಠಾಕ್ರೆ ಬಣದ ಸಂಸದ ಸಂಜಯ್ ರಾವತ್ ಭವಿಷ್ಯ • ಆರ್‌ಎಸ್‌ಎಸ್ ಕಚೇರಿಗೆ ಪ್ರಧಾನಿ ಮೋದಿ ಭೇಟಿ ಕುರಿತು ತೀಕ್ಷ್ಣ ಪ್ರತಿಕ್ರಿಯೆ • ಮೋದಿ 2029ಕ್ಕೂ ಪ್ರಧಾನಿಯಾಗ್ತಾರೆ; ಮಹಾರಾಷ್ಟ್ರ ಸಿಎಂ ಫಡ್ನವೀಸ್ ತಿರುಗೇಟು

ನಾಗ್ಪುರ/ಮುಂಬೈ: ಪ್ರಧಾನಿ ನರೇಂದ್ರ ಮೋದಿ ಸೆಪ್ಟೆಂಬರ್‌ನಲ್ಲಿ ನಿವೃತ್ತಿಯಾಗಲಿದ್ದಾರೆ. ತಮ್ಮ ನಿವೃತ್ತಿ ಅರ್ಜಿ ಬರೆಯಲು ಮೋದಿ ಆರ್‌ಎಸ್‌ಎಸ್ ಕೇಂದ್ರ ಕಚೇರಿಗೆ ಭೇಟಿ ನೀಡಿದ್ದಾರೆ. (ಸೆಪ್ಟೆಂಬರ್‌ನಲ್ಲಿ ನಿವೃತ್ತಿ ಕಾ ಅರ್ಜಿ ಲಿಖ್ನೆ ಕೆ ಲಿಯೇ ಶಾಯದ್ ವೋ ಆರ್‌ಎಸ್‌ಎಸ್ ಮುಖ್ಯಾಲಯ ಗಯೇ) ಸಂಘ, ನಾಯಕನನ್ನು ಬದಲಿಸಲು ಹೊರಟಿದೆ ಎಂದು ಪ್ರಧಾನಿ ಮೋದಿ ನಾಗ್ಪುರ ಅರ್‌ಎಸ್‌ಎಸ್ ಕಚೇರಿ ಭೇಟಿ ಬಗ್ಗೆ ಶಿವಸೇನೆ ಸಂಸದ ಸಂಜಯ್ ರಾವತ್ ಭವಿಷ್ಯ ನುಡಿದಿದ್ದಾರೆ.

ಇದಕ್ಕೆ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ತಿರುಗೇಟು ನೀಡಿದ್ದು '2029ಕ್ಕೂ ಮೋದಿಯೇ ಪ್ರಧಾನಿಯಾಗುತ್ತಾರೆ' ಎಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಮಾ.30 ರಂದು ನಾಗ್ಪುರದಲ್ಲಿರುವ ಆರ್‌ಎಸ್‌ಎಸ್ ಮುಖ್ಯ ಕಚೇರಿಗೆ ಭೇಟಿ ನೀಡಿದ ಬಗ್ಗೆ ಪ್ರತಿಕ್ರಿಯಿಸಿದ ಶಿವಸೇನೆ ಉದ್ಧವ್ ಬಣದ ಸಂಸದ ಸಂಜಯ್ ರಾವತ್, ದೇಶದ ರಾಜಕೀಯ ನಾಯಕತ್ವ ಬದಲಿಸಲು ಆರ್‌ಎಸ್‌ಎಸ್ ನಿರ್ಧರಿಸಿದೆ. ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ತಮ್ಮ ನಿವೃತ್ತಿಯ ಅರ್ಜಿ ಬರೆಯಲೆಂದೇ ಮೋದಿ ಆರ್‌ಎಸ್‌ಎಸ್ ಕೇಂದ್ರ ಕಚೇರಿಗೆ ಭೇಟಿ ನೀಡಿದ್ದರು.


ಆರ್‌ಎಸ್‌ಎಸ್ ಮುಖಂಡ ಮೋಹನ್ ಭಾಗವತ್ ಅವರೊಂದಿಗೆ ಪ್ರಧಾನಿ ಮೋದಿ ಹಾಗೂ ಇತರರು.

ನಿಮಗೀಗ 75 ವರ್ಷ ಎಂದು ನೆನಪಿಸಲು ಮೋದಿಯನ್ನು ಆರ್‌ಎಸ್‌ಎಸ್ ಕರೆಸಿಕೊಂಡಿತ್ತು. ಮೋದಿಯವರ ಉತ್ತರಾಧಿಕಾರಿಯನ್ನು ಆರ್‌ಎಸ್‌ಎಸ್ ನಿರ್ಧರಿಸುತ್ತದೆ ಎಂದು ತೋರುತ್ತದೆ. ಅದಕ್ಕಾಗಿಯೇ ಮೋದಿಯನ್ನು ಆರ್‌ಎಸ್‌ಎಸ್ ಕೇಂದ್ರ ಕಚೇರಿಗೆ ಕರೆಸಿ ಚರ್ಚೆ ನಡೆಸಿದ್ದರು. ಸಂಘದ ಚರ್ಚೆಗಳು ಮುಚ್ಚಿದ ಬಾಗಿಲುಗಳ ಹಿಂದೆ ನಡೆಯುತ್ತದೆ. ಸೂಚನೆಗಳು ಬಹಳ ಸ್ಪಷ್ಟವಾಗಿವೆ. ಮುಂದಿನ ನಾಯಕನನ್ನು ಸಂಘ ನಿರ್ಧರಿಸುತ್ತದೆ. ಆ ನಾಯಕ ಮಹಾರಾಷ್ಟ್ರದವನಾಗಿರಬಹುದು ಎಂದು ಕುಹಕವಾಡಿದ್ದಾರೆ.

ಫಡ್ನವೀಸ್ ತಿರುಗೇಟು: ಸಂಜಯ್ ರಾವತ್ ಹೇಳಿಕೆಗೆ ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ಸೇರಿದಂತೆ ಬಿಜೆಪಿ ನಾಯಕರು ಕಿಡಿ ಕಾರಿದ್ದಾರೆ. '2029ರಲ್ಲಿ ಮೋದಿಯನ್ನು ನಾವು ಮತ್ತೊಮ್ಮೆ ಪ್ರಧಾನಿಯನ್ನಾಗಿ ನೋಡುತ್ತೇವೆ. ಅವರ ಉತ್ತರಾಧಿಕಾರಿಯನ್ನು ಹುಡುಕುವ ಅಗತ್ಯವಿಲ್ಲ. ಅವರು ನಮ್ಮ ನಾಯಕ. ಅವರೇ ಮುಂದುವರೆಯುತ್ತಾರೆ. ನಮ್ಮ ಸಂಪ್ರದಾಯದಲ್ಲಿ ತಂದೆ ಬದುಕಿರುವಾಗ ಉತ್ತರಾಧಿಕಾರಿ ಬಗ್ಗೆ ಮಾತನಾಡುವುದು ಸರಿಯಲ್ಲ. ಅದು ಮೊಘಲ್ ಸಂಸ್ಕೃತಿ. ಉತ್ತರಾಧಿಕಾರಿ ಬಗ್ಗೆ ಚರ್ಚಿಸುವ ಸಮಯ ಬರುವುದಿಲ್ಲ' ಎಂದು ಮಹಾರಾಷ್ಟ್ರ ಸಿಎಂ ದೇವೇಂದ್ರ ಫಡ್ನವೀಸ್ ತಿರುಗೇಟು ನೀಡಿದ್ದಾರೆ.


ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಬೆಂಗಳೂರು ಉಳಿಸುವುದು ದೇವರಿಂದ ಅಸಾಧ್ಯವಾದರೂ ಮೈಸೂರಿಂದ ಸಾಧ್ಯವಿದೆ!
■ ಪುಟ–4

ನಿರಂತರ ಬೆಲೆ ಏರಿಕೆ ಖಂಡಿಸಿ ಬಿಜೆಪಿ ನಿರಂತರ ಹೋರಾಟ

ಇಂದು ಅಹೋರಾತ್ರಿ ಧರಣಿ

ಬೆಂಗಳೂರು, ಏ.1– ರಾಜ್ಯ ಸರ್ಕಾರ ಬಡ, ಮಧ್ಯಮ ವರ್ಗದವರ ಮೇಲೆ ಬೆಲೆ ಏರಿಕೆಯ ಬರೆಯನ್ನು ಹಾಕಿದ್ದು, ಅದನ್ನು ವಿರೋಧಿಸಿ ಸರ್ಕಾರದ ವಿರುದ್ಧ ರಾಜ್ಯವ್ಯಾಪಿ ಸರಣಿ ಪ್ರತಿಭಟನೆ ಮತ್ತು ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಏ.2 ರ ಬೆಳಿಗ್ಗೆ 11 ರಿಂದ ಅಹೋರಾತ್ರಿ ಧರಣಿ ಆರಂಭಿಸಲಿದ್ದೇವೆ. ಈ ಧರಣಿಯಲ್ಲಿ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು, ಪದಾಧಿಕಾರಿಗಳು ಭಾಗವಹಿಸುತ್ತಾರೆ ಎಂದು ಹೇಳಿದರು.

ಬಿಜೆಪಿಯ ಶಾಸಕರ ಅಮಾನತು ಕ್ರಮ ಖಂಡಿಸಿ ಅದೇ ದಿನ ಕೆಂಗಲ್ ಹನುಮಂತಯ್ಯ ಅವರ ಪ್ರತಿಮೆ ಮುಂದೆ ಪ್ರತಿಭಟಿಸುತ್ತೇವೆ. ಅಲ್ಲದೇ, ಏ.5 ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರ, ತಾಲೂಕು ಕೇಂದ್ರ ಮತ್ತು ಮಂಡಲ ಮಟ್ಟದಲ್ಲಿ ಕಾರ್ಯಕರ್ತರು ಬೀದಿಗಿಳಿದು ಪ್ರತಿಭಟಿಸಲಿದ್ದಾರೆ ಎಂದು ತಿಳಿಸಿದರು. ಏ.7ರಂದು ಮೈಸೂರಿನಿಂದ ಜನಜಾಗೃತಿಗಾಗಿ 'ಜನಾಕ್ರೋಶ' ■ 6ನೇ ಪುಟಕ್ಕೆ



ಉದ್ದೇಶಿತ ಪ್ರತಿಭಟನೆಯ ಪೋಸ್ಟರ್ ಅನ್ನು ವಿಜಯೇಂದ್ರ ಮಂಗಳವಾರ ಬಿಡುಗಡೆ ಮಾಡಿದರು.

ಬೆಲೆ ಏರಿಕೆ 'ಗ್ಯಾರಂಟಿ'

ಬೆಂಗಳೂರು, ಏ.1(ಕೆಎಂಶಿ)– ಸಿದ್ದರಾಮಯ್ಯ ಮುಖ್ಯಮಂತ್ರಿಯಾದ ನಂತರ ಕಳೆದ 20 ತಿಂಗಳಿಂದ ರಾಜ್ಯದ ಜನರಿಗೆ ಬೆಲೆ ಏರಿಕೆ ಗ್ಯಾರಂಟಿ ದಯಪಾಲಿಸಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಲು, ವಿದ್ಯುತ್, ನೀರು, ಪೆಟ್ರೋಲ್, ಡೀಸೆಲ್ ದರ, ಸ್ಟ್ಯಾಂಪ್ ಶುಲ್ಕ, ಮೆಟ್ರೊ ದರ ಏರಿಸುವ ಮೂಲಕ ಜನಸಾಮಾನ್ಯರ ಬದುಕು ಹೊರೆಯಾಗುವಂತೆ ಮಾಡಿದ್ದಾರೆ ಎಂದರು. ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಎಂದರೆ ಒಂದು ಕೈಯ್ಯಿಂದ ಕೊಡುವುದು, ಮತ್ತೊಂದು ಕೈಯ್ಯಿಂದ ಕಿತ್ತುಕೊಳ್ಳುವುದಾಗಿದೆ. ಇಂತಹ ನೀತಿಯಿಂದ ರಾಜ್ಯದ ಜನತೆ ರೋಸಿ ಹೋಗಿದ್ದಾರೆ.



ಇಂದು ಬೆಂಗಳೂರಿನಲ್ಲಿ ಮೊದಲ ಐಪಿಎಲ್ ಪಂದ್ಯ

ಬೆಂಗಳೂರು, ಏ.1– ಬುಧವಾರ (ಏ.2) ಬೆಂಗಳೂರಿನಲ್ಲಿ ಐಪಿಎಲ್ ಸೀಸನ್ 18ರ ಮೊದಲ ಮ್ಯಾಚ್ ನಡೆಯಲಿದ್ದು, ಆರ್‌ಸಿಬಿ–ಜಿಟಿ ಮುಖಾಮುಖಿಯಾಗಲಿದೆ. ಐಪಿಎಲ್ ಪಂದ್ಯ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸರು ಚಿನ್ನಸ್ವಾಮಿ ಸ್ಟೇಡಿಯಂ ಸುತ್ತಮುತ್ತ ಟ್ರಾಫಿಕ್ ಸಮಸ್ಯೆ ತಡೆಗಟ್ಟಲು ಹಲವು ಕ್ರಮ ಕೈಗೊಂಡಿದ್ದು, ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲು ಟ್ರಾಫಿಕ್ ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ.

ವಕ್ಫ್ ತಿದ್ದುಪಡಿ ಮಸೂದೆ ಲೋಕಸಭೆಯಲ್ಲಿ ಇಂದು ಮಂಡನೆ

ನವದೆಹಲಿ, ಏ.1– ಜಂಟಿ ಸಂಸದೀಯ ಸಮಿತಿ ಪರಿಶೀಲನೆಗೆ ಒಳಪಟ್ಟಿರುವ ವಕ್ಫ್ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರವು ಬುಧವಾರ (ಏ.2) ಲೋಕಸಭೆಯಲ್ಲಿ ಮಂಡಿಸಲಿದೆ.

ಲೋಕಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆ ಕುರಿತಾದ ಚರ್ಚೆಗೆ ಎಂಟು ಗಂಟೆಗಳ ಸಮಯ ಮೀಸಲಿಡಲಾಗಿದೆ. ಜತೆಗೆ, ಬುಧವಾರವೇ ಲೋಕಸಭೆಯಲ್ಲಿ ಮಸೂದೆಯನ್ನು ಅಂಗೀಕರಿಸಿ ಮರುದಿನ ರಾಜ್ಯಸಭೆಯಲ್ಲಿ ಮಂಡಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅಧ್ಯಕ್ಷತೆಯಲ್ಲಿ ನಡೆದ ವ್ಯವಹಾರ ಸಲಹಾ ಸಮಿತಿ (ಬಿಎಸಿ) ಸಭೆಯಲ್ಲಿ ವಕ್ಫ್ ತಿದ್ದುಪಡಿ ಮಸೂದೆಯ ಚರ್ಚೆಗೆ 12 ಗಂಟೆಗಳ ಕಾಲಾವಕಾಶ ಹಾಗೂ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆ ಕುರಿತು ಚರ್ಚೆ ಮತ್ತು ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳ ■ 6ನೇ ಪುಟಕ್ಕೆ

ಮುಂದುವರೆದ ಬೆಲೆ ಏರಿಕೆ ಸರದಿ

ಮಧ್ಯರಾತ್ರಿಯಿಂದಲೇ ಡೀಸೆಲ್ ದರ 2 ರೂ. ಹೆಚ್ಚಳ



ಮೈಸೂರು, ಏ.1(ಎಸ್‌ಬಿಡಿ)– ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ಯಿಂದ ಕಂಗಾಲಾಗಿರುವ ರಾಜ್ಯದ ಜನರಿಗೆ ಡೀಸೆಲ್ ಬೆಲೆ ಏರಿಕೆ ಆತಂಕ ಹೆಚ್ಚಿಸಿದೆ.

ಡೀಸೆಲ್ ಬೆಲೆ ಮೇಲಿನ ಮಾರಾಟ ತೆರಿಗೆಯನ್ನು ಶೇ.18.44 ರಿಂದ ಶೇ.21.17 ರೂ.ಗೆ ಏರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ ಡೀಸೆಲ್ ದರ ಲೀಟರ್‌ಗೆ 2 ರೂ. ಏರಿಕೆಯಾಗಿದೆ. ಇಂದು ಮಧ್ಯರಾತ್ರಿಯಿಂದಲೇ ಹೊಸ ದರ ಅನ್ವಯವಾಗಲಿದೆ. ಮೈಸೂರಿನಲ್ಲಿ ಇಂದು ಮಧ್ಯಾಹ್ನ 88.58 ರೂ. ಇದ್ದ ಬೆಲೆ ರಾತ್ರಿ ವೇಳೆಗೆ 90.57 ರೂ.ಗೆ ಏರಿಕೆಯಾಗಿದೆ. ಅಂದರೆ 1.99 ರೂ. ಹೆಚ್ಚಾಗಿದೆ. ಬೆಂಗಳೂರಲ್ಲಿ 89.02ರೂ.ಗಳಿಂದ 91.02 ರೂ.ಗೆ ಏರಿಕೆಯಾಗಲಿದೆ. ಇಂದಿನಿಂದ ಹಾಲು, ಮೊಸರು, ವಿದ್ಯುತ್, ಟೋಲ್ ದರ ಏರಿಕೆ ಯಾಗಿದ್ದು ಜನ ಕಂಗಾಲಾಗಿದ್ದಾರೆ. ಇದರ ಬೆನ್ನಲ್ಲೇ ಡೀಸೆಲ್ ಮಾರಾಟ ತೆರಿಗೆಯನ್ನು ಹೆಚ್ಚಿಸುವ ಮೂಲಕ ರಾಜ್ಯ ಸರ್ಕಾರ ಗಾಯದ ಮೇಲೆ ಬರೆ ಎಳೆದಿದೆ. ಡೀಸೆಲ್ ಬೆಲೆ ಏರಿಕೆ ಪರಿಣಾಮ ಸಾಗಾಣಿಕೆ ವೆಚ್ಚ ಹೆಚ್ಚಾಗುವುದರಿಂದ ಸಹಜವಾಗಿ ಸರಕುಗಳು, ಹಣ್ಣು, ತರಕಾರಿಗಳ ಬೆಲೆಯೂ ಹೆಚ್ಚಾಗುವ ಸಾಧ್ಯತೆ ಇದೆ.

ಮೈಸೂರು ಮೆಡಿಕಲ್ ಕಾಲೇಜು ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವಾ ಶುಲ್ಕ ಹೆಚ್ಚಳ /ಪುಟ–2

ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ 41 ರೂ. ಇಳಿಕೆ

ನವದೆಹಲಿ, ಏ.1– ಬೆಲೆ ಏರಿಕೆಯಿಂದ ಕಂಗಾಲಾದ ಜನರಿಗೆ ಸಿಹಿ ಸುದ್ದಿಯೊಂದು ಸಿಕ್ಕಿದ್ದು, ವಾಣಿಜ್ಯ ಬಳಕೆಯ 19 ಕೆ.ಜಿ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆ 41 ರೂ. ಇಳಿಕೆಯಾಗಿದೆ.

ಇದರ ಜೊತೆಗೆ ತೈಲ ಕಂಪನಿಗಳು 19 ಕೆ.ಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು 41 ರೂ. ಇಳಿಸಿದೆ. ಹೊಸ ಬೆಲೆ ಏ.2 (ನಾಳೆಯಿಂದ) ರಿಂದ ಜಾರಿಯಾಗಲಿದೆ. ಇದಕ್ಕೂ ಮೊದಲು, ಫೆ.1ರಂದು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು 7 ರೂ. ಇಳಿಕೆ ಮಾಡಲಾಗಿತ್ತು. ಕಳೆದ ಡಿಸೆಂಬರ್‌ನಲ್ಲಿ ಸಿಲಿಂಡರ್‌ಗಳ ಬೆಲೆಯನ್ನು 62 ರೂ.ಗೆ ಏರಿಕೆ ಮಾಡಲಾಗಿತ್ತು. ಇದೀಗ ಮತ್ತೆ 41 ರೂ. ಇಳಿಕೆ ಮಾಡಲಾಗಿದೆ. ಹೊಸ ಬೆಲೆಯಿಂದಾಗಿ ರೆಸ್ಟೋರೆಂಟ್, ಹೋಟೆಲ್ ಮತ್ತು ವಾಣಿಜ್ಯ ಘಟಕಗಳಿಗೆ ಪ್ರಯೋಜನವಾಗಲಿದ್ದು, ಆದರೆ ದಿನಬಳಕೆಯ ಸಿಲಿಂಡರ್‌ನ ಬೆಲೆ ಬದಲಾಗದೆ ಉಳಿದಿದೆ.




ಸಿಎಂ, ಡಿಸಿಎಂ ದೆಹಲಿ ಭೇಟಿ

ಹನಿಟ್ರ್ಯಾಪ್ ಬಳಿಕದ ಈ ಭೇಟಿಗಿದೆ ವಿಶೇಷ ಮಹತ್ವ!

ಬೆಂಗಳೂರು, ಏ.1(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ಬಾರಿಯ ದೆಹಲಿ ಭೇಟಿ, ರಾಜ್ಯ ರಾಜಕೀಯ ಮತ್ತು ಸರ್ಕಾರದಲ್ಲಿ ಬಿರುಗಾಳಿ ಎಬ್ಬಿಸುವ ಲಕ್ಷಣಗಳು ಕಂಡುಬರುತ್ತಿವೆ.

ಹನಿಟ್ರ್ಯಾಪ್ ಪ್ರಕರಣ ರಾಷ್ಟ್ರವ್ಯಾಪಿ ಪ್ರಚಾರ ಪಡೆದು ಪಕ್ಷಕ್ಕೆ ಮುಜುಗರ ತಂದಿರುವ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಮತ್ತು ಕೆಲವು ಆಯ್ದ ಸಚಿವರನ್ನು ದೆಹಲಿಗೆ ಬರುವಂತೆ ಪಕ್ಷದ ವರಿಷ್ಠರು ಬುಲಾವ್ ಮಾಡಿದ್ದಾರೆ. ವರಿಷ್ಠರ ಆದೇಶದ ಮೇರೆಗೆ ನಾಳೆ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರುಗಳಾದ ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಎಂ.ಬಿ. ಪಾಟೀಲ್ ಸೇರಿದಂತೆ ಕೆಲವು ಸಚಿವರು ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳುತ್ತಿದ್ದಾರೆ.

ಹನಿಟ್ರ್ಯಾಪ್ ಪ್ರಕರಣ ಸಂಸತ್‌ನ ಉಭಯ ಸದನಗಳಲ್ಲಿ ಪ್ರಸ್ತಾಪಗೊಂಡಿರುವುದು ಹಾಗೂ ಸುಪ್ರೀಂಕೋರ್ಟ್ ಮೆಟ್ಟಿಲೇರುವಂತೆ ಆಗಿದ್ದು, ಪ್ರಕರಣದ ಬಗ್ಗೆ ಪೋಲಿಸರಿಗೆ ದೂರು ನೀಡಿದವರು ಸೂಕ್ತ ದಾಖಲೆಗಳನ್ನು ಒದಗಿಸುವಲ್ಲಿ ವಿಫಲರಾದ ವಿಚಾರದಲ್ಲಿ ಸಹಕಾರಿ ಸಚಿವ ರಾಜಣ್ಣ ಕೇಂದ್ರ ಬಿಂದುವಾಗಿದ್ದಾರೆ. ರಾಜಣ್ಣ ಅವರನ್ನು ಮಂತ್ರಿ ಸ್ಥಾನದಿಂದ ಕೈಬಿಟ್ಟು ಶಿಸ್ತು ಕ್ರಮಕ್ಕೆ ವರಿಷ್ಠರು



ಮುಂದಾಗಿದ್ದಾರೆ. ಆದರೆ, ಇದನ್ನು ಮುಖ್ಯಮಂತ್ರಿ ಅವರು ಹೇಗೆ ನಿಭಾಯಿಸುತ್ತಾರೆ ಎಂಬುದೇ ಕುತೂಹಲ.

ಸರ್ಕಾರಕ್ಕೆ ಎರಡು ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಂದ ಸಚಿವರ ಹಾಗೂ ಆಡಳಿತದ ಕಾರ್ಯವೈಖರಿ, ಪಕ್ಷ ಸಂಘಟನೆಯಲ್ಲಿ ಅಧಿಕಾರಸ್ಥರ ಪಾತ್ರದ ಕುರಿತು ಈಗಾಗಲೇ ಗೌಪ್ಯ ವರದಿ ತರಿಸಿಕೊಂಡಿದ್ದಾರೆ.

ಏಪ್ರಿಲ್ 3ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಅಧಿನಾಯಕ ರಾಹುಲ್‌ಗಾಂಧಿ, ಎಐಸಿಸಿ ಪ್ರಧಾನಕಾರ್ಯದರ್ಶಿ ಕೆಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರ ಜೊತೆ ಮಾತುಕತೆ ವೇಳೆ ಸರ್ಕಾರ ಮತ್ತು ಪಕ್ಷದ ವಿಚಾರಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಮತ್ತು ಸಚಿವರುಗಳ ಜೊತೆ ಈ ವಿಚಾರಗಳು ಪ್ರಸ್ತಾಪವಾಗಲಿವೆ. ಹನಿಟ್ರ್ಯಾಪ್ ಪ್ರಕರಣ, ಪಕ್ಷದ ವಿಧಾನಪರಿಷತ್ ಸದಸ್ಯರೊಬ್ಬರ ಹತ್ಯೆಗೆ ಸುಪಾರಿ ವಿಚಾರದ ಬಗ್ಗೆ ವರಿಷ್ಠರು ಮುಖ್ಯ ಮಂತ್ರಿ ಅವರಿಂದ ಮಾಹಿತಿ ಪಡೆಯಲಿದ್ದಾರೆ. ■ 6ನೇ ಪುಟಕ್ಕೆ

ಕಾಂತರಾಜ್ ವರದಿ ಜಾರಿ ವಿಷಯ ವರಿಷ್ಠರ ಮುಂದೆ ಪ್ರಸ್ತಾಪ

ಇದೆಲ್ಲಕ್ಕೂ ಮಿಗಿಲಾಗಿ ಕಾಂತರಾಜ್ ವರದಿ ಜಾರಿಗೊಳಿಸಲು ಸಿದ್ದರಾಮಯ್ಯ ವರಿಷ್ಠರ ಅನುಮೋದನೆಗೆ ಪ್ರಸ್ತಾವ ಮಂಡಿಸಲಿದ್ದಾರಂತೆ. ವರದಿ ಪ್ರಕಾರ ಅತ್ಯಂತ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವ ಅಗತ್ಯವಿದೆ. ಒಟ್ಟಾರೆ ಕರ್ನಾಟಕದಲ್ಲಿ ಶೇಕಡ 74ರಷ್ಟು ಮೀಸಲಾತಿ ಕಲ್ಪಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ. ತಮಿಳುನಾಡಿನಲ್ಲಿ ಶೇಕಡ 60ರಷ್ಟು ಮೀಸಲಾತಿ ಕಲ್ಪಿಸಿದ್ದಾರೆ. ನಾವು ಕಾಂತರಾಜ್ ವರದಿ ಆಧಾರವಾಗಿಟ್ಟುಕೊಂಡು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸಲು ಮುಂದಾಗಿದ್ದೇವೆ. ಕಾತರಾಜ್ ವರದಿ ಅನುಷ್ಠಾನಕ್ಕೆ ಒಪ್ಪಿಗೆ ನೀಡುವಂತೆ ಪಕ್ಷದ ವರಿಷ್ಠರಿಗೆ ಮಾಹಿತಿ ನೀಡಿ ರಾಹುಲ್ ಗಾಂಧಿ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಿ, ಒಪ್ಪಿಗೆ ಪಡೆಯಲು ಮುಂದಾಗಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕುಡಿದ ಅಮಲಲ್ಲಿ ಚಾಕುವಿನಿಂದ ಇರಿದು ಸ್ನೇಹಿತನ ಹತ್ಯೆ

ಬನ್ನೂರು ಟೌನ್‌ನಲ್ಲಿ ಸೋಮವಾರ ರಾತ್ರಿ ಘಟನೆ

ಮೈಸೂರು, ಏ.1(ಆರ್‌ಕೆ)–ಕ್ಷುಲ್ಲಕ ಕಾರಣಕ್ಕೆ ಕುಡಿದ ಮತ್ತಿನಲ್ಲಿ ಯುವಕ ನೋರ್ವ ಚಾಕು ವಿನಿಂದ ಇರಿದು ಸ್ನೇಹಿತ ನನ್ನೇ ಹತ್ಯೆಗೈದಿರುವ ಘಟನೆ ಬನ್ನೂರು ಟೌನ್‌ನಲ್ಲಿ ಸೋಮವಾರ ರಾತ್ರಿ ಸಂಭವಿಸಿದೆ.



ಬನ್ನೂರು ನಿವಾಸಿ ನಾಗೇಶ್ ಅವರ ಮಗ ವರುಣ್(23) ಹತ್ಯೆಗೀಡಾದ ಯುವಕ. ನಾರಾಯಣ ಅವರ ಮಗ ಪೋಷಕ್ ಎಂಬಾತ ಸೋಮವಾರ ತಡ ರಾತ್ರಿ 12.30 ಗಂಟೆಗೆ ಕುಡಿದು ಮನೆಗೆ ತೆರಳುವಾಗ ಮಾತಿಗೆ ಮಾತು ಬೆಳೆದು ಪೋಷಕ್ ಚಾಕುವಿನಿಂದ ಇರಿದು ಬನ್ನೂರಿನ ಸಂತೆ ಮೈದಾನ ಸಮೀಪ ಎಪಿಎಂಸಿ ಎದುರು ಹತ್ಯೆಗೈದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಬನ್ನೂರಿನ ಬಾರ್‌ವೊಂದರಲ್ಲಿ ಮನೋಜ್, ಚೇತನ್, ಮಹೇಂದ್ರ ಹಾಗೂ ಇನ್ನಿಬ್ಬರೊಂದಿಗೆ ಕುಡಿದ ವರುಣ್ ಮತ್ತು ಪೋಷಕ್ ಕ್ಷುಲ್ಲಕ ವಿಷಯಕ್ಕೆ ಮಾತಿನ ಚಕಮಕಿಯಾಗಿ ಸಮಾಧಾನ ವಾದರಾದರೂ, ಮನೆಗೆ ಹೋಗುವಾಗ ಪೋಷಕ್ ಎಂಬಾತ ವರುಣ್‌ಗೆ ಇರಿದು ಕೊಲೆಗೈದಿದ್ದಾನೆ. ವಿಷಯ ತಿಳಿಯುತ್ತಿ ದ್ದಂತೆಯೇ ಸ್ಥಳಕ್ಕೆ ಧಾವಿಸಿದ ಬನ್ನೂರು ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಸಾರ್ವಜನಿಕ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ದೇಹವನ್ನು ವಾರಸು ದಾರರಿಗೊಪ್ಪಿಸಿದರು. ಕೊಲೆ ಆರೋಪಿ ಪೋಷಕ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಅತ್ಯಾವಶ್ಯ ವೈದ್ಯಕೀಯ ಸೇವೆಗಳ ಶುಲ್ಕವೂ ಹೆಚ್ಚಳ

ಕೆ.ಆರ್.ಆಸ್ಪತ್ರೆಯೂ ಸೇರಿದಂತೆ ಮೈಸೂರು ಮೆಡಿಕಲ್ ಕಾಲೇಜಿನ ಆಸ್ಪತ್ರೆಗಳಲ್ಲಿ ಶೇ.5ರಷ್ಟು ದರ ದುಬಾರಿ

● ಎಕ್ಸರೇ 95ರಿಂದ 100 ರೂ., ಎಂಆರ್‌ಐ 2,970 ರಿಂದ 3,118 ರೂ., ಸಿಟಿ ಸ್ಕ್ಯಾನ್ 1,110 ರಿಂದ 1,115 ರೂ.ಗೆ ಹೆಚ್ಚಳ









ಮೈಸೂರು,ಏ.1(ಆರ್‌ಕೆ)–ಹಾಲು, ಮೊಸರು, ವಿದ್ಯುತ್, ಟೋಲ್ ಶುಲ್ಕ ಹೆಚ್ಚಿಸಿರುವ ಸರ್ಕಾರವು, ಅತ್ಯವಶ್ಯವಾದ ಆಸ್ಪತ್ರೆಗಳ ವೈದ್ಯಕೀಯ ಸೇವೆಗಳ ದರವನ್ನೂ ಏರಿಕೆ ಮಾಡಿದೆ. ಬಡವರಿಗೆ ಉಚಿತ ಚಿಕಿತ್ಸೆ ಮತ್ತು ವೈದ್ಯಕೀಯ ಸೇವೆ ನೀಡಿ ಅಮೂಲ್ಯ ಜೀವ ರಕ್ಷಿಸಬೇಕೆಂಬ ಮಹದುದ್ದೇಶದಿಂದ ರಾಜಮಹಾರಾಜರು ನಿರ್ಮಿಸಿದ ಕೃಷ್ಣರಾಜೇಂದ್ರ ಆಸ್ಪತ್ರೆ, ಚೆಲುವಾಂಬ ಹಾಗೂ ಕೃಷ್ಣಾಜಮ್ಮಣ್ಣಿ ಟಿಬಿ ಆಸ್ಪತ್ರೆಗಳ ವೈದ್ಯಕೀಯ ಸೇವೆಗಳ ಶುಲ್ಕವನ್ನೂ ಇಂದಿನಿಂದ ಸರ್ಕಾರ ಪರಿಷ್ಕರಿಸಿದೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC & RI) ಅಧೀನದ ಎಲ್ಲಾ ಆಸ್ಪತ್ರೆಗಳಲ್ಲಿನ ಚಿಕಿತ್ಸಾ ಸೇವೆಗಳ ಶುಲ್ಕವನ್ನು ಶೇ.5ರಷ್ಟು ಹೆಚ್ಚಿಸಲಾಗಿದೆ. ಅದರಂತೆ ಎಕ್ಸರೇ 95ರಿಂದ 100 ರೂ., ಎಂಆರ್‌ಐ ಸ್ಕ್ಯಾನಿಂಗ್ 2,970ರಿಂದ 3,118 ರೂ., ಸಿಟಿ ಸ್ಕ್ಯಾನ್ 1,110ರಿಂದ 1,115 ರೂ.ಗಳಿಗೇರಿಸಲಾಗಿದೆ. ಅದೇ ರೀತಿ ಬ್ಲಡ್‌ಕೌಂಟ್, ಲಿಪಿಡ್ ಪ್ರೊಫೈಲ್, ಥೈರಾಯ್ಡ್ ಟೆಸ್ಟ್, ರೀನಲ್ ಪ್ರೊಫೈಲ್ ಟೆಸ್ಟ್, ವಿಟಿ ಬಿ–12, ಪ್ರಾಸ್ಟರಸ್, ಟಿಎಸ್‌ಹೆಚ್, ಐಎಲ್ 6, ಯೂರಿನರಿ ಎಲೆಕ್ಟ್ರೋಲೈಟ್ಸ್ ಸೇರಿದಂತೆ ಇನ್ನಿತರ ಪರೀಕ್ಷೆಗಳ ದರವನ್ನು ಶೇ.5ರಷ್ಟು ಹೆಚ್ಚಿಸಲಾಗಿದೆ ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಿಣಿ ತಿಳಿಸಿದ್ದಾರೆ.

ಮೈಸೂರಲ್ಲಿ ಇಂದು ಪ್ರಭು ಜಗನ್ನಾಥಮೂರ್ತಿ ಪ್ರಾಣ ಪ್ರತಿಷ್ಠಾಪನೆ

ಮೈಸೂರು, ಏ.1(ಜಿಎ)–ಮೈಸೂರಿನ ವಿದ್ಯಾರಣ್ಯಪುರಂ ಮುಖ್ಯ ರಸ್ತೆಯಲ್ಲಿರುವ ಪುರಿ ಜಗನ್ನಾಥ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಏ.2ರಂದು ಪ್ರಭು ಜಗನ್ನಾಥ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮ ನೆರವೇರಲಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಘನಶ್ಯಾಂ ಪ್ರಧಾನ್ ವಿಷಯ ತಿಳಿಸಿ ಅಂದು ಬೆಳಗ್ಗೆ 8 ಗಂಟೆಯಿಂದ ಕಳಶಯಾತ್ರೆ, 9ಕ್ಕೆ ಮಂಡಲ ಪೂಜೆ ನಡೆಯಲಿದ್ದು, ನಂತರ 11 ಗಂಟೆಗೆ ಪ್ರಾಣ ಪ್ರತಿಷ್ಠಾಪನಾ ಯಜ್ಞಗಳು ನಡೆಯಲಿವೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯರಾದ ಭುವನೇಶ್ವರಿ, ಶೋಭಾ ಸುನೀಲ್ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಕರ್ತ ಗೋಪಾಲ ಕೃಷ್ಣ ಇದ್ದರು.

ಶ್ರೀ ಶಿವಕುಮಾರ ಸ್ವಾಮೀಜಿ ಜನ್ಮದಿನಾಚರಣೆ...



ತುಮಕೂರಿನ ಶ್ರೀ ಸಿದ್ಧಗಂಗೆಯ ಶ್ರೀ ಶಿವಕುಮಾರ ಮಹಾಸ್ವಾಮೀಜಿ ಜನ್ಮದಿನದ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಣೆ ಮಾಡಲಾಯಿತು. ಈ ವೇಳೆ ಎನ್.ಬೆಟ್ಟೇಗೌಡ, ನಾಗರಾಜ್ ವಿ.ಭೈರಿ, ಕಸಾಪ ಮಾಜಿ ಜಿಲ್ಲಾಧ್ಯಕ್ಷ ವೈ.ಡಿ.ರಾಜಣ್ಣ, ಚಂದ್ರಶೇಖರ್, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಉಪಸ್ಥಿತರಿದ್ದರು.



ಮೈಸೂರಿನ ಬೋಗಾದಿಯ ರವಿಶಂಕರ್ ಲೇಔಟ್ ಉದ್ಯಾನವನದಲ್ಲಿ ಜನಸೇವಕ ಯುವ ಬ್ರಿಗೇಡ್ ವತಿಯಿಂದ ಸಿದ್ದಗಂಗೆಯ ಡಾ. ಶಿವಕುಮಾರ ಸ್ವಾಮಿಗಳ ಹುಟ್ಟು ಹಬ್ಬದ ಪ್ರಯುಕ್ತ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಉದ್ಯಾನವನದ ಮರಗಳಲ್ಲಿ ಪಕ್ಷಿಗಳಿಗೆ ನೀರಿನ ವ್ಯವಸ್ಥೆ ಮಾಡಲಾಯಿತು. ಬಿಜೆಪಿ ಮುಖಂಡರಾದ ರಾಘವೇಂದ್ರ, ಯೋಗೇಶ್, ಅನಿತಾ, ಪ್ರಕಾಶ್, ರಾಜೇಶ್, ಮಂಜು, ವಿಶ್ವಣ್ಣ, ಮರಿಸ್ವಾಮಿ, ಮಂಜಣ್ಣ ಶ್ರೀಕಾಂತ್, ಕಿರಣ್ ಮಾಯ, ಮಲ್ಲೇಶ್, ಚಂದ್ರು ರಾಮಮೂರ್ತಿ ಶಾಸ್ತ್ರಿ ಇದ್ದರು.

ಏ.5ರಿಂದ ಮೈಸೂರಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟ

ಮೈಸೂರು, ಏ.1(ಜಿಎ)–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಸಹಯೋಗದಲ್ಲಿ ನಗರದ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಏ.5 ಮತ್ತು 6ರಂದು ಸರ್ಕಾರಿ ನೌಕರರ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಬಿ.ಅರುಣಕುಮಾರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10ಕ್ಕೆ ಆರಂಭವಾಗುವ ಕ್ರೀಡಾಕೂಟ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಉಪಸ್ಥಿತರಿರಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಕ್ರೀಡಾಕೂಟವನ್ನು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಕೃಷ್ಣದತ್ತ

ಮುಖ್ಯಮಂತ್ರಿ, ಕೇಂದ್ರ ಸಚಿವ, ಜಿಲ್ಲಾ ಉಸ್ತುವಾರಿ ಸಚಿವರು ಭಾಗಿ

ಚಾಮರಾಜ ಒಡೆಯರ್, ಸುನಿಲ್ ಬೋಸ್, ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್ ಚಿಕ್ಕಮಾದು ಮುತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕ್ರೀಡಾಕೂಟದಲ್ಲಿ 20ಕ್ಕೂ ಹೆಚ್ಚು ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ನಡೆಯಲಿವೆ. ಜಿಲ್ಲೆಯ ಎಲ್ಲಾ ಸರ್ಕಾರಿ ನೌಕರರಿಗೆ ಕ್ರೀಡಾಕೂಟದಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದ್ದು, ಯಾವುದೇ ನೋಂದಣಿ ಶುಲ್ಕ ಇರುವುದಿಲ್ಲ. ಏ.6 ರಂದು ಸಂಜೆ 4.30ಕ್ಕೆ ಕ್ರೀಡಾಕೂಟದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಜೇತರಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ತಿಳಿಸಿದರು.

ಸರ್ವೋತ್ತಮ ಸೇವಾ ಪ್ರಶಸ್ತಿ: ರಾಜ್ಯ ಸರ್ಕಾರಿ ಸೇವೆಯಲ್ಲಿ ಅತ್ಯುನ್ನತ ಸೇವೆ ಮಾಡಿದ ಹಾಗೂ ವಿಶೇಷ ಸಾಧನೆಗೈದ ರಾಜ್ಯ ಸರ್ಕಾರಿ ಅಧಿಕಾರಿ, ನೌಕರರಿಗೆ ರಾಜ್ಯ ಮಟ್ಟದಲ್ಲಿ 10 ಪ್ರಶಸ್ತಿ ಮತ್ತು ಜಿಲ್ಲಾ ಮಟ್ಟದಲ್ಲಿ ಒಟ್ಟು 30 ಪ್ರಶಸ್ತಿಗಳನ್ನು ಏ.21ರಂದು ಪ್ರದಾನ ಮಾಡಲಾಗುತ್ತದೆ. ಅದಕ್ಕಾಗಿ ಜಿಲ್ಲೆಯಿಂದ ಪ್ರತಿ ವರ್ಷದಂತೆ ಇಬ್ಬರನ್ನು ಆಯ್ಕೆ ಮಾಡಬೇಕಿದ್ದು, ಜಿಲ್ಲಾ ಸಮಿತಿ ರಾಜ್ಯಮಟ್ಟಕ್ಕೆ ಶಿಫಾರಸ್ಸು ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದ್ದು, ಏ.16 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿಸಲ್ಲಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯಾಧ್ಯಕ್ಷ ರಾಘವೇಂದ್ರ, ಖಜಾಂಚಿ ಕೆ.ಸಿ.ರವಿ, ಜಿಲ್ಲಾ ಕಾರ್ಯದರ್ಶಿ ನಾಗರಾಜು, ಕ್ರೀಡಾ ಕಾರ್ಯದರ್ಶಿ ಎ.ಶಿವರಾಜು, ಸಹ ಕಾರ್ಯದರ್ಶಿ ಕೆ.ಮಹೇಶ್, ಹಿರಿಯ ಉಪಾಧ್ಯಕ್ಷ ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...



ಮೈಸೂರಿನ ಅಶೋಕಪುರಂ ಆದಿಕರ್ನಾಟಕ ಮಹಾಸಂಸ್ಥೆ ವತಿಯಿಂದ ಸಂಘದ ಕಚೇರಿ ಆವರಣದಲ್ಲಿ ಮೈಸೂರು ಮಹಾನಗರಪಾಲಿಕೆ ಸಹಕಾರ ಸಂಘದ ಚುನಾವಣೆಯಲ್ಲಿ ಜಯಶೀಲರಾದ ಪ್ರಸಾದ್, ಯಶೋಧರ, ಡಿ.ಸುರೇಂದ್ರಕುಮಾರ್ ಅವರನ್ನು ಸಂಸ್ಥೆಯ ಅಧ್ಯಕ್ಷ ಸಿದ್ದರಾಜು.ಪಿ (ಸುನಿಲ್) ಗೌರವಿಸಿದರು. ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ರಾಜ್‌ಮೊಗ.ಡಿ, ಸಹಕಾರ್ಯದರ್ಶಿ ಜೆ.ಜಯಕುಮಾರ್, ಖಜಾಂಚಿ ಕೃಷ್ಣಮೂರ್ತಿ, ಸಲಹೆಗಾರರಾದ ಮಹಾಲಿಂಗಯ್ಯ, ಶಿವರುದ್ರ, ಟಿ.ವೆಂಕಟರಾಮು, ದೊಡ್ಡಗರಡಿ ಸಂಘದ ಅಧ್ಯಕ್ಷ ಮುಖಂಡ ಆರ್.ಸಿ.ಮಹೇಶ್, ಕಾರ್ಯದರ್ಶಿ ದೊರೆಸ್ವಾಮಿ, ಚಿಕ್ಕಗರಡಿ ಅಧ್ಯಕ್ಷ ಪಿ.ಗಂಗಾಧರ್, ಕಾರ್ಯದರ್ಶಿ ಸಿದ್ದೇಶ್, ಮುಖಂಡರಾದ ಈಶ್ವರ್, ವಿಶ್ವೇಶ್ವರಯ್ಯ, ಮಹದೇವು ಇನ್ನಿತರರಿದ್ದರು.

ನಾಳೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು,ಏ.1–ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಏ.3 ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಮಾಜಿ ಅಧ್ಯಕ್ಷ ಬಿ.ಗುರುಸ್ವಾಮಿ ಬಣ ಜಯಭೇರಿ

ಮೈಸೂರು, ಏ.1–ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಬಿ.ಗುರುಸ್ವಾಮಿ ಬಣ ಜಯಭೇರಿ ಬಾರಿಸಿದೆ.

ಭಾನುವಾರ ಮತ ಎಣಿಕೆ ನಡೆದಿದ್ದು, ನಿರ್ದೇಶಕರಾಗಿ ಬಿ.ಗುರುಸ್ವಾಮಿ, ಚಿಕ್ಕಣ್ಣ, ಅಂದನಿ, ಮಹೇಶ್, ನಾಗೇಶ್, ಡಿ.ಸಾಲುಂಡಿ ಚಂದ್ರು, ಕೆಂಪಮ್ಮ, ದೊಡ್ಡತಾಯಮ್ಮ ಆಯ್ಕೆಯಾಗಿದ್ದಾರೆ. ಆಯ್ಕೆಯಾದ ನಿರ್ದೇಶಕರನ್ನು ಅಭಿನಂದಿಸಲಾಯಿತು.



ಧನಗಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಜಯ ಗಳಿಸಿದ ಮಾಜಿ ಅಧ್ಯಕ್ಷ ಬಿ.ಗುರುಸ್ವಾಮಿ ಬಣದ ನೂತನ ನಿರ್ದೇಶಕರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮಾಜಿ ಅಧ್ಯಕ್ಷ ಬಿ.ಗುರುಸ್ವಾಮಿ ಮಾತನಾಡಿ, ಪಕ್ಷಭೇದ ಮರೆತು ನಮಗೆ ಸಹಕಾರ ನೀಡಿ ಆಯ್ಕೆ ಮಾಡಿದ್ದೀರಿ. ರೈತರ ಅಭಿವೃದ್ಧಿಯೇ ನಮ್ಮ ಗುರಿ. ಈ ಹಿಂದಿನ ನನ್ನ ಅವಧಿಯಲ್ಲಿ ಸಂಘಕ್ಕೆ ಹೊಸ ಕಟ್ಟಡ ಕಟ್ಟಿದ್ದೇವೆ. ರೈತರಿಗೆ, ಮಹಿಳಾ ಸಂಘಗಳಿಗೆ ಸಾಲ ನೀಡಿದ್ದೇವೆ. ಮುಂದೆಯೂ ಸಹಕಾರ ನೀಡಬೇಕು. ನಮ್ಮೆಲ್ಲರ ಗೆಲುವಿಗೆ ಸಹಕರಿಸಿದ ರೈತರಿಗೆ ಧನ್ಯವಾದ ತಿಳಿಸಿದರು. ಈ ಸಂದರ್ಭದಲ್ಲಿ ತಾ.ಪಂ. ಮಾಜಿ ಸದಸ್ಯರಾದ ಸಿ.ಎಂ.ಸಿದ್ದರಾಮೇಗೌಡ, ಜಿ.ಕೆ.ಬಸವಣ್ಣ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಸೋಮಣ್ಣ, ಬಸವರಾಜು, ಮಾಕಿ ಮಹದೇವ್, ಬಿ.ರವಿ, ನಂಜುಂಡೇಗೌಡ, ಕನಕೇಗೌಡ, ಧನಗಳ್ಳಿ ಬಸವರಾಜು, ರಾಜೇಗೌಡ ಹಾಗೂ ಗ್ರಾಮಸ್ಥರು ಇದ್ದರು.

ಏ.14ರಿಂದ ವಸಂತ ವಿಹಾರ ಬೇಸಿಗೆ ಶಿಬಿರ

ಮೈಸೂರು, ಏ.1– ಮೈಸೂರಿನ ಶ್ರೀ ರಾಮಕೃಷ್ಣಾಶ್ರಮವು ಏ.14ರಿಂದ 20ರ ವರೆಗೆ ಪ್ರೌಢಶಾಲಾ ಹಂತದ ಮಕ್ಕಳಿಗೆ ವಸಂತ ವಿಹಾರ ಬೇಸಿಗೆ ಶಿಬಿರ ಆಯೋಜಿಸಿದೆ. ಯಾದವಗಿರಿಯಲ್ಲಿರುವ ಆಶ್ರಮದಲ್ಲಿ ನಿತ್ಯ ಬೆಳಗ್ಗೆ 7.45ರಿಂದ ಮಧ್ಯಾಹ್ನ 1ರವರೆಗೆ ಶಿಬಿರ ನಡೆಯಲಿದೆ. ಶಿಬಿರದಲ್ಲಿ ವ್ಯಕ್ತಿತ್ವ ನಿರ್ಮಾಣ, ಯೋಗ, ಧ್ಯಾನ, ಚಿತ್ರಕಲೆ, ಸಂವಹನ ಕೌಶಲ, ಸೃಜನಾತ್ಮಕ ಕಲಿಕೆ ಮತ್ತು ದಿವ್ಯತ್ರಯರಾದ ಶ್ರೀ ರಾಮಕೃಷ್ಣ ಪರಮಹಂಸರು, ಶಾರದಾಮಾತೆ ಮತ್ತು ಸ್ವಾಮಿ ವಿವೇಕಾನಂದರ ಸಂದೇಶ ಇತ್ಯಾದಿ ವಿಷಯಗಳ ಬಗ್ಗೆ ವಿಷಯ ತಜ್ಞರು ಸಮಗ್ರ ತರಬೇತಿ ನೀಡಲಿದ್ದಾರೆ. ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಬಹುದು. ವಿವರ ಮತ್ತು ಹೆಸರು ನೋಂದಣಿಗೆ 0821– 241 7444, 241 2424 ಅನ್ನು ಸಂಪರ್ಕಿಸಬಹುದು.

ಯುಗಾದಿ, ರಂಜಾನ್ ಪ್ರಯುಕ್ತ ಶೂ ವರ್ಲ್ಡ್‌ನಲ್ಲಿ ಭಾರಿ ರಿಯಾಯಿತಿ ಮಾರಾಟ

ಮೈಸೂರು, ಏ.1–ಮೈಸೂರಿನ ಹೆಸರಾಂತ ಪಾದರಕ್ಷೆಗಳ ಮಾರಾಟ ಸಂಸ್ಥೆ ಶೂ ವರ್ಲ್ಡ್‌ನಲ್ಲಿ ಯುಗಾದಿ, ರಂಜಾನ್ ಪ್ರಯುಕ್ತ ಭಾರಿ ರಿಯಾಯಿತಿ ಮಾರಾಟ ಮೇಳ ಆಯೋಜಿಸಿದೆ.



ಶೂ ವರ್ಲ್ಡ್‌ನಲ್ಲಿ ಸ್ತ್ರೀ ಮತ್ತು ಪುರುಷರ ಗುಣಮಟ್ಟದ ಉತ್ತಮ ದರ್ಜೆಯ ಚಪ್ಪಲಿ, ಶೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ಖರೀದಿ ಮೇಲೆ 2+1 ಆಫರ್ (2 ಖರೀದಿಸಿದಾಗ 1 ಉಚಿತ) ನೀಡಲಾಗುತ್ತದೆ.

ರಾಮಸ್ವಾಮಿ ವೃತ್ತದ ಪ್ರೆಸ್ಟೀಜ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಯಲ್ಲಿ ಮಹಿಳೆಯರು, ಪುರುಷರು ಹಾಗೂ ಮಕ್ಕಳ ಗುಣಮಟ್ಟದ ಪಾದರಕ್ಷೆಗಳನ್ನು ರಿಯಾಯಿತಿ ಬೆಲೆಯಲ್ಲಿ ಮಾರಾಟ ಮಾಡಲಾಗುವುದು. ಶಾಲಾ–ಕಾಲೇಜು, ಆಸ್ಪತ್ರೆ, ಸ್ವಚ್ಛತಾ ಕಾರ್ಮಿಕರಿಗೆ ಹಾಗೂ ಕೈಗಾರಿಕಾ ಸಂಸ್ಥೆಗಳಿಗೆ ಗುಣಮಟ್ಟದ ಫುಟ್‌ವೇರ್‌ಗಳನ್ನು ಸಗಟು ದರದಲ್ಲಿ ಒದಗಿಸುತ್ತಿದೆ. ಈ ಆಕರ್ಷಕ ಮಾರಾಟ ಏ.13ರವರೆಗೆ ಚಾಲ್ತಿಯಲ್ಲಿರು ತ್ತದೆ. ಹೆಚ್ಚಿನ ಮಾಹಿತಿಗೆ ದೂ. 0821–2424252 ಸಂಪರ್ಕಿಸಬಹುದು.

ಏ.10ರಿಂದ ಕಲರವ ಮಕ್ಕಳ ಬೇಸಿಗೆ ಶಿಬಿರ

ಮೈಸೂರು, ಏ.1(ಜಿಎ)– ಮೈಸೂರಿನ ರಂಗಾಂತರಂಗ ಸಂಸ್ಥೆ ವತಿಯಿಂದ ಏ.10ರಿಂದ ಮೇ 10 ರವರೆಗೆ ಕಲರವ ಮಕ್ಕಳ ಬೇಸಿಗೆ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಯೋಜಕ ಕೆ. ಕೀರ್ತಿರಾಜ್ ಈ ವಿಷಯ ತಿಳಿಸಿ, ನಿತ್ಯ ಬೆಳಗ್ಗೆ 10ಗಂಟೆಯಿಂದ ರಿಂದ ಸಂಜೆ 4 ಗಂಟೆವರೆಗೆ ಶಿಬಿರ ನಡೆಯಲಿದೆ. ಈ ವೇಳೆ ನಾಟಕ, ಮೈಮ್, ಜನಪದ ಗೀತೆ, ಯೋಗ ಮತ್ತು ಧ್ಯಾನ, ನೃತ್ಯ, ಚಿತ್ರಕಲೆ ಮೊದಲಾದವನ್ನು ತರಬೇತಿ ನೀಡಲಾಗುವುದು. ಮಕ್ಕಳಿಗಾಗಿ ಸಿನಿಮಾ ವೀಕ್ಷಣೆ ಸಹ ಇರಲಿದೆ. ಹೀಗಾಗಿ ಹೆಚ್ಚಿನ ಮಾಹಿತಿ ಹಾಗೂ ನೋಂದಣಿಗೆ ದೂ. 97399 19004 ಅನ್ನು ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಎಂ.ಚಂದ್ರಶೇಖರ್, ಹಿರಣ್ಣಯ್ಯ, ಲೋಕನಾಥ್ ಮತ್ತಿತರರು ಉಪಸ್ಥಿತರಿದ್ದರು.


ನಿಧನ

ಚೌರೀರ ಫಿಲೋಮಿನಾ ಗಣಪತಿ



ಮೈಸೂರು, ಏ. 1– ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ಚೌರೀರ ಫಿಲೋಮಿನಾ ಗಣಪತಿ (ಕಂದ್ರತಂಡ) ಮಂಗಳವಾರ ಬೆಳಗ್ಗೆ ಬೆಂಗಳೂರಿನ ಕಮಾಂಡ್ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಮೃತರು ಪತಿ ಲೆಫ್ಟಿನೆಂಟ್ ಕರ್ನಲ್ ಚೌರೀರ ಎ.ಗಣಪತಿ (ನಿವೃತ್ತ), ಪುತ್ರ ಗೌತಮ್ ಅಯ್ಯಪ್ಪ, ಪುತ್ರಿ ಬರ್ಡಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ವಿಜಯನಗರದ ಮುಕ್ತಿಧಾಮದಲ್ಲಿ ನಾಳೆ (ಏ.2) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.04.2025 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2025 ರಿಂದ 12.04.2025
ವಿಶ್ವವಸು ನಾಮಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಅಧಿಕ ರಕ್ತದೊತ್ತಡ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ,. ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 16ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಲಲಿತಾ ಸಹಸ್ರನಾಮ ಪಾರಾಯಣ, ನವಾವರಣ ಪೂಜೆ, ಶ್ರೀಚಕ್ರಾರ್ಚನೆ ಮತ್ತು ಶ್ರೀ ದಶಮಹಾವಿದ್ಯಾ ಆವರಣ ಪೂಜೆ, ಸಂಜೆ 5.30 ರಿಂದ ಶ್ರೀ ಲಲಿತಾ ಪಂಚಮಿ ಪ್ರಯುಕ್ತ ಶ್ರೀ ದಶಮಹಾವಿದ್ಯಾ ಹೋಮ ಮತ್ತು ಶ್ರೀ ಲಲಿತಾ ಮಹಾಯಾಗ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮಿಪುರಂ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ದೇವರ ದಾಸಿಮಯ್ಯ ಜಯಂತಿ, ಘನ ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಕಾರ್ಯಕ್ರಮ ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್, ಶಾಸಕರಾದ ಸಿ. ಅನಿಲ್ ಕುಮಾರ್, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಶ್ರೀರಾಮ ಸೇವಾ ಮಂಡಲಿ ಚಾರಿಟಬಲ್ ಟ್ರಸ್ಟ್:** 31ನೇ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15 ರಿಂದ ನಿರಂಜಿನಿ ಭಾರ್ಗವ್–ಪ್ರೇರಣ ಪ್ರವೀಣ್–ಯಶಸ್ ಅವರಿಂದ ಗಾಯನ, ಸಂಜೆ 6.15 ರಿಂದ ವಿದುಷಿ ವೈ.ಜಿ. ಶ್ರೀಲತಾ ವೀಣಾ ವಾದನ, ವಿದ್ವಾನ್ ನಿಕ್ಷಿತ್ ಪುತ್ತೂರು–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ.ಮೊಹಲ್ಲಾ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ :** ಚಿತ್ರಕಲಾ ಶಿಬಿರ ಉದ್ಘಾಟನೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯದ ಅನ್ವಯ ಕಲೆ ಮುಖ್ಯಸ್ಥ ಸಿ. ಚಿಕ್ಕಣ್ಣ, ಮುಖ್ಯ ಅತಿಥಿಗಳು : ಪತ್ರಕರ್ತ ರಮೇಶ್ ಉತ್ತಪ್ಪ, ಸ್ಥಳ: ಜೆಎಸ್‌ಎಸ್ ಬಾಲಜಗತ್ ಶಾಲಾ ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀರಾಮಮಂದಿರ :** ಶ್ರೀ ರಾಮಚಂದ್ರಸ್ವಾಮಿಗಳವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಹನುಮಂತೋತ್ಸವ, ಕುಂಭಾಭಿಷೇಕ ಮಹೋತ್ಸವ, ಉದ್ಘಾಟನೆ : ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಅಘಹರಾನಂದಜೀ ಮಹಾರಾಜ್, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಬೆಳಗ್ಗೆ 9ಕ್ಕೆ ಗಣಪತಿ ಹೋಮ, ಸಂಜೆ 6.30ಕ್ಕೆ.

■ **ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ :** ಉದ್ಯೋಗ ಮೇಳ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಡಾ. ಬಿ. ಚಂದ್ರಶೇಖರ, ಉಪಸ್ಥಿತರು : ಡಿ. ಸಂತೋಷ್, ಪಿ. ಪ್ರಗತಿಗೌಡ, ಡಾ.ಎಸ್.ವಿ. ಮುರಳೀಧರ, ಡಾ. ಎನ್. ಶೋಭಲತಾ, ಎಂ. ವಿದ್ಯಾರಣ್ಯ, ಜಿ.ಎಸ್.ಚಂದ್ರಶೇಖರ್, ಡಾ.ಎ. ಉಷಾದೇವಿ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ. ಪುಟ್ಟರಾಜ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10 ರಿಂದ.

■ **ಬ್ರಾಹ್ಮಣ ಧರ್ಮ ಸಹಾಯ ಸಭಾ :** ಶ್ರೀ ಶಂಕರ ಜಯಂತಿ ಪ್ರಯುಕ್ತ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಸಾಮೂಹಿಕ ಉಪನಯನ, ಅಧ್ಯಕ್ಷತೆ : ಸಭಾ ಅಧ್ಯಕ್ಷ ಹೆಚ್. ಅಶ್ವಥ್‌ನಾರಾಯಣ, ಸ್ಥಳ: ಸಭಾ ಆವರಣ, ಬೆಳಗ್ಗೆ 9.30 ರಿಂದ ಸಂಜೆ 5 ರಿಂದ.

■ **ಶಾರದಾ ವಿಲಾಸ ಕಾಲೇಜು :** ಶಾರದೋತ್ಸವ–2025, ಉದ್ಘಾಟನೆ : ನಿವೃತ್ತ ಪ್ರಿನ್ಸಿಪಾಲ್ ಪ್ರೊ. ಎಂ. ಕೃಷ್ಣೇಗೌಡ, ಗೌರವ ಅತಿಥಿಗಳು : ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಕಾರ್ಯದರ್ಶಿ ಆರ್. ದಿನೇಶ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕಾ, ಸ್ಥಳ: ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ನ್ಯಾಷನಲ್ ಇಂಟಿಗ್ರೇಟೆಡ್ ಮೆಡಿಕಲ್ ಅಸೋಸಿಯೇಷನ್ :** ಆಯುರ್ ವೈದ್ಯ ಸಮ್ಮೇಳನ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೌರವ ಅತಿಥಿಗಳು : ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸ್ಥಳ: ಎಂಎಂಸಿ ಪ್ಲಾಟಿನಂ ಜ್ಯೂಬಿಲಿ ಸಭಾಂಗಣ, ಜೆ.ಕೆ. ಮೈದಾನ, ಬೆಳಗ್ಗೆ 8.30 ರಿಂದ.

■ **ಬ್ರಹ್ಮಶ್ರೀ ನಾರಾಯಣ ಗುರು ಯೋಗ ಮಂದಿರ ಟ್ರಸ್ಟ್:** ಷಟ್‌ಕ್ರಿಯಾ ಯೋಗ ಹಾಗೂ ಮುದ್ರಾಯೋಗ ಶಿಬಿರ, ಅಧ್ಯಕ್ಷತೆ : ಯೋಗಾಚಾರ್ಯ ಬಿ.ಶಾಂತರಾಮ್, ಸ್ಥಳ: ಮಂದಿರ ಆವರಣ, ನಿಮಿಷಾಂಬ ನಗರ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ರಂಗ ದಿಗ್ಗಜರು–ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮರೆಯಬಾರದ ಮಹನೀಯರು, ನಿರೂಪಣೆ–ಉಮೇಶ್. ಎಸ್.ಎಸ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ.ಶ್ರೀರಾಂಭಟ್, ಕೆ.ಟಿ. ಉದಯಕಿರಣ್, ವ್ಯಾಖ್ಯಾನ–ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ–ಮಹಾಯೋಗ, 8.35 ಚಿತ್ರಗೀತೆಗಳು, 9.00 ನಂದನ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, ಪ್ರಾಯೋಜಕರು: ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಮೈಸೂರು. ವಿಷಯ : ಬೇಸಿಗೆಯಲ್ಲಿ ಗರ್ಭಿಣಿಯರ ಯೋಗಕ್ಷೇಮ ಭಾಗವಹಿಸಿದ ತಜ್ಞರು ಡಾ.ಮಾಧುರಿ. ಎನ್, ಗೈನಕಾಲಜಿಸ್ಟ್ ಮತ್ತು ಫರ್ಟಿಲಿಟಿ ಸ್ಪೆಷಲಿಸ್ಟ್, ಅವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಮಿಥುನ್ ರಾಧಾಕೃಷ್ಣ –ಮ್ಯಾಂಡೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಸುಧಾ ಮಂಜುನಾಥ್, 12.45 ಜನಪದ ಸಂಗೀತ: ಟಿ.ನರಸೀಪುರ ತಾಲೂಕು ಬನ್ನೂರಿನ ಚಿಕ್ಕತಾಯಮ್ಮ ಮತ್ತು ಸಂಗಡಿಗರಿಂದ ಭೈರವೇಶ್ವರನ ಹಾಡು ಮತ್ತು ಸೋಬಾನೆ ಪದ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಎಂ.ಎಸ್.ಲಕ್ಷ್ಮೀಶ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು.ಶ್ರೀನಿವಾಸ್ ಮತ್ತು ಯು. ರಾಜೇಶ್–ಯುಗಳ ಮ್ಯಾಂಡೋಲಿನ್ ವಾದನ, 4.00 ಮಹಿಳಾರಂಗ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಮೇವು ಮೆಲುಕು–ಮೇವಿನ ಬೆಳೆಗಳ ಬೇಸಾಯ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಸುಸ್ಥಿರ ಹೈನುಗಾರಿಕೆಗಾಗಿ ಸಮತೋಲನ ಆಹಾರ ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಮಹದೇವಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಸಂಸತ್ ಸಮೀಕ್ಷಾ, 8.15 ಕರ್ನಾಟಕ ಶಾಸ್ತ್ರೀಯ ಸಂಗೀತ : ಟಿ. ಆರ್. ಮಹಾಲಿಂಗಮಂ–ಕೊಳಲು ವಾದನ, 9.30 ಕ್ರೀಡಾಲೋಕ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಸುದೀರ್ಘ ಸೇವೆ ಕಲ್ಪಿಸಿದ ಗರುಡ ವಾಹನಕ್ಕೆ ಹೃದಯಸ್ಪರ್ಶಿ ಬೀಳ್ಕೊಡುಗೆ!



ಮೈಸೂರಿನ ದೇವರಾಜ ಠಾಣೆ ಪೊಲೀಸರು, ಗರುಡ ವಾಹನವನ್ನು ಸೇವೆಯಿಂದ ಬೀಳ್ಕೊಟ್ಟರು.

ಮೈಸೂರು, ಏ.1(ಎಸ್‌ಬಿಡಿ)– ಸಹೋದ್ಯೋಗಿಗಳು ವರ್ಗಾವಣೆ ಅಥವಾ ನಿವೃತ್ತರಾದಾಗ ಅಭಿನಂದಿಸಿ, ಅವರೊಂದಿಗಿದ್ದ ಕ್ಷಣಗಳನ್ನು ನೆನೆದು ಭಾರವಾದ ಮನಸ್ಸಿನಿಂದ ಬೀಳ್ಕೊಡುವುದು ಸಹಜ. ಆದರೆ ಮೈಸೂರಿನ ಪೊಲೀಸರು, ಹತ್ತಾರು ವರ್ಷ ತಮ್ಮನ್ನು ಹೊತ್ತು ತಿರುಗಿದ ವಾಹನಕ್ಕೆ ಹೃದಯಸ್ಪರ್ಶಿ ವಿದಾಯ ಹೇಳುವ ಮೂಲಕ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ.

ನಗರದ ದೇವರಾಜ ಠಾಣೆ ಪೊಲೀಸರು, 15 ವರ್ಷ ಸೇವೆ ನೀಡಿದ ಗರುಡ ವಾಹನಕ್ಕೆ ಬೃಹತ್ ಹಾರ ಹಾಕಿ, ಪೂಜೆ ಸಲ್ಲಿಸಿ ಬೀಳ್ಕೊಟ್ಟರು. ಸಹೋದ್ಯೋಗಿಯೊಬ್ಬರು ನಿವೃತ್ತರಾಗಿದ್ದಾರೆಂಬಂತೆ ಭಾವುಕರಾಗಿದ್ದರು. ವಾಹನವನ್ನು ಚಾಲನೆ ಮಾಡಿದ್ದವರ ಮನಸ್ಸು ಮತ್ತಷ್ಟು ಭಾರವಾಗಿತ್ತು. ಗಸ್ತು ಹಾಗೂ ಕಾರ್ಯಾಚರಣೆ ಸಂದರ್ಭದಲ್ಲಿ ಈ ವಾಹನದಲ್ಲಿ ತೆರಳಿದ ಕೆಲ ಸನ್ನಿವೇಶಗಳನ್ನು ಸ್ಮರಿಸಿಕೊಂಡು, ನಮಿಸುವ ಮೂಲಕ ಬೀಳ್ಕೊಟ್ಟರು. ಈ ವೇಳೆ ಇನ್‌ಸ್ಪೆಕ್ಟರ್ ಕೆ.ಆರ್.ರಘು, ಸಬ್‌ಇನ್‌ಸ್ಪೆಕ್ಟರ್‌ಗಳಾದ ಜೈಕೀರ್ತಿ, ಪ್ರಭು ಹಾಗೂ ಸಿಬ್ಬಂದಿಗಳಿದ್ದರು.

ವಾಯುಮಾಲಿನ್ಯ ನಿಯಂತ್ರಣ, ಸಂಚಾರ ಸುರಕ್ಷತೆ ಇನ್ನಿತರ ಉದ್ದೇಶಗಳಿಂದಾಗಿ ನೋಂದಣಿಯಾಗಿ 15 ವರ್ಷ ಪೂರೈಸಿದ ವಾಹನಗಳ ಬಳಕೆಗೆ ನಿಷೇಧ ವಿಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಗರದ ವಿವಿಧ ಠಾಣೆಗಳಲ್ಲಿರುವ ಸುಮಾರು 40 ಗರುಡ ವಾಹನಗಳು ಕಾರ್ಯಾಚರಣೆ ಸ್ಥಗಿತಗೊಳಿಸಲಿವೆ. ಹಾಗೆಯೇ ಮುಂದಿನ ದಿನಗಳಲ್ಲಿ ಹೊಸ ವಾಹನಗಳೂ ರಸ್ತೆಗಿಳಿಯಲಿವೆ.

ಡಾ.ಶಿವಕುಮಾರ ಸ್ವಾಮೀಜಿಗಳ ಜಯಂತಿ ಆಚರಣೆ


ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ.ಶಿವಕುಮಾರಸ್ವಾಮೀಜಿ ಅವರ 118ನೇ ಜಯಂತಿಯನ್ನು ಮಂಗಳವಾರ ಆಚರಿಸಲಾಯಿತು.

ಮೈಸೂರು, ಏ.1(ಎಸ್‌ಪಿಎನ್)– ಮೈಸೂರು ವಿಶ್ವಮಾನವ ರಸ್ತೆಯಲ್ಲಿನ ಡಾ.ಶಿವಕುಮಾರ ಸ್ವಾಮೀಜಿ ವೃತ್ತದಲ್ಲಿ ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ. ಶಿವಕುಮಾರಸ್ವಾಮೀಜಿ ಅವರ 118ನೇ ಜಯಂತಿಯನ್ನು ಮಂಗಳವಾರ ಆಚರಿಸಲಾಯಿತು.

ಡಾ.ಶಿವಕುಮಾರ ಸ್ವಾಮೀಜಿ ಭಕ್ತವೃಂದದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್, ವೀರಶೈವ ಲಿಂಗಾಯತ ಮುಖಂಡರಾದ ಎನ್.ಜಿ.ಗಿರೀಶ್, ಕೆ.ವಿ.ಮಲ್ಲೇಶ್, ರವಿ, ಹೆಚ್.ಎಸ್.ಸುರೇಶ್, ಬಿ.ಎಸ್.ಪ್ರಶಾಂತ್, ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಪ್ರಫುಲ್ಲಚಂದ್ರ ಕುಮಾರ್, ಪ್ರೊ.ಕೆಂಪರಾಜು, ಗುರುಸ್ವಾಮಿ, ಐಎಲ್‌ಯುಎಫ್ ಅಧ್ಯಕ್ಷ ಮಹದೇವಸ್ವಾಮಿ, ದೀಪು, ಎಸ್.ಎಂ.ಜಂಬುಕೇಶ್ವರ್, ದೂರ ಶಿವಕುಮಾರ್, ವೀರೇಶ್, ಹಿರಿಯ ವಕೀಲ ಮಹದೇವಸ್ವಾಮಿ, ಮೂಗೂರು ನಂಜುಂಡಸ್ವಾಮಿ ಸೇರಿದಂತೆ ಅನೇಕ ಮುಖಂಡರಿದ್ದರು.

ಹಿರಿಯ ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್ ಮಾತನಾಡಿ, ತ್ರಿವಿಧ ದಾಸೋಹಿ ಶಿವಕುಮಾರಸ್ವಾಮೀಜಿ ಅವರ ಜೀವಿತಾವಧಿಯಲ್ಲಿ ಅನ್ನ, ಅಕ್ಷರ, ಆಧ್ಯಾತ್ಮವನ್ನು ಬೋಧಿಸುತ್ತ, ಜನಮನಗೆದ್ದಿದ್ದರು. ಸಿದ್ದಗಂಗಾ ಮಠದಲ್ಲಿ ಲಕ್ಷಾಂತರ ಮಕ್ಕಳಿಗೆ ಉಚಿತ ವಿದ್ಯಾದಾನ ಮಾಡಿ, ಬಡವರ ಪಾಲಿಗೆ ದೇವರಾಗಿದ್ದವರು ಎಂದರು. ಈ ವೇಳೆ ಅನ್ನಸಂತರ್ಪಣೆ ನೆರವೇರಿತು.

ಉತ್ತರ ಕರ್ನಾಟಕದ ಜನರಿಗಾಗಿ ಕೃಷ್ಣ, ಭೀಮಾ ನದಿಗೆ ನೀರು ಬಿಡಿ

ಮಹಾರಾಷ್ಟ್ರ ಸಿಎಂಗೆ ಸಿದ್ದರಾಮಯ್ಯ ಪತ್ರ

ಬೆಂಗಳೂರು: ಉತ್ತರ ಕರ್ನಾಟಕದ ಜಿಲ್ಲೆಗಳು ಕುಡಿಯುವ ನೀರಿನ ತೀವ್ರ ಕೊರತೆ ಎದುರಿಸುತ್ತಿದ್ದು, ಕುಡಿಯುವ ನೀರಿನ ಅಗತ್ಯ ಪೂರೈಸಲು ಕೊಯ್ನಾ ಮತ್ತು ಉಜ್ಜಯನಿ ಜಲಾಶಯಗಳಿಂದ ಕೃಷ್ಣಾ ಹಾಗೂ ಭೀಮಾ ನದಿಗಳಿಗೆ ನೀರು ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.



ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳು ಮಾರ್ಚ್ 2025 ರ ಆರಂಭದಿಂದಲೂ ಕುಡಿಯುವ ನೀರಿನ ತೀವ್ರ ಕೊರತೆ ಎದುರಿಸುತ್ತಿವೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿಗೆ ಬರೆದ ಪತ್ರದಲ್ಲಿ ಸಿಎಂ ಹೈಲೈಟ್ ಮಾಡಿದ್ದಾರೆ.

ಬೇಸಿಗೆ ಕಾಲದಲ್ಲಿ ಮಹಾರಾಷ್ಟ್ರ ಸರ್ಕಾರದ ಬೆಂಬಲದ ಅಗತ್ಯವನ್ನು ಒತ್ತಿ ಹೇಳಿದ ಸಿಎಂ, ಮನುಷ್ಯರು ಮತ್ತು ಜಾನುವಾರುಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಹಿಂದೆಯೂ ಕೃಷ್ಣಾ ನದಿಗೆ ನೀರು ಬಿಡುಗಡೆ ಮಾಡಿದ್ದಕ್ಕಾಗಿ ಮತ್ತು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಕ್ಕಾಗಿ ಧನ್ಯವಾದ ಹೇಳಿದ್ದಾರೆ.

ಪ್ರಸ್ತುತ, ಹೆಚ್ಚುತ್ತಿರುವ ತಾಪಮಾನ ಮತ್ತು ಹಿಪ್ಪರಗಿ ಬ್ಯಾರೇಜ್ ಮತ್ತು ಇತರ ಸ್ಥಳೀಯ ಜಲಾಶಯಗಳಲ್ಲಿ ಸಂಗ್ರಹವಾಗಿರುವ ನೀರು ಮುಂಗಾರು ಆರಂಭವಾಗುವವರೆಗೆ ಕೃಷ್ಣಾ ಜಲಾನಯನ ಪ್ರದೇಶದ ಉತ್ತರ ಕರ್ನಾಟಕ ಜಿಲ್ಲೆಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಸಾಕಾಗುವುದಿಲ್ಲ. ಹೀಗಾಗಿ, ಪರಿಸ್ಥಿತಿ ಹೆಚ್ಚು ಗಂಭೀರವಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕದ ಉತ್ತರ ಜಿಲ್ಲೆಗಳ ಜನ–ಜಾನುವಾರುಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು, ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ ಕನಿಷ್ಠ 2 ಟಿಎಂಸಿ ಮತ್ತು ಉಜ್ಜಯನಿ ಜಲಾಶಯದಿಂದ ಭೀಮಾ ನದಿಗೆ 1 ಟಿಎಂಸಿ ನೀರನ್ನು ಬಿಡುಗಡೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕೆಂದು ಎಂದು ಪತ್ರದ ಮೂಲಕ ಸಿಎಂ ಸಿದ್ದರಾಮಯ್ಯ ಅವರು ಮಹಾರಾಷ್ಟ್ರ ಸಿಎಂಗೆ ಮನವಿ ಮಾಡಿದ್ದಾರೆ.

ಸುಪ್ರೀಂನಲ್ಲಿ ಇಂದು ದರ್ಶನ್ ಜಾಮೀನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ

ನವದೆಹಲಿ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಸೇರಿ 7 ಆರೋಪಿಗಳಿಗೆ ಹೈಕೋರ್ಟ್ ನೀಡಿದ್ದ ಜಾಮೀನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಾಳೆ (ಏ.2) ನಡೆಯಲಿದೆ.



ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಸೇರಿ ಏಳು ಆರೋಪಿಗಳಿಗೆ ಹೈಕೋರ್ಟ್ ಜಾಮೀನು ನೀಡಿತ್ತು. ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬೆಂಗಳೂರು ಪೊಲೀಸರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದು, ಆರೋಪಿಗಳಿಗೆ ಮತ್ತೆ ಸಂಕಷ್ಟ ಎದುರಾಗುವಂತಿದೆ.

ಜಾಮೀನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ಮಾ.18ಕ್ಕೆ ನಡೆಯಬೇಕಿತ್ತು. ವಿಚಾರಣೆಗೆ ಪಟ್ಟಿಯಾಗದ ಹಿನ್ನೆಲೆ ದರ್ಶನ್ ಪ್ರಕರಣದಲ್ಲಿನ ರಾಜ್ಯದ ವಿಶೇಷ ವಕೀಲ ಅನಿಲ್ ನಿಶಾನಿ ಅರ್ಜಿ ವಿಚಾರಣೆ ನಡೆಸುವಂತೆ ಪ್ರಸ್ತಾಪಿಸಿದ್ದರು. ಇದಕ್ಕೆ ಉತ್ತರಿಸಿದ ಕೋರ್ಟ್ ಏ.2 ರಂದು ವಿಚಾರಣೆ ನಡೆಸಲಾಗುವುದು ಎಂದು ಹೇಳಿತ್ತು.

ಮಾ.18ಕ್ಕೂ ಮುನ್ನ ನಡೆದ ವಿಚಾರಣೆಯಲ್ಲಿ ಅರ್ಜಿ ವಿಚಾರಣೆಗೆ ಒಪ್ಪಿಕೊಂಡಿದ್ದ ಸುಪ್ರೀಂಕೋರ್ಟ್ ನಟ ದರ್ಶನ್ ಸೇರಿದಂತೆ ಇತರೆ ಆರೋಪಿಗಳಿಗೆ ನೋಟಿಸ್ ಜಾರಿ ಮಾಡಿತ್ತು. ಹೈಕೋರ್ಟ್‌ನಲ್ಲಿ ಗೆಲುವು ಪಡೆದಂತೆ ಸುಪ್ರೀಂ ಕೋರ್ಟ್‌ನಲ್ಲಿಯೂ ಗೆಲುವು ಪಡೆಯಲು ಖ್ಯಾತ ಹಿರಿಯ ವಕೀಲ ಕಪಿಲ್ ಸಿಬಲ್ ಅವರನ್ನು ದರ್ಶನ್ ಕುಟುಂಬದವರು ನೇಮಿಸಿಕೊಂಡಿದ್ದಾರೆ ಹಾಗೂ ಹೈಕೋರ್ಟ್‌ನಲ್ಲಿ ನಡೆದ ವಾದ ಪ್ರತಿವಾದದ ಎಲ್ಲ ದಾಖಲೆ ನೀಡಲಾಗಿದೆ ಎನ್ನಲಾಗಿತ್ತು. ಆದರೆ ಈ ಬಗ್ಗೆ ಸದ್ಯಕ್ಕೆ ಯಾವುದೇ ಬೆಳವಣಿಗೆ ಕಂಡು ಬಂದಿಲ್ಲ.

ನಟ ದರ್ಶನ್ 131 ದಿನಗಳ ಜೈಲುವಾಸದ ನಂತರ ವೈದ್ಯಕೀಯ ಕಾರಣಗಳನ್ನು ಉಲ್ಲೇಖಿಸಿ ಅ.30 ರಂದು ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ನಂತರ ಹೈಕೋರ್ಟ್ ಡಿ.13 ರಂದು ಜಾಮೀನು ಮಂಜೂರು ಮಾಡಿತ್ತು.

ನಟರು, ಕ್ರಿಕೆಟಿಗರು, ಉದ್ಯಮಿಗಳ ಬದಲು ಸಮಾಜಕ್ಕೆ ನಿಸ್ವಾರ್ಥವಾಗಿ ದುಡಿದವರು ಮಾದರಿಯಾಗಬೇಕು

- ಸಾಮಾಜಿಕ ಹೋರಾಟಗಾರ ನಟ ಅಹಿಂಸಾ ಚೇತನ್ ಘಂಟಾಘೋಷ
- ಪ್ರಾದೇಶಿಕ ರಾಜಕೀಯ ರೂಪುಗೊಳ್ಳುವ ಅನಿವಾರ್ಯತೆ ಇದೆ
- ಜನರ ಸಮಸ್ಯೆ ಬದಲು ವಿಧಾನಸಭೆಯಲ್ಲಿ 'ಹನಿಟ್ರ್ಯಾಪ್' ಚರ್ಚೆ ನಡೆಯಿತು; ಸಾಹಿತಿ ಶಿವಸುಂದರ್ ಬೇಸರ

ಮೈಸೂರು,ಏ.1(ಎಂಟಿವೈ)– ಪರ್ಯಾಯ ರಾಜಕೀಯ ವ್ಯವಸ್ಥೆ ಕಟ್ಟುವ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಸಮ ಸಮಾಜಕ್ಕಾಗಿ ರಾಜಕೀಯ ಚಳವಳಿ ಆರಂಭಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಸಾಮಾಜಿಕ ಹೋರಾಟಗಾರ, ನಟ ಅಹಿಂಸಾ ಚೇತನ್ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರಿನ ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಆಯೋಜಿಸಿದ್ದ 'ವಿದ್ಯಾರ್ಥಿ–ಯುವ ಜನರ ಸಮಸ್ಯೆ–ಸವಾಲು–ಪರಿಹಾರ' ಕುರಿತ ವಿಚಾರ ಸಂಕಿರಣವನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಂವಿಧಾನದ ಪ್ರಸ್ತಾವನೆಯ ಫೋಟೋ ವಿತರಿಸುವ ಮೂಲಕ ಚಾಲನೆ ನೀಡಿದರು

ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ಅಂಗಳ ಸಾಹಿತ್ಯ ಬಳಗ, ದೇವರತ್ನ ಫೌಂಡೇಷನ್ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ 'ವಿದ್ಯಾರ್ಥಿ–ಯುವ ಜನರ ಸಮಸ್ಯೆ–ಸವಾಲು–ಪರಿಹಾರ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಸಮ ಸಮಾಜ ನಿರ್ಮಾಣವಾಗಬೇಕು. ನಾವು ಸಮಾನತೆಯ ಸಮಾಜದ ಕಡೆ ಹೆಜ್ಜೆ ಇಡಬೇಕು. ಇಂತಹ ಹೆಜ್ಜೆ ಇಡುವ ವೇಳೆ ಜಾತಿ, ಧರ್ಮ, ಪಕ್ಷ, ಭಾಷೆ ಮುನ್ನೆಲೆಗೆ ಬರಬಾರದು. ಸಮಾಜದಲ್ಲಿ ಶಾಂತಿ ನೆಲೆಸುವುದರೊಂದಿಗೆ ಜನರ ಹಿತ ಕಾಯಲು ಪರ್ಯಾಯ ರಾಜಕೀಯ ವ್ಯವಸ್ಥೆ ಅಗತ್ಯವಿದೆ.

ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಮಹಾಡ್ ಕೆರೆ ಹೋರಾಟದ ನಂತರ ರಾಜಕೀಯ ಅಧಿಕಾರದ ಮಹತ್ವ ತಿಳಿದುಕೊಂಡರು. ತಮಿಳುನಾಡಿನಲ್ಲಿ ಪೆರಿಯಾರ್ ಅವರು ರಾಜಕೀಯ ಕ್ರಾಂತಿ ಮಾಡಿದರು. ಕಾನ್ಷಿರಾಂ ಉತ್ತರ ಪ್ರದೇಶವನ್ನು ರಾಜಕೀಯದ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡರು. ಈಗ ಪ್ರಾದೇಶಿಕ ರಾಜಕೀಯ ರೂಪುಗೊಳ್ಳುವ ಅಗತ್ಯ ಮತ್ತು ಅನಿವಾರ್ಯತೆ ಇದೆ ಎಂದರು.

ನಾಗರಿಕತೆ ಆರಂಭವಾಗಿ 12 ಸಾವಿರ ವರ್ಷಗಳಾಗಿದೆ. ಅಂದಿನಿಂದಲೂ ಲಿಂಗ ಅಸಮಾನತೆ, ಪುರುಷ ಪ್ರಧಾನ ವ್ಯವಸ್ಥೆ ಬೆಳೆದು ಬಂದಿದೆ. ಅದು ಇಂದಿಗೂ ಜೀವಂತವಾಗಿದೆ. ಬ್ರಾಹ್ಮಣ್ಯರಿಗೆ ಜನ್ಮ ಆಧಾರಿತ ಸೌಲಭ್ಯಗಳು ದೊರೆತವು. 300 ವರ್ಷಗಳಿಂದ ಬಂಡವಾಳಶಾಹಿ ವ್ಯವಸ್ಥೆ ಜಾರಿಯಲ್ಲಿದೆ. 100 ವರ್ಷದಿಂದ ಹಿಂದುತ್ವ, 75 ವರ್ಷದ ಭಾಷೆಯ ತಾರತಮ್ಯ ಕಾಣುತ್ತಿದ್ದೇವೆ ಎಂದು ತಿಳಿಸಿದರು.

ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ವ್ಯಾಪಾರೀಕರಣವಾಗಿದೆ. ರೋಹಿತ್ ಚಕ್ರತೀರ್ಥ ಮತ್ತು ಬರಗೂರು ರಾಮಚಂದ್ರಪ್ಪ ಪಠ್ಯ ಪುಸ್ತಕ ಸಮಿತಿಗಳಿಂದ ನಮಗೆ ನ್ಯಾಯ ಸಿಗಲಿಲ್ಲ. ವೈಜ್ಞಾನಿಕ ಪಠ್ಯ ಅಗತ್ಯ ಇದೆ. ಚಳವಳಿಗಳಿಂದ ನಾವೆಲ್ಲರೂ ಕಲಿಯಬೇಕು. ಸರ್ಕಾರಿ ಶಾಲೆಯಲ್ಲಿ ಓದಿದವರಿಗೆ ಸರ್ಕಾರಿ ಉದ್ಯೋಗ ಕೊಡಬೇಕು. ಸಿನಿಮಾ ನಟರು, ಕ್ರಿಕೆಟರ್, ಉದ್ಯಮಿಗಳು ಮಾದರಿಯಲ್ಲ. ಸಮಾಜಕ್ಕೆ ನಿಸ್ವಾರ್ಥದಿಂದ ದುಡಿದವರು ಮಾದರಿಯಾಗಬೇಕು. ಅಸಮಾನತೆ, ಅನ್ಯಾಯದ ವ್ಯವಸ್ಥೆ ನಮ್ಮ ವಿರೋಧಿ ಎಂದರು.

ಹನಿಟ್ರ್ಯಾಪ್ ಚರ್ಚೆ: ಸಾಹಿತಿ ಶಿವಸುಂದರ್ ಮಾತನಾಡಿ, ಲೋಕದ ಸಮಸ್ಯೆಗಳನ್ನು ಗೂಗಲ್‌ನಲ್ಲಿ ಹುಡುಕಬಾರದು, ಜಗತ್ತಿನಲ್ಲಿ ಹುಡುಕಬೇಕು. ಸದನದಲ್ಲಿ ಜನರ ಸಮಸ್ಯೆಗಳ ಚರ್ಚೆಗಳು ನಡೆಯುತ್ತಿಲ್ಲ. ಹನಿಟ್ರ್ಯಾಪ್ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಬೇಸರಿಸಿದರು.

ಈ ದೇಶದಲ್ಲಿ ಸಂವಿಧಾನದ ವಿರುದ್ಧವಾಗಿ ಆರ್ಥಿಕ ನೀತಿಗಳು ಇವೆ. ಸಂಪತ್ತು ಸಾಮೂಹಿಕವಾಗಿ ಹಂಚಿಕೆ ಆಗಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ, ಪ್ರತಿಯೊಬ್ಬರಿಗೂ ಉಚಿತ, ಕಡ್ಡಾಯ ಶಿಕ್ಷಣ ಕೊಡಬೇಕು ಎಂದು ಸಂವಿಧಾನದಲ್ಲಿ ಇದೆ. ಆದರೂ ಅವುಗಳನ್ನು ಏಕೆ ಕೊಡಲಿಲ್ಲ?. ನಮಗೆ ಉದ್ಯೋಗ ಕೊಡಿ ಎಂದರೆ ದೇವಸ್ಥಾನ ನಿರ್ಮಾಣ ಮಾಡಿ ಜಾಗಟೆ ಕೊಡುತ್ತಾರೆ. ಕಳೆದ ಮೂರು ವರ್ಷಗಳಿಂದ ಮಂಡ್ಯ ಮೈಸೂರನ್ನು ಕೇಂದ್ರವಾಗಿ ಇಟ್ಟುಕೊಂಡು ಸಂಚು ನಡೆಸುತ್ತಿದ್ದಾರೆ ಎಂದು ವಿಷಾದಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಸ್ವಯಂ ಉದ್ಯೋಗದಿಂದಲೇ ನಿರುದ್ಯೋಗ ಸಮಸ್ಯೆ ನಿವಾರಣೆ ಸಾಧ್ಯ. ಆದ್ದರಿಂದ ಯುವ ಜನರು ಉದ್ಯೋಗಿ ಆಗುವುದಕ್ಕಿಂತ ಉದ್ಯೋಗದಾತರಾಗಬೇಕು. ಉನ್ನತ ಶಿಕ್ಷಣ ಕೈಗಾರಿಕಾ ಉದ್ಯೋಗಕ್ಕೆ ಪೂರಕವಾಗಿ ರೂಪುಗೊಳ್ಳಬೇಕು. ಸ್ಥಳೀಯ ಉದ್ಯೋಗ ಸೃಷ್ಟಿಗೆ ಮೊದಲ ಆದ್ಯತೆ ನೀಡಬೇಕು. ಇದರಿಂದ ಸ್ಥಳೀಯ ಆರ್ಥಿಕ ಚಟುವಟಿಕೆಗಳು ವೃದ್ಧಿಗೆ ಸಾಧ್ಯವಾಗಲಿದೆ. ಬೆಂಗಳೂರಿನಂತಹ ಮಹಾನಗರಗಳಿಗೆ ವಲಸೆ ಹೋಗಿರುವ ಹಳ್ಳಿಯ ಯುವಕರನ್ನು ಮರಳಿ ಹಳ್ಳಿಕಡೆಗೆ ಕರೆತರಲು ಅನುಕೂಲವಾಗಲಿದೆ ಎಂದರು.

ಐಟಿ–ಬಿಟಿಯಿಂದ ದೊಡ್ಡ ಮಟ್ಟದ ಉದ್ಯೋಗ ಸೃಷ್ಟಿ ಸಾಧ್ಯವಿಲ್ಲ. ಅದು ಸಾಧ್ಯವಾಗುವುದು ಸಣ್ಣ ಕೈಗಾರಿಕೆಗಳಿಂದ ಮಾತ್ರ. ನವೋದ್ಯಮ ಎಂದರೆ ಬರೀ ಐಟಿ–ಬಿಟಿಯಷ್ಟೇ ಅಲ್ಲ, ಗ್ರಾಮಾಂತರ ಪ್ರದೇಶದಲ್ಲಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುವುದೂ ಸ್ಟಾರ್ಟ್‌ಅಪ್. ರಿಸ್ಕ್ ತೆಗೆದುಕೊಳ್ಳುವ ಮನೋಭಾವ ಬೆಳೆಸಿಕೊಂಡು ಹೊಸ ಪ್ರಯತ್ನಕ್ಕೆ ಯುವ ಜನರು ಮುಂದಾಗಬೇಕು ಎಂದು ಸಲಹೆ ನೀಡಿದರು.

ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಬೆಟ್ಟದಂತೆ ಇದ್ದ ನಮ್ಮ ಸಮಸ್ಯೆಗಳು ಈಗ ಪರ್ವತದಂತೆ ಬೆಳೆಯುತ್ತಿವೆ. ಇವುಗಳನ್ನು ಪ್ರಶ್ನಿಸಬೇಕಾದ ವಿದ್ಯಾರ್ಥಿ ಸಮೂಹ, ಯುವ ಜನರು ಸಾಮಾಜಿಕ ಜಾಲತಾಣದಲ್ಲಿ ಮುಳುಗಿದ್ದಾರೆ. ಗೂಗಲ್‌ನಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆಂದು ಮೈ ಮರೆಯುತ್ತಿದ್ದಾರೆ. ಭೂಮಿ, ಶಿಕ್ಷಣ, ಆರೋಗ್ಯ, ಉದ್ಯೋಗ ಸಮಸ್ಯೆ ಇತ್ಯರ್ಥಕ್ಕೆ ಕೂತು ಚರ್ಚೆ ಮಾಡಬೇಕು. ಜನಪ್ರತಿನಿಧಿಗಳು ಸದನದ ಒಳಗೆ ಹೋರಾಟ ಮಾಡಬೇಕು. ತಮ್ಮ ಸಮಸ್ಯೆ ಇತ್ಯರ್ಥಪಡಿಸದಿದ್ದರೆ ಸದನಕ್ಕೆ ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕರಾದ ಸವಿತಾ ಮಲ್ಲೇಶ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಜವರಪ್ಪ, ಅಂಗಳ ಸಾಹಿತ್ಯ ಬಳಗದ ವರಹಳ್ಳಿ ಆನಂದ, ವಕೀಲ ಶಿವಪ್ರಸಾದ್, ಪ್ರದೀಪ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮಕ್ಕಳಿಗೆ ಪ್ರಶ್ನಿಸುವ ವೇದಿಕೆ ಕಲ್ಪಿಸಿದರೆ ಜ್ಞಾನಾಭಿವೃದ್ಧಿಗೆ ನಾಂದಿಯಾಗಲಿದೆ

ಹಿರಿಯ ರಂಗಕರ್ಮಿ ಪ್ರೊ.ಎಸ್.ಆರ್.ರಮೇಶ್ ಅಭಿಮತ


ಎಳೆಯರ ಮೇಳ 2025ಕ್ಕೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷ ವೀರಣ್ಣ ಎಂ. ಅರ್ಕಸಾಲಿ ಚಾಲನೆ ನೀಡಿದರು.

ಮೈಸೂರು, ಏ.1(ಎಸ್‌ಪಿಎನ್)– ಪಾಠಶಾಲೆ ಕಲಿಕೆಗಿಂತ ಮಕ್ಕಳ ಶಿಬಿರ ಭಿನ್ನ. ಇಲ್ಲಿ ಪ್ರತಿಯೊಬ್ಬರ ಪಾಲ್ಗೊಳ್ಳುವಿಕೆ ಮುಖ್ಯ ಎಂದು ನಿವೃತ್ತ ಪ್ರಾಂಶುಪಾಲ, ಹಿರಿಯ ರಂಗಕರ್ಮಿ ಪ್ರೊ.ಎಸ್. ಆರ್.ರಮೇಶ್ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣದ ಮಂತ್ರ ಮಹರ್ಷಿ ಸಭಾಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಕಲಾಮಂಟಪದ ಸಹಯೋಗದೊಂದಿಗೆ ಏರ್ಪಡಿಸಿದ್ದ ಎಳೆಯರ ಮೇಳ 2025ಕ್ಕೆ ಚಾಲನೆ ನೀಡಿ ಮಾತನಾಡಿದರು.

ಮನುಷ್ಯನ ಬದುಕಿಗೆ ಅವಶ್ಯವಾಗಿರುವ ಅನೇಕ ವಿಷಯ ತಿಳಿಸಿಕೊಡುವುದು ಮುಖ್ಯವಾಗಿದೆ. ಅಂತೆಯೇ ಶಾಲೆ ಕೊಠಡಿಯಲ್ಲಿ ಮಕ್ಕಳ ಕಲಿಕೆಗಿಂತ ಮಕ್ಕಳ ಶಿಬಿರ ಭಿನ್ನ. ಇಲ್ಲಿ ಪಾಲ್ಗೊಳ್ಳುವಿಕೆ ಮುಖ್ಯವಾಗುತ್ತದೆ ಎಂದರು.

ಭವಿಷ್ಯದಲ್ಲಿ ಮಕ್ಕಳು ಯಾವ ಸಾಧನೆ ಮಾಡುವರು ಎಂದು ಊಹಿಸುವುದು ಕಷ್ಟ. ಆದರೆ, ಅವರಿಗೆ ಕಟ್ಟುವ, ಒಗ್ಗೂಡುವ ಕಲೆ ಹೇಳಿಕೊಡಬೇಕು. ಇಲ್ಲಿ ಕಲಿತದ್ದು ಮರೆಯಲು ಸಾಧ್ಯವಿಲ್ಲ. ತಿಳಿದುಕೊಳ್ಳುವ ಕುತೂಹಲ ಇರುತ್ತದೆ. ಒತ್ತಡ ಇರುವುದಿಲ್ಲ. ಪ್ರಶ್ನಿಸುವ ವೇದಿಕೆ ಸೃಷ್ಟಿಸಿ ನಾನಾ ರೀತಿಯಲ್ಲಿ ಉತ್ತರ ಕಂಡುಕೊಳ್ಳುವ ಜ್ಞಾನ ಮೂಡಲಿದೆ ಎಂದರು.

ಎಳೆಯರ ಮೇಳ ಉದ್ಘಾಟಿಸಿದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷ ವೀರಣ್ಣ ಎಂ. ಅರ್ಕಸಾಲಿ ಮಾತನಾಡಿ, ಎಳೆಯರ ಶಿಬಿರದಲ್ಲಿ ಪಾಲ್ಗೊಂಡಿರುವ ಮಕ್ಕಳು, ಕಲಿಕೆಗೆ ಮೊದಲ ಆದ್ಯತೆ ನೀಡಿ, ಈ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ ಎಂದರು.

ಈ ಶಿಬಿರದಲ್ಲಿ ರಂಗದಾಟಗಳು, ರಂಗಗೀತೆ, ನೃತ್ಯ, ನಾಟಕ, ಸಂವಾದ, ಕಥೆ ಹೇಳುವುದು. ಕಾವ್ಯ ರಚನೆ, ಮಕ್ಕಳ ಚಲನಚಿತ್ರ ಪ್ರದರ್ಶನ, ಮುಖವಾಡ ತಯಾರಿಕೆ, ಜೇಡಿಮಣ್ಣಿನ ಕಲೆ, ಕರಕುಶಲ ವಸ್ತು ನಿರ್ಮಾಣ, ಪವಾಡ ರಹಸ್ಯ ಬಯಲು, ಪರಿಸರ ವೀಕ್ಷಣೆ, ಮಕ್ಕಳ ಸಂತೆ ಸೇರಿದಂತೆ ಆಟಗಳನ್ನು ಶಿಬಿರದಲ್ಲಿ ಕಲಿಯಬಹುದು ಎಂದು ಆಶಿಸಿದರು.

ವೇದಿಕೆಯಲ್ಲಿ ಚಂದ್ರಶೇಖರಾಚಾರ್, ಎಂ.ಗುರುಸ್ವಾಮಿ, ಮಂಜುನಾಥ (ಕಾಚಕ್ಕಿ), ಶಕುಂತಲಾ ಹೆಗಡೆ, ಬಿ.ಜೀವನ್ ಕುಮಾರ್, ಬಿ.ಪ್ರಶಾಂತ್ ಸೇರಿದಂತೆ ಇತರರಿದ್ದರು.

ಖದೀಮನ ಬಂಧನ: 3 ದ್ವಿಚಕ್ರ ವಾಹನ ವಶಕ್ಕೆ

ಮೈಸೂರು, ಏ.1(ಎಸ್‌ಪಿಎನ್)– ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಬಂಧಿಸಿ, ಈತನಿಂದ 3 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ವಾಹನಗಳ ಕಳವು ಸಂಬಂಧ ಪೊಲೀಸ್ ತಂಡವನ್ನು ರಚಿಸಲಾಗಿತ್ತು ಸದರಿ ತಂಡವು ಮಾ.28ರಂದು ಬಿಎಂ ಆಸ್ಪತ್ರೆಯ ಬಳಿ ಪಾರ್ಕ್ ಬಳಿಯ ಗಸ್ತಿನಲ್ಲಿರುವಾಗ ಅಲ್ಲಿರುವ ವಾಹನಗಳ ಪಾರ್ಕಿಂಗ್‌ನಲ್ಲಿ ಗಮನಿಸಿದಾಗ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಆಸಾಮಿಯನ್ನು ಪೊಲೀಸರು ವಶಕ್ಕೆ ಪಡೆದು, ವಿಚಾರಣೆ ನಡೆಸಿದ್ದಾರೆ.

ಈ ವೇಳೆ ಜಯಲಕ್ಷ್ಮೀಪುರಂ ಠಾಣೆ ವ್ಯಾಪ್ತಿಯ 2 ದ್ವಿಚಕ್ರ ವಾಹನ, ಮೈಸೂರು ಗ್ರಾಮಾಂತರ ಠಾಣೆ ವ್ಯಾಪ್ತಿಗೆ ಸೇರಿದ ಒಂದು ದ್ವಿಚಕ್ರ ವಾಹನವನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಈ ಪತ್ತೆ ಕಾರ್ಯದಲ್ಲಿ ನರಸಿಂಹರಾಜ ವಿಭಾಗದ ಎಸಿಪಿ ಅಶ್ವಥ್ ನಾರಾಯಣ್ ನೇತೃತ್ವದಲ್ಲಿ ಜಯಲಕ್ಷ್ಮೀಪುರಂ ಠಾಣೆ ಇನ್‌ಸ್ಪೆಕ್ಟರ್ ಕುಮಾರ್, ಪಿಎಸ್‌ಐ ಸ್ಮಿತಾ, ಎಎಸ್‌ಐ ರಾಜೇಗೌಡ ಹಾಗೂ ಸಿಬ್ಬಂದಿಗಳಾದ ಅಭಿಷೇಕ್, ಬೆಂಜಮಿನ್, ಎಂ.ಡಿ.ರವಿ, ಎಚ್.ಕೆ.ಶ್ರೀನಿವಾಸ, ದೇವರಾಜು, ಎಸ್.ರಾಜೇಶ್, ಸೋಮಣ್ಣ ಕುಮಾರ್, ಬಿ.ಕೆ.ರವಿ, ಕೆ.ಎಂ.ಮಂಜುನಾಥ್, ತಾಂತ್ರಿಕ ವಿಭಾಗದ ಸಿಬ್ಬಂದಿ ಪಿ.ಕುಮಾರ್ ಸೇರಿದಂತೆ ಇತರರಿದ್ದರು.

ಇಂದು ವಕ್ಫ್ ಮಸೂದೆ ತಿದ್ದುಪಡಿ ಮಂಡನೆ

ಮುಂದಿನ 3 ದಿನ ಲೋಕಸಭೆಗೆ ಗೈರಾಗದಂತೆ ಸಂಸದರಿಗೆ ಕಾಂಗ್ರೆಸ್ ವಿಪ್ ಜಾರಿ!

ನವದೆಹಲಿ: ಕೇಂದ್ರ ಸರ್ಕಾರವು ವಕ್ಫ್ ಮಸೂದೆ ತಿದ್ದುಪಡಿಗಳನ್ನು ಲೋಕಸಭೆಯಲ್ಲಿ ಮಂಡಿಸಲು ಮುಂದಾಗಿದ್ದು ಇದರ ನಡುವೆ ಕಾಂಗ್ರೆಸ್ ಇಂದು ಲೋಕಸಭೆಯಲ್ಲಿನ ತನ್ನ ಎಲ್ಲಾ ಸಂಸದರಿಗೆ ವಿಪ್ ಜಾರಿ ಮಾಡಿದೆ. ಮುಂದಿನ ಮೂರು ದಿನಗಳವರೆಗೆ ಕಾಂಗ್ರೆಸ್ ಸಂಸದರು ಸದನಕ್ಕೆ ಗೈರಾಗದಂತೆ ಎಚ್ಚರಿಸಿದೆ.

ವಿವಾದಾತ್ಮಕ ವಕ್ಫ್ (ತಿದ್ದುಪಡಿ) ಮಸೂದೆಯನ್ನು ನಾಳೆ ಲೋಕಸಭೆಯಲ್ಲಿ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದ ನಂತರ ಕಾಂಗ್ರೆಸ್ ಪಕ್ಷವು ವಿಪ್ ಜಾರಿ ಮಾಡಿದೆ. ಈ ಸಂಬಂಧ ವಿರೋಧ ಪಕ್ಷಗಳು ದೊಡ್ಡ ಸಭೆ ನಡೆಸಿದ್ದು, ವಕ್ಫ್ ಮಸೂದೆಯಲ್ಲಿ ಸರ್ಕಾರವನ್ನು ಹೇಗೆ ಎದುರಿಸುವುದು ಎಂಬುದರ ಕುರಿತು ಕಾರ್ಯತಂತ್ರ ರೂಪಿಸಲಾಗಿದೆ.

ಬುಧವಾರ, ಗುರುವಾರ ಮತ್ತು ಶುಕ್ರವಾರ ಅಂದರೆ ಏಪ್ರಿಲ್ 2, 3 ಮತ್ತು 4, 2025ರಂದು ಲೋಕಸಭೆಯಲ್ಲಿ ಬಹಳ ಮುಖ್ಯವಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು. ಲೋಕಸಭೆಯಲ್ಲಿರುವ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಈ ಮೂರು ದಿನವೂ ಬೆಳಿಗ್ಗೆ 11 ಗಂಟೆಯಿಂದ ಸದನದಲ್ಲಿ ಹಾಜರಿದ್ದು ಪಕ್ಷದ ನಿಲುವನ್ನು ಬೆಂಬಲಿಸುವಂತೆ ವಿನಂತಿಸಲಾಗಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕ ಕೆ. ಸುರೇಶ್ ಹೊರಡಿಸಿದ ವಿಪ್‌ನಲ್ಲಿ ತಿಳಿಸಿದ್ದಾರೆ.

10 ತಿಂಗಳ ನಂತರ ಮೈಸೂರು ಸೇರಿ ರಾಜ್ಯಾದ್ಯಂತ 60ಕ್ಕೂ ಹೆಚ್ಚು ಇನ್‌ಸ್ಪೆಕ್ಟರ್, ಡಿವೈಎಸ್‌ಪಿಗಳಿಗೆ ಸ್ಥಳ ನಿಯೋಜನೆ!

- ಸದನದಲ್ಲಿ ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಪ್ರಸ್ತಾಪದಿಂದ ಎಚ್ಚೆತ್ತ ಸರ್ಕಾರ
- 2024ರ ಜೂನ್‌ನಿಂದ 2025ರ ಮಾರ್ಚ್ 24ರವರೆಗೆ ವರ್ಗಾವಣೆಯಾದವರಿಗೆ ಸ್ಥಳ ನಿಯುಕ್ತಿ ಇಲ್ಲ; ಸಂಬಳವೂ ಇಲ್ಲ
- ಕೆಲವರಿಗೆ ಸ್ಥಳ ನಿಯೋಜನೆ ಮಾಡಿದ್ದರೂ ವರದಿ ಮಾಡಿಕೊಳ್ಳದೇ ರಜೆ (ಸಿಕ್ ಲೀವ್)ಯಲ್ಲಿದ್ದಾರೆ

ಎಸ್.ಟಿ.ರವಿಕುಮಾರ್

ಮೈಸೂರು, ಏ.1– ವರ್ಗಾವಣೆಯಾಗಿ 10 ತಿಂಗಳಾದರೂ ಹಲವು ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಡಿವೈಎಸ್‌ಪಿ, ಎಸಿಪಿಗಳಿಗೆ ಸ್ಥಳ ನಿಯೋಜನೆ ಮಾಡದೇ ಇದ್ದುದರಿಂದ ಕರ್ತವ್ಯದ ಆತ್ಮವಿಶ್ವಾಸವನ್ನೇ ಕಳೆದುಕೊಂಡು ನಿರಾಶರಾಗಿದ್ದರು.



2024ರ ಜೂನ್‌ನಲ್ಲಿ ವಿವಿಧ ಹಂತಗಳಲ್ಲಿ ಸರ್ಕಾರವು ಮೈಸೂರು ನಗರ, ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಸಿವಿಲ್, ಸಂಚಾರ, ಲೋಕಾಯುಕ್ತ, ಸಿಐಡಿ, ರಾಜ್ಯ ಗುಪ್ತವಾರ್ತೆ(ಸ್ಟೇಟ್ ಇಂಟಲಿಜೆನ್ಸ್), ಆಂತರಿಕ ಭದ್ರತಾ ವಿಭಾಗ(ಇಂಟರ್ನಲ್ ಸೆಕ್ಯುರಿಟಿ ಡಿವಿಜನ್), ಕರ್ನಾಟಕ ರಾಜ್ಯ ಮೀಸಲು ಪಡೆ(ಕೆಎಸ್‌ಆರ್‌ಪಿ), ಜಿಲ್ಲಾ ಅಪರಾಧ, ದಾಖಲೆ ವಿಭಾಗ(ಡಿಸಿಆರ್‌ಬಿ), ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಹಾಗೂ ಗೃಹ ಇಲಾಖೆಯಡಿ ಬರುವ ಹಲವು ಪೊಲೀಸ್ ಘಟಕಗಳ 60ಕ್ಕೂ ಹೆಚ್ಚು ಡಿವೈಎಸ್‌ಪಿ/ಎಸಿಪಿ ಹಾಗೂ ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿತ್ತು.

ಆದರೆ, ಈ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿ ಮಾಡದೇ ಆಯಾ ಘಟಕಗಳ ಕೇಂದ್ರ ಸ್ಥಾನ (ಬೆಂಗಳೂರು)ದಲ್ಲಿ ವರದಿ ಮಾಡಿಕೊಳ್ಳುವಂತೆ ನಿರ್ದೇಶನ ನೀಡಿದ್ದರಿಂದ ಅವರು, ಕೆಸಿಎಸ್‌ಆರ್ (ಕರ್ನಾಟಕ ಸಿವಿಲ್ ಸರ್ವಿಸ್ ರೂಲ್ಸ್) ಪ್ರಕಾರ ಕೇಂದ್ರ ಕಚೇರಿಯಲ್ಲಿ ವರದಿ ಮಾಡಿಕೊಂಡು ಸರ್ಕಾರದ ಮುಂದಿನ ಅಧಿಸೂಚನೆಗಾಗಿ ಕಾಯುತ್ತಿದ್ದರು.

ಆ ಸಮಯದಲ್ಲಿ ನಿತ್ಯ ಬೆಂಗಳೂರಿಗೆ ತೆರಳಿ ಕೇಂದ್ರ ಕಚೇರಿಯಲ್ಲಿ ಹಾಜರಾತಿ ಹಾಕಿ, ತಮ್ಮ ಮನೆಗಳಿಗೆ ಹಿಂದಿರುಗುತ್ತಿದ್ದರು. ಸ್ಥಳ ನಿಯುಕ್ತಿಗೊಳ್ಳದವರ ಪೈಕಿ ಕೆಲವರು ಸ್ಥಳೀಯ ಶಾಸಕರು, ಸಚಿವರಿಂದ ಶಿಫಾರಸು ಪತ್ರ ಪಡೆದು, ಸರ್ಕಾರದ ಹಂತದಲ್ಲಿ ಸ್ಥಳ ನಿಯೋಜನೆ ಮಾಡಿಸಿಕೊಂಡಿದ್ದರು.

ಬಹುತೇಕರಿಗೆ ಸ್ಥಳ ನಿಯುಕ್ತಿಗೊಳಿಸದ ಕಾರಣ, ಹೈರಾಣವಾಗಿದ್ದ ಪೊಲೀಸ್ ಅಧಿಕಾರಿಗಳಿಗೆ ಇಲಾಖೆಯು ಕಳೆದ 10 ತಿಂಗಳಿಂದ ಸಂಬಳವನ್ನು ನೀಡದೇ, ನಿತ್ಯ ಹೆಡ್ ಆಫೀಸ್‌ಗೆ ಬಂದು ಅಟೆಂಡೆನ್ಸ್ ಹಾಕಬೇಕೆಂದು ತಾಕೀತು ಮಾಡಿದ್ದರಿಂದ ಅವರು ರಾಜ್ಯದ ವಿವಿಧ ಭಾಗಗಳಿಂದ ಬಸ್ಸು, ರೈಲುಗಳಲ್ಲಿ ಓಡಾಡುವಂತಾಗಿತ್ತು.

ಇತ್ತ ಕೆಲಸವೂ ಇಲ್ಲ, ಅತ್ತ ಸಂಬಳವೂ ಇಲ್ಲದೇ ಕಂಗಾಲಾಗಿದ್ದ ಕೆಲ ಅಧಿಕಾರಿಗಳು ಅಧಿಕಾರಸ್ಥರ ಮನೆ ಬಾಗಿಲಲ್ಲಿ ಕಾದು ಸ್ಥಳ ನಿಯುಕ್ತಿಗೆ ಶಿಫಾರಸು ಮಾಡಿಸಲು ಹೆಣಗಾಡುತ್ತಿದ್ದರು.

ಸದಾ ಒತ್ತಡದ ಕೆಲಸದಲ್ಲಿ ನಿರತರಾಗಿದ್ದ ಪೊಲೀಸ್ ಅಧಿಕಾರಿಗಳು, ಕೆಲಸವಿಲ್ಲದೆ ಸುಖಾಸುಮ್ಮನೆ ಕಾಲ ಕಳೆಯುವುದು ಕಷ್ಟ, ಕೆಲಸದ ಮೇಲಿನ ಆಸಕ್ತಿ, ಸ್ಫೂರ್ತಿ ಕಳೆದುಕೊಂಡು ಬೇಸತ್ತಿದ್ದೂ ಉಂಟು. 10 ತಿಂಗಳು ಕೆಲಸವಿಲ್ಲದೆ ಕಾಲ ಕಳೆಯುವುದು ಕ್ರಿಯಾಶೀಲ ಅಧಿಕಾರಿಗಳಿಗೆ ಮುಜುಗರ ಪರಿಸ್ಥಿತಿ ಉಂಟಾಗುತ್ತಿತ್ತು.

ಈ ನಡುವೆ ಮೈಸೂರಿನ ಕೆ.ಆರ್. ವಿಧಾನಸಭಾ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ಇತ್ತೀಚೆಗೆ ವಿಧಾನಸಭೆಯಲ್ಲಿ ಸದನದಲ್ಲಿ ಶೂನ್ಯ ವೇಳೆಯಲ್ಲಿ ವರ್ಗಾವಣೆ ಮಾಡಿರುವ ಪೊಲೀಸ್ ಅಧಿಕಾರಿಗಳಿಗೆ ಸ್ಥಳ ನಿಯೋಜನೆ ಮಾಡದೇ ಸರ್ಕಾರ ವಿಳಂಬಧೋರಣೆ ಅನುಸರಿಸುತ್ತಿರುವುದೇಕೆ ಎಂದು ಪ್ರಸ್ತಾಪಿಸಿದ ಬಳಿಕ ಇದೀಗ 10 ತಿಂಗಳ ನಂತರ ಸರ್ಕಾರ ಆ ಎಲ್ಲಾ 60ಕ್ಕೂ ಹೆಚ್ಚು ಅಧಿಕಾರಿಗಳಿಗೆ ಸ್ಥಳ ತೋರಿಸಿದೆ. ಆದರೆ, ಅಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಆಸಕ್ತಿ ತೋರದ ಕೆಲ ಇನ್‌ಸ್ಪೆಕ್ಟರ್‌ಗಳು, ಡಿವೈಎಸ್‌ಪಿಗಳು ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಸಲ್ಲಿಸಿ, ನಿಯೋಜಿತ ಸ್ಥಳಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಶಾಸಕರು, ಸಚಿವರ ಶಿಫಾರಸಿಗೆ ಯತ್ನಿಸುತ್ತಿದ್ದಾರೆ.

ಕರ್ನಾಟಕ ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್) ಪ್ರಕಾರ ವರ್ಗಾವಣೆಗೊಂಡಾಗಲೇ ಅಧಿಕಾರಿ ಅಥವಾ ಸಿಬ್ಬಂದಿಗಳಿಗೆ ಬೇರೆಡೆ ಸ್ಥಳ ನಿಯೋಜಿಸಬೇಕು. ಒಂದು ವೇಳೆ ಸ್ಥಳ ತೋರಿಸದಿದ್ದರೂ ಅಧಿಕಾರಿಗಳಿಗೆ ಸಂಬಳ, ಮತ್ತಿತರ ಸೌಲಭ್ಯಗಳನ್ನು ನೀಡಲೇಬೇಕು. ಆದರೆ, ಈ 60ಕ್ಕೂ ಹೆಚ್ಚು ಮಂದಿಗೆ 10 ತಿಂಗಳಿಗೆ ಸಂಬಳ ಪಾವತಿಸಿಲ್ಲ. ಇದೀಗ ಸ್ಥಳ ನಿಯುಕ್ತಿಗೊಳಿಸಿರುವುದರಿಂದ ಒಟ್ಟಿಗೇ ಬಾಕಿ ಸಂಬಳ ಪಾವತಿ ಮಾಡಬೇಕಾಗುತ್ತದೆ. ಅಂದರೆ, ಕೆಲಸ ತೆಗೆದುಕೊಳ್ಳದೆಯೇ ವೇತನ ಪಾವತಿಸಿದರೆ ಸರ್ಕಾರಕ್ಕೆ ನಷ್ಟ ಎಂಬುದು ಗೊತ್ತಿದ್ದರೂ ಈ ರೀತಿ ನಿರ್ಲಕ್ಷ್ಯ ಧೋರಣೆ ಪುನರಾವರ್ತಿಯಾಗುತ್ತದೆ.

ನಕ್ಕರೆ ಅದೇ ಸ್ವರ್ಗ

ಮಗು : ಅಮ್ಮಾ ನಿನ್ನ ಹೊಟ್ಟೆಯೊಳಗೇನಿದೆ?
ಅಮ್ಮ : ಇನ್ನೊಂದು ಪುಟ್ಟ ಪಾಪು ಇದೆ ಪುಟ್ಟಾ
ಮಗು : ಅದು ತುಂಬಾ ಒಳ್ಳೇ ಮಗೂನ?
ಅಮ್ಮ : ಹೌದು ಪುಟ್ಟಾ.
ಮಗು : ಮತ್ತೆ ನೀನ್ಯಾಕೆ ಅದನ್ನು ತಿಂದೆ?

ಮೈಸೂರು ಮಿತ್ರ

ಬುಧವಾರ, 2 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಿಮ್ಮನ್ನು ಯಾರು ನಂಬಿರುತ್ತಾರೋ ಅವರಿಗೆ ಎಷ್ಟೇ ಕಷ್ಟ ಬಂದರು ಸುಳ್ಳು ಹೇಳಬೇಡಿ. ಯಾರು ನಿಮಗೆ ಸುಳ್ಳು ಹೇಳಿ ನಂಬಿಸಿರುತ್ತಾರೋ ಅವರನ್ನು ಯಾವತ್ತೂ ನಂಬಬೇಡಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಂದು ಸುಳ್ಳು ಮುಚ್ಚೋಕೆ, ಸಾವಿರ ಸುಳ್ಳು ಹೇಳಬೇಕು

ನಿಮ್ಮ ಪತ್ರಗಳು

ಬೆಲೆ ಏರಿಕೆ ರಾಜ್ಯದ ಜನತೆಯ ದೌರ್ಭಾಗ್ಯ

ಮಾನ್ಯರೆ,


ಏಪ್ರಿಲ್ ಒಂದರಿಂದ ಸರ್ಕಾರ ಎಲ್ಲಾ ವರ್ಗದವರು ನಿತ್ಯ ಜೀವನದಲ್ಲಿ ಬಳಸುವ ಹಾಲು, ಮೊಸರು, ತುಪ್ಪ ಮತ್ತು ವಿದ್ಯುತ್ ದರವನ್ನು ಹೆಚ್ಚಿಸಿ ರಾಜ್ಯದ ಜನತೆಯ ಬದುಕಿನ ಮೇಲೆ ಬರೆ ಎಳೆದಿದೆ. ಹಾಲಿಗೆ ಪ್ರತಿ ಲೀಟರ್‌ಗೆ 4 ರೂ, ಪ್ರತಿ ಯೂನಿಟ್ ವಿದ್ಯುತ್‌ಗೆ 36 ಪೈಸೆ ಹೆಚ್ಚಳ ಮಾಡಿರುವುದು ಮಧ್ಯಮ ವರ್ಗ ಮತ್ತು ಬಡ ವರ್ಗದ ಜನರು ಜೀವನ ನಡೆಸುವುದೇ ದುಸ್ತರವಾಗುತ್ತಿದೆ. ಏಪ್ರಿಲ್ ತಿಂಗಳ 1ನೇ ತಾರೀಖು ಮೂರ್ಖರ ದಿನ ರಾಜ್ಯದ ಜನತೆಯನ್ನು ಮೂರ್ಖರನ್ನಾಗಿಸಲು ಅಂದಿನಿಂದಲೇ ಜನಸಾಮಾನ್ಯರು ಬಳಸುವ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದು ಜನರನ್ನು ದಡ್ಡರೆಂದು ತಿಳಿದಿದ್ದಾರೆ.

ಇದನ್ನು ವಿರೋಧಿಸಿ ಬೀದಿಗಿಳಿದು ಜನ ಪರ ಪ್ರತಿಭಟನೆ ಮಾಡಬೇಕಾಗಿದ್ದ ವಿರೋಧ ಪಕ್ಷಗಳು ಸಹ ಕನಿಷ್ಠ ಪಕ್ಷ ಪ್ರತಿಭಟನೆ ನಡೆಸದೇ ಹೋದದ್ದು ರಾಜ್ಯದ ಜನತೆಗೆ ವಿರೋಧ ಪಕ್ಷಗಳು ಮಾಡಿದ ಅವಮಾನವೆಂದೇ ತಿಳಿಯಬೇಕು.

ರಾಜ್ಯ ಸರ್ಕಾರ ತನ್ನ ಅಗ್ಗದ ಪ್ರಚಾರಕ್ಕಾಗಿ ಮತ್ತು ತನ್ನ ಪ್ರತಿಷ್ಠೆಗಾಗಿ ಕೋಟಿಗಟ್ಟಲೇ ಹಣ ಖರ್ಚು ಮಾಡಿ ಪತ್ರಿಕೆಗಳು ಮತ್ತು ದೃಶ್ಯಮಾಧ್ಯಮಗಳಿಗೆ ಜಾಹೀರಾತು ನೀಡುತ್ತಿರುವುದು ಸಾರ್ವಜನಿಕರ ತೆರಿಗೆ ಹಣದಿಂದ. ಜಾಹೀರಾತುಗಳಿಗಾಗಿ ಇಷ್ಟೊಂದು ದೊಡ್ಡ ಪ್ರಮಾಣದ ಹಣ ಖರ್ಚು ಮಾಡುವ ಅಗತ್ಯವಿಲ್ಲ. ರಾಜ್ಯದ ಎಲ್ಲಾ ಶಾಸಕರ ಮತ್ತು ಮಂತ್ರಿಗಳ ಸಂಬಳವನ್ನು ಹೆಚ್ಚು ಮಾಡಿಕೊಂಡಿರುವುದು ಹಾಗೂ ರಾಜ್ಯ ಸರ್ಕಾರ ದುಂದುವೆಚ್ಚಕ್ಕೆ ಕಡಿವಾಣ ಹಾಕದೇ ಎಲ್ಲವನ್ನೂ ಜನ ಸಾಮಾನ್ಯರ ಮೇಲೆ ಏರುತ್ತಿರುವುದು ರಾಜ್ಯದ ಜನತೆಯ ದೌರ್ಭಾಗ್ಯವೆಂದೇ ಹೇಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಮೋರಿ ಕುಸಿತ ದುರಸ್ತಿಪಡಿಸಿ



ಮಾನ್ಯರೆ,

ಮೈಸೂರಿನ ರಾಮಕೃಷ್ಣನಗರದಿಂದ ಕನಕದಾಸನಗರಕ್ಕೆ ಸಂಪರ್ಕ ಕಲ್ಪಿಸುವ ವಿಶ್ವಮಾನವ ಜೋಡಿ ರಸ್ತೆ ಹಾಗೂ ವರ್ತುಲ ರಸ್ತೆ ಸಂಧಿಸುವ ಕೆಇಬಿ ಜಂಕ್ಷನ್ ಬಳಿ ಮೋರಿಯ ಕಾಂಕ್ರೀಟ್ 3 ಕಡೆ ಕುಸಿದಿದ್ದು, ವಾಹನ ದಟ್ಟಣೆ ವೇಳೆ ವಾಹನ ಸವಾರರು ಸ್ವಲ್ಪವೇ ಎಡಕ್ಕೆ ಚಲಿಸಿದರೂ ಅಪಾಯವಾಗುವ ಸಂಭವ ಇದೆ. ಇದರ ಪಕ್ಕ ಎಡಕ್ಕೆ ಕೌಟಿಲ್ಯ ಶಾಲೆ ಕಡೆಗೆ ಹೋಗುವ ಕ್ರಾಸ್ ರಸ್ತೆಯಲ್ಲಿ ಕೂಡ ಇದೇ ಮೋರಿ ಕುಸಿದಿದ್ದು ಗುಂಡಿಗಳಾಗಿವೆ. ಇದೂ ಕೂಡ ವಾಹನ ಸವಾರರಿಗೆ ಅಪಾಯಕಾರಿಯಾಗಿದೆ. ಆದ್ದರಿಂದ ಸಂಬಂಧಪಟ್ಟ ನಗರ ಪಾಲಿಕೆ ಅಭಿಯಂತರರು ಪರಿಶೀಲಿಸಿ ದುರಸ್ತಿಪಡಿಸಲು ಕ್ರಮವಹಿಸಲು ಮನವಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಪೌರಕಾರ್ಮಿಕರ ಪರ ಸದನದಲ್ಲಿ ಧನಿ ಎತ್ತಿದ ಶಾಸಕ ಶ್ರೀವತ್ಸರಿಗೆ ಧನ್ಯವಾದ

ಮಾನ್ಯರೆ,

ಕೃಷ್ಣರಾಜ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಪೌರಕಾರ್ಮಿಕರಿಗೆ ಎಂದೇ ನಿರ್ಮಿಸಲಾದ ವಸತಿ ಸಮುಚ್ಚಯಗಳ ಅವ್ಯವಸ್ಥೆ ಮತ್ತು ಸರ್ಕಾರ ಹಾಗೂ ಆಡಳಿತ ವ್ಯವಸ್ಥೆಯು ತೋರುತ್ತಿರುವ ಅದರ ನಿರ್ವಹಣೆಯ ಬೇಜವಾಬ್ದಾರಿತನವನ್ನು ಪ್ರಶ್ನಿಸಿ ಸದನದಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕ ಶ್ರೀ ಶ್ರೀವತ್ಸರವರು ಧನಿ ಎತ್ತಿದ್ದು ನಿಜವಾಗಿಯೂ ದಲಿತ ಪರ ಕಾಳಜಿಯನ್ನು ತೋರುತ್ತದೆ. ಶಾಸಕರ ಆ ಕಾಳಜಿಯ ಪ್ರಶ್ನೆಗೆ ನಗರಾಭಿವೃದ್ಧಿ ಸಚಿವರು ಸಮರ್ಥವಾದ ಉತ್ತರವನ್ನು ಸದನದಲ್ಲಿ ನೀಡದಿದ್ದರೂ ಆ ಜವಾಬ್ದಾರಿಯನ್ನು ಸಚಿವ ಜಮೀರ್ ಅಹಮದ್ ಅವರ ಹೆಗಲಿಗೆ ವರ್ಗಾಯಿಸಿದ್ದು ಸರ್ಕಾರದ ಬೇಜವಾಬ್ದಾರಿತನವನ್ನು ತೋರುತ್ತಿತ್ತು. ಮುಂದೆ ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರವು ಸೂಕ್ತ ಕ್ರಮ ತೆಗೆದುಕೊಂಡು ಅನೈತಿಕ ಚಟುವಟಿಕೆಗಳ ತಾಣವಾಗಿರುವ ಆ ಪೌರಕಾರ್ಮಿಕರ ವಸತಿ ಸಮುಚ್ಚಯಗಳ ಮರು ನಿರ್ಮಾಣ ಮಾಡಿ ಅರ್ಹ ಫಲಾನುಭವಿಗಳಿಗೆ ವಿತರಿಸಲಿ.

ರಾಜ್ಯದ ಮತ್ತು ಪ್ರಾದೇಶಿಕವಾಗಿ ಬಹಳಷ್ಟು ವಿಚಾರಗಳು ಚರ್ಚೆಯಾಗುವ ಸದನದಲ್ಲಿ ಶಾಸಕರು ವಿಶೇಷವಾಗಿ ನಗರವನ್ನು ಸ್ವಚ್ಛವಾಗಿಟ್ಟು ನಮ್ಮೆಲ್ಲರನ್ನು ಆರೋಗ್ಯಕ್ಕಾಗಿಯೇ ತಮ್ಮ ಆರೋಗ್ಯವನ್ನೂ ಲೆಕ್ಕಿಸದೇ ಶ್ರಮಿಸುವ ಪೌರಕಾರ್ಮಿಕರ ನೆಲೆಯ ಬಗ್ಗೆ ಗುರುತರವಾಗಿ ಶಾಸಕರು ಪ್ರಶ್ನಿಸಿದ್ದು ನಮ್ಮ ದಲಿತ ಸಮುದಾಯದಲ್ಲಿ ಒಂದು ಭರವಸೆಯನ್ನು ಮೂಡಿಸಿದೆ. ಶಾಸಕ ಶ್ರೀವತ್ಸರವರ ದಲಿತಪರ ಕಾಳಜಿ ಮತ್ತು ಕಾರ್ಯಗಳು ಹೀಗೆ ಮುಂದುವರೆಯಲಿ.

–ಪರಮಾನಂದ ಎಂ.ಎಸ್., ರಾಜ್ಯ ಕಾರ್ಯದರ್ಶಿ, ಬಿಜೆಪಿ ಎಸ್‌ಸಿ ಮೋರ್ಚಾ.

ಬೇಸಿಗೆ ಶಿಬಿರವನ್ನು ಹೀಗೂ ನಡೆಸಬಹುದು

ಮಾನ್ಯರೆ,

ಬೇಸಿಗೆ ರಜೆ ಬಂತೆಂದರೆ ಸಾಕು ಎಲ್ಲೆಡೆ ಬೇಸಿಗೆ ಶಿಬಿರಗಳು ನಡೆಯುತ್ತವೆ. ಮಕ್ಕಳು ಬೇಸಿಗೆ ಬಿಡುವಿನ ವೇಳೆ ಇಂತಹ ಬೇಸಿಗೆ ಶಿಬಿರಗಳಲ್ಲಿ ಪಾಲ್ಗೊಳ್ಳುತ್ತಾರೆ. ನಾನಾ ರೀತಿಯ ಶೈಕ್ಷಣಿಕೇತರ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಪಾಲ್ಗೊಂಡು ಸಂಭ್ರಮಿಸುತ್ತಾರೆ. ಇದರಿಂದ ಮಕ್ಕಳಿಗೆ ಸಂತೋಷವಾದರೆ, ದುಡಿಯುವ ಪೋಷಕರಿಗೆ ಮಕ್ಕಳು ಒಂದೆಡೆ ಕ್ಷೇಮವಾಗಿರುತ್ತಾರೆ ಎಂಬ ವಿಶ್ವಾಸ. ಬೇಸಿಗೆ ಶಿಬಿರದಲ್ಲಿ ಬೋಧಿಸಬೇಕಾದ ವಿಷಯಗಳು, ಜೀವನ ಮೌಲ್ಯಗಳು, ಸಂಬಂಧಗಳು, ರಕ್ತದಾನ, ದೇಶಪ್ರೇಮಕ್ಕೆ ಮಡಿದ ಯೋಧರ ಬಗ್ಗೆ ವಿವರ ನೀಡುವುದು, ಗುರುಗಳ ಮಹತ್ವ ತಿಳಿಸುವುದು, ಎಲ್ಲಾ ಧರ್ಮದ ಹಬ್ಬಗಳು ಹಾಗೂ ಪ್ರಮುಖವಾಗಿ ರಾಷ್ಟ್ರೀಯ ಹಬ್ಬಗಳ ವಿವರವನ್ನು ತಿಳಿಸುವುದು, ತಾವು ಓದಿದ ಶಾಲಾ ಕಾಲೇಜುಗಳನ್ನು ಗೌರವಿಸಿ ನೆನಪಿನ ಕಾಣಿಕೆ ನೀಡುವುದು. ಹೆಣ್ಣು ಮಕ್ಕಳಿಗೆ ಗೌರವ ಕೊಡುವುದು, ಪರಿಸರ, ನೈರ್ಮಲ್ಯತೆ, ಮಾನವೀಯ ಗುಣಗಳು, ಮಾರಣಾಂತಿಕ ಖಾಯಿಲೆ, ಕಷ್ಟದಲ್ಲಿದ್ದವರಿಗೆ ಸಹಾಯಹಸ್ತ ನೀಡುವುದು. ತಾಯಿ ಹಾಲಿನ ಮಹತ್ವ ಹೀಗೆ ಮಕ್ಕಳಿಗೆ ನಾಟಕ–ಹಾಡಿನ ಮೂಲಕ ತಿಳುವಳಿಕೆಯನ್ನು ಬೇಸಿಗೆ ಶಿಬಿರದಲ್ಲಿ ನೀಡಿದರೆ ಅವರು ಉತ್ತಮ ನಾಗರಿಕರಾಗಿ ದೇಶದ ಏಳ್ಗೆಗೆ ಕಾರಣರಾಗುತ್ತಾರೆ. ಶಿಬಿರದಲ್ಲಿ ಈ ರೀತಿ ಬದಲಾವಣೆಯನ್ನು ತಂದುಕೊಂಡರೆ ಒಳ್ಳೆಯದು.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ

ಬೆಂಗಳೂರು ಉಳಿಸುವುದು ದೇವರಿಂದ ಅಸಾಧ್ಯವಾದರೂ ಮೈಸೂರಿಂದ ಸಾಧ್ಯವಿದೆ!



> ಪ್ರಾಯಶಃ ಬಹು ಕಾಲದಿಂದ ನಿರೀಕ್ಷಿಸಿದ್ದ 'ಗ್ರೇಟರ್ ಮೈಸೂರು' (Greater Mysuru) ಯೋಜನೆಯನ್ನು ಗಂಭೀರವಾಗಿ ಪರಿಗಣಿಸಲು ಇದು ಸಕಾಲವಾಗಿದೆ. ಸದುದ್ದೇಶಿತ ಬದಲಾವಣೆಗೆ ಇದು ಪ್ರಶಸ್ತ ಸಮಯವಾಗಿದೆ–ಭಾರಿ ತಲೆನೋವಾಗಿರುವ ಬೆಂಗಳೂರಿನ ಜನ ಹಾಗೂ ವಾಹನ ಸಂದಣಿಯನ್ನು ನಿಭಾಯಿಸುವ ಸಲುವಾಗಿ ತೇಪೆಗಳನ್ನು ಹಾಕುವುದರ ಬದಲು ಸುಸಜ್ಜಿತ ಹಾಗೂ ಯೋಜನಾಬದ್ಧ ನಗರಗಳನ್ನು ನಿರ್ಮಿಸಲೂ ಕಾಲ ಪಕ್ವವಾಗಿದೆ.

ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಇತ್ತೀಚೆಗೆ ಬೆಂಗಳೂರಿನ ಸಂಚಾರ ವ್ಯವಸ್ಥೆ ದುಸ್ಥಿತಿಯ ಬಗ್ಗೆ ಮಾತನಾಡುತ್ತಾ "ಬೆಂಗಳೂರನ್ನು ಎರಡು ಅಥವಾ ಮೂರು ವರ್ಷಗಳಲ್ಲಿ ಬದಲಾಯಿಸಲು ಸಾಧ್ಯ ಇಲ್ಲ. ಅದು ದೇವರಿಂದಲೂ ಸಾಧ್ಯವಿಲ್ಲ. ಸಮರ್ಪಕ ಯೋಜನೆ ರೂಪಿಸಿ, ಅದನ್ನು ಕಾರ್ಯಗತಗೊಳಿಸಿದಾಗ ಮಾತ್ರವೇ ಏನಾದರೂ ಬದಲಾವಣೆ ಸಾಧ್ಯ ಎಂದು ಹೇಳುವ ಮೂಲಕ ವಿವಾದದ ಕಿಡಿಯನ್ನು ಹೊತ್ತಿಸಿದರು.

ಡಿ.ಕೆ.ಶಿವಕುಮಾರ್ ಅವರು ಹೇಳುವುದು ಸರಿಯೇ. ದೇವರಿಂದಲೂ ಬೆಂಗಳೂರಿನ ಸಂಚಾರ ಸಮಸ್ಯೆಗೆ ಪರಿಹಾರ ಇಲ್ಲವೇ ಇಲ್ಲ. ಅಷ್ಟಕ್ಕೂ ಅದು ದೇವರ ಕೆಲಸ ಅಲ್ಲ. ಅದು ಇವರ ಸರ್ಕಾರದ ಕೆಲಸ. ಹಾಗಾಗಿಯೇ ಶಕ್ತಿಸೌಧ ವಿಧಾನಸೌಧದ ಪ್ರಧಾನ ದ್ವಾರದಲ್ಲಿ **'ಸರ್ಕಾರದ ಕೆಲಸ ದೇವರ ಕೆಲಸ'** ಎಂದು ಕೆತ್ತಿಸಲಾಗಿದೆ.

ಹೌದು, ಇದನ್ನು ನೋಡಿದಾಗ ಇಂತಹ ಪವಿತ್ರ ಕಾರ್ಯವನ್ನು ಮಾಡುವುದರ ಬದಲು, ರಾಜಕಾರಣಿಗಳು ಅನಾಚಾರ ಮಾರ್ಗದಡಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಮುಂದಾಗುತ್ತಾರೆ. ಇದಕ್ಕೆ ಒಂದು ಉತ್ತಮ ಉದಾಹರಣೆ 2023ರಲ್ಲಿ ಘೋಷಿಸಿದ ಮಹತ್ವಾಕಾಂಕ್ಷಿ ಸುರಂಗ ರಸ್ತೆ ಮಾರ್ಗ ಯೋಜನೆ.

ಬೆಂಗಳೂರಿನಲ್ಲಿ ಸುಮಾರು 190 ಕಿಲೋ ಮೀಟರ್ ಸುರಂಗ ರಸ್ತೆ ನಿರ್ಮಾಣಕ್ಕೆ ಇನ್ನು 45 ದಿನಗಳಲ್ಲಿ ಜಾಗತಿಕ ಟೆಂಡರ್ ಕರೆಯುವುದಾಗಿ ಉಪಮುಖ್ಯಮಂತ್ರಿಗಳು ಹೇಳಿದ್ದರು. ಅವರು ಈ ನಿರ್ಧಾರಕ್ಕೆ ಬರಲು ಈಗ ನಿಷ್ಕ್ರಿಯವಾಗಿರುವ ಸಿಂಗಾಪುರ್‌ನ ಮೂಲಸೌಕರ್ಯ ಪ್ಲೇಬುಕ್ ಪ್ರೇರಣೆ ಇರಬಹುದು ಎಂದು ತೋರುತ್ತದೆ.

ನಾವು, ಇದರ ಬಗ್ಗೆ ಬಹಳ ಯೋಚಿಸಬೇಕಿದೆ. ಮೊದಲಿಗೆ ಸುರಂಗ ಹೆದ್ದಾರಿಗಳು ಮೇಲ್ನೋಟಕ್ಕೆ ಯಾರೊಬ್ಬರನ್ನು ನವೀನ ಮಾದರಿ ಕಲ್ಪನೆಯಾಗಿ ಆಕರ್ಷಿಸಬಹುದು. ಆದರೆ, ಹತ್ತಿರದಿಂದ ನೋಡಿದಾಗ ಪ್ರಾಯೋಗಿಕವಾಗಿ ಇದೊಂದು ಅತ್ಯಂತ ಸವಾಲಿನ ಕಾರ್ಯವೆಂಬುದು ಕಂಡುಬರುತ್ತದೆ.

ಹೇಳಿ–ಕೇಳಿ, ನಾವು ಭೂಮಿಯ ಮೇಲೆಯೇ ಉತ್ತಮ ರೀತಿಯಲ್ಲಿ ಕಟ್ಟಡ, ವ್ಯವಸ್ಥಿತ ರೀತಿ ನಿರ್ವಹಿಸಲ್ಪಡುವಂತಹ ರಸ್ತೆಗಳನ್ನು ನಿರ್ಮಿಸಲು ಈಗಲೂ ಹರಸಾಹಸಪಡುತ್ತಿದ್ದೇವೆ. ವಾಸ್ತವ ಸ್ಥಿತಿ ಹೀಗಿರುವಾಗ, ಸುರಂಗ ಮಾರ್ಗದಲ್ಲಿ ಸುಸಜ್ಜಿತವಾದ ಜಾಲವನ್ನ (ನೆಟ್‌ವರ್ಕ್) ಹೊಂದಿದಂತಹ ರಸ್ತೆ ಯೋಜನೆಗಳನ್ನು ಕಾರ್ಯಗತಗೊಳಿಸುವುದಾಗಿ ವಿಶ್ವಾಸದಿಂದ ಹೇಳುವುದು ಹೇಗೆ?

ನಮ್ಮ ನಗರ ಪ್ರದೇಶದಲ್ಲಿನ ಮೂಲ ಸೌಕರ್ಯ ಯೋಜನೆಗಳ ಕಾರ್ಯಗತಗೊಳಿಸುವಿಕೆಯ ಹಿಂದಿನ ಸಾಧನೆ ನೋಡಿದಾಗ, ಒಂದು ಸಣ್ಣ ಪ್ರಮಾಣದ ಆಶಾಭಾವನೆ ಮೂಡುತ್ತದೆ. ಉದಾಹರಣೆಗೆ ಸಂಚಾರ ಸುಗಮಕ್ಕೆ ಬೆಂಗಳೂರಲ್ಲಿ ಮ್ಯಾಜಿಕ್ ಬಾಕ್ಸ್‌ಗಳನ್ನು ಅಳವಡಿಸಿ, 30 ಅಡಿಯ ಅಂಡರ್ ಪಾಸ್‌ಗಳನ್ನು ಕ್ಷಿಪ್ರ ರೀತಿಯಲ್ಲಿ ನಿರ್ಮಿಸಲಾಯಿತು. ಆದರೆ ಮಳೆಗಾಲದಲ್ಲಿ ಜನರು ಹಾಗೂ ವಾಹನಗಳು ಇದರಲ್ಲಿ ಸಿಕ್ಕಿ ಹಾಕಿಕೊಂಡು, ತತ್ತರಿಸುವಂತಹ ಮುಳುಗುವ ದುಸ್ಥಿತಿ ನಿರ್ಮಾಣವಾಯಿತು. ವಾಹನಗಳಲ್ಲಿ ಪ್ರಯಾಣಿಸುತ್ತಿದ್ದವರು ಹಾಗೂ ಪಾದಚಾರಿಗಳು ಇಲ್ಲಿ ಮುಳುಗಿ, ಕೊಚ್ಚಿಕೊಂಡು ಹೋಗುವುದರೊಂದಿಗೆ ಇವು ಟ್ರ್ಯಾಜಿಕ್ ಬಾಕ್ಸ್ (ದುರಂತ ಪೆಟ್ಟಿಗೆ)ಗಳಾಗಿ ಪರಿಣಮಿಸಿದವು.

ಇಂತಹ ಮಾದರಿ ನಿರ್ಮಾಣಗಳೇ ಪದೇ ಪದೆ ದುರಂತಕ್ಕೆ ಕಾರಣವಾಗುವುದಾದರೆ, ಇನ್ನು ಸುರಂಗದಲ್ಲಿ ನಿರ್ಮಿಸಲಾಗುವ 190 ಕಿ.ಮೀ. ರಸ್ತೆ ಮಾರ್ಗದಲ್ಲಿನ ಸುರಕ್ಷತೆಯ ಕಾಳಜಿಯು ನಿಶ್ಚಿತವಾಗಿ ಸಾಕಷ್ಟಿರಬೇಕಾಗುತ್ತದೆ.

ಸುರಂಗ ಮಾರ್ಗದ ರಸ್ತೆಗಳಿಗೆ ಸುರಕ್ಷತೆ ನಿಜವಾಗಿಯೂ ಅತೀ ಮುಖ್ಯ. ತುರ್ತು ನಿರ್ಗಮನದಂತಹ ಮೂಲಸೌಕರ್ಯ, ದೃಢಕಾಯ ವಾತಾಯನ ವಿಧಾನಗಳು, ನಿರಂತರ ನಿರ್ವಹಣೆ ಹಾಗೂ ಸಮರ್ಪಣಾ ಮನೋಭಾವದ ತುರ್ತು ನೆರವಿನ ತಂಡದ ಅಗತ್ಯವಿರುತ್ತದೆ.

ಕಟು ಸತ್ಯವೆಂದರೆ, ಈ ಎಲ್ಲಾ ಸುರಕ್ಷಿತ ಕ್ರಮಗಳಿಗೆ ಗಮನಾರ್ಹ ಆರ್ಥಿಕ ಹಾಗೂ ತಾಂತ್ರಿಕ ಬೇಡಿಕೆ ಆಧರಿಸಿದೆ. ಸರ್ಕಾರದಿಂದ ಈಗಾಗಲೇ ನೀಡಲ್ಪಟ್ಟಿರುವ ಸಾಕಷ್ಟು ಉಚಿತಗಳಿಂದ ಸಂಪನ್ಮೂಲದ ಅಭಾವ ಸ್ಥಿತಿ ಉಂಟಾಗಿದೆ.

ಇದರ ಜೊತೆಗೆ, ಬೇಕಾದಷ್ಟು ಅಂಡರ್ ಗ್ರೌಂಡ್ ವಾಟರ್ ಪೈಪ್‌ಲೈನ್, ಒಳಚರಂಡಿ ವ್ಯವಸ್ಥೆ, ಅನಿಲ ಮಾರ್ಗಗಳು (gas lines) ಮತ್ತು ಫೈಬರ್ ಆಪ್ಟಿಕ್ ಕೇಬಲ್‌ಗಳು ಮುಂತಾದವುಗಳ ನಡುವೆಯೂ ಇಂತಹ ಯೋಜನೆ ವಿಶ್ವಾಸಾರ್ಹವಲ್ಲ ಎಂದೆನಿಸುವುದಿಲ್ಲವೇ?

ರಾಜಕೀಯ ಬದಲಾವಣೆಗಳು, ಭ್ರಷ್ಟ ಟೆಂಡರ್ ವಿಧಾನಗಳು, ಹೀನ ಕಿಕ್‌ಬ್ಯಾಕ್ ಸಂಸ್ಕೃತಿ, ನಡುವೆ ಶಿಸ್ತುಬದ್ಧ ವೇಳಾಪಟ್ಟಿ ಪಾಲನೆ ಹಾಗೂ ಅಂತಹ ಮಹತ್ವಾಕಾಂಕ್ಷೆ ಯೋಜನೆಯ ಆಯವ್ಯಯವೂ (ಬಜೆಟ್) ಬಹುತೇಕ ಭ್ರಮೆಯೇ ಸರಿ!

ಯಾರೊಬ್ಬರಾದರೂ ಪ್ರಶ್ನಿಸಬಹುದು; ಸಿಂಗಾಪೂರ್‌ನ ಸುರಂಗ ರಸ್ತೆ ಮಾರ್ಗ ವ್ಯವಸ್ಥೆಯು 2017ರಲ್ಲಿಯೇ ನಿರುಪಯುಕ್ತ ಎಂದು ರದ್ದಾಗಿರುವಾಗ ನಾವಾದರೂ ಇಂತಹುದೇ ಸುರಂಗ ಜಾಲಗಳಿಗೆ (underground network) ಶತಕೋಟಿಗಳಷ್ಟು ಹಣವನ್ನು (ರೂಪಾಯಿಗಳನ್ನು) ಹೂಡುವುದು ಜಾಣತನವೇ?

ಸಿಂಗಾಪುರದ ನಗರ ಪುನರ್ ಅಭಿವೃದ್ಧಿ ಪ್ರಾಧಿಕಾರವು ಅಂತಿಮವಾಗಿ ಈ ಹಣವನ್ನು ಸ್ವಚ್ಛತೆ, ಸುರಕ್ಷತೆ ಹಾಗೂ ಸಾರ್ವಜನಿಕ ಸಾರಿಗೆಯನ್ನು ಪರಿಣಾಮಕಾರಿಯಾಗಿಸುವ ಕಾರ್ಯಕ್ಕೆ ವಿನಿಯೋಗಿಸಲು ನಿರ್ಧರಿಸಿತು.

ನಿಶ್ಚಯವಾಗಿ, ಒಳ್ಳೆಯ ಸಾರ್ವಜನಿಕ ಸಾರಿಗೆ ಸಹಾಯಕಾರಿ. ಆದರೆ, ವಿಷಾದಕರ ಸಂಗತಿ ಎಂದರೆ, ನಿರಂತರವಾಗಿ ಏರುತ್ತಿರುವ ಜನ ಸಂಖ್ಯಾ ವೇಗಕ್ಕೆ ಸಾರ್ವಜನಿಕ ಸಾರಿಗೆಯೂ ಸೂಕ್ತ ಪರಿಹಾರವಲ್ಲ ಎಂಬುದು ಲಂಡನ್‌ನಲ್ಲಿ ರುಜುವಾತಾಗಿದೆ.

ಲಂಡನ್, ಅತ್ಯಂತ ವಿಸ್ತೃತವಾದ ಸಾರ್ವಜನಿಕ ಸಾರಿಗೆ ಜಾಲವನ್ನು ಹೊಂದಿದೆ. ಆದರೂ ಆ ನಗರವು ಅತೀ ಹೆಚ್ಚು ಸಾರಿಗೆ ದಟ್ಟಣೆ ಹೊಂದಿರುವ ನಗರಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ.

ಆದ್ದರಿಂದ, ಜನಸಂದಣಿ ಕಡಿತಗೊಳಿಸಲು ಇರುವ ಮಾರ್ಗವೇನು? ಇದಕ್ಕೆ ಉತ್ತರ ಹೊಸ ನಗರಗಳನ್ನು ನಿರ್ಮಿಸುವುದು ಇಲ್ಲವೇ ಉಪನಗರಗಳನ್ನು (tier-2 cities) ಅಭಿವೃದ್ಧಿಪಡಿಸುವುದು.

ಬೆಂಗಳೂರನ್ನು ಉಳಿಸಬೇಕಾಗಿದ್ದಲ್ಲಿ, ಕರ್ನಾಟಕವು ಹೂಡಿಕೆ ಆಕರ್ಷಿಸುವುದನ್ನು ಮುಂದುವರೆಸಲು ಬಯಸಿದ್ದರೆ ಅಂತಹ ಸಂದರ್ಭದಲ್ಲಿ ಮೈಸೂರಿಗೆ ಆದ್ಯತೆ ನೀಡಬೇಕಿದೆ.

ಬೃಹತ್ ನಗರಗಳಿಗೆ (mega cities) ತಮ್ಮದೇ ಲಕ್ಷ್ಮಣರೇಖೆಗಳಿರುತ್ತವೆ. ಬೆಂಗಳೂರಿನ ಯದ್ವಾತದ್ವಾ ಬೆಳವಣಿಗೆಯು, ಆಯತಪ್ಪಿದ ಆರ್ಥಿಕ ಬೆಳವಣಿಗೆ ಸ್ಥಿತಿಯನ್ನು ಸೃಷ್ಟಿಸಿದೆ. ಕೈಗಾರಿಕೆ ಮತ್ತು ಜನಸಾಂದ್ರತೆ ಗಮನದಲ್ಲಿಟ್ಟುಕೊಂಡರೆ, ಮೊದಲಿಗೆ ಉತ್ಪಾದನೆ ಹೆಚ್ಚಾದರೂ ಅಂತಿಮವಾಗಿ ಜನಸಂದಣಿಯಿಂದ ದುಬಾರಿ ವಸತಿ ದರ, ಮಾಲಿನ್ಯ ಹಾಗೂ ಅಪರಾಧಗಳ ಬೀಜಾಂಕುರವಾಗುತ್ತದೆ.

ಈಗಂತೂ ಬೆಂಗಳೂರು ಮಹಾನಗರ, ವಾಸಕ್ಕೆ ಯೋಗ್ಯವಾದ ಮಹಾನಗರವೆಂಬ ಗರಿಷ್ಠ ಸಾಮರ್ಥ್ಯವನ್ನು ಮೀರಿರುವುದು ಸ್ಪಷ್ಟವಾಗಿದೆ.

ಇಂತಹ ವಿಚಾರಗಳಲ್ಲಿ ನಮ್ಮ ರಾಜ್ಯ ಸರ್ಕಾರವು **ರುಚಿರ್ ಶರ್ಮರಂತಹ ಅರ್ಥಶಾಸ್ತ್ರಜ್ಞರ** ಸಲಹೆ ಪಡೆಯುವುದು ಉತ್ತಮ. ಅವರು ತಮ್ಮ "The Rise and Fall of Nation" ಪುಸ್ತಕದಲ್ಲಿ 10 ಲಕ್ಷ ಇಲ್ಲವೇ ಅದಕ್ಕೂ ಮೀರಿದಂತಹ ಜನಸಂಖ್ಯೆಯುಳ್ಳ ಪ್ರದೇಶಗಳಲ್ಲಿ ಹೊಸ ನಗರಗಳನ್ನು ನಿರ್ಮಿಸುವುದು ಅವಶ್ಯವೆಂದು ಹೇಳಿದ್ದಾರೆ.

ಶರ್ಮರವರ ಪ್ರಕಾರ, ಅಂತಹ ನಗರಗಳು ಕಾರ್ಮಿಕರ ಮತ್ತು ಭೂಮಿ ದರದ ಪ್ರಯೋಜನಗಳಿಂದ ಇಚ್ಛಿತ ಅಭಿವೃದ್ಧಿಯ ಇಂಜಿನ್‌ಗಳಾಗಿ ಕಾರ್ಯನಿರ್ವಹಿಸುತ್ತವೆ. ಅಂತಹ ಮಾನದಂಡದಿಂದ ಮಿತಿ ಮೀರಿ ಬೆಳೆದಿರುವ ಬೆಂಗಳೂರಿನಂತಹ ಬೃಹತ್ ನಗರಗಳ ಹೊರೆಯನ್ನು ಕಡಿಮೆ ಮಾಡಲೂಬಹುದು.

ಉಪಮುಖ್ಯಮಂತ್ರಿಗಳು, ಬೆಂಗಳೂರು ಮಹಾನಗರದ ಒತ್ತಡವನ್ನು ಕಡಿಮೆ ಮಾಡಲು, ಮೈಸೂರು, ಹುಬ್ಬಳ್ಳಿ ಇಲ್ಲವೇ ಧಾರವಾಡದಂತಹ ನಗರಗಳನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಲು ದೀರ್ಘಾವಧಿ ಪರಿಹಾರವಾಗಿ ಒಂದು ಯೋಜನೆಯನ್ನು ಕಾರ್ಯಗತಗೊಳಿಸಬೇಕಿದೆ.

ಬೆಂಗಳೂರಿನ ಜನ ಹಾಗೂ ವಾಹನ ದಟ್ಟಣೆಗೆ ಒಂದು ಪರಿಹಾರವಾಗಿ ಮೈಸೂರು ನಗರ ಹೇಳಿ ಮಾಡಿಸಿದಂತಿದೆ. ಮೈಸೂರು, ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕ ಹೊಂದಿದ್ದು, ಜೊತೆಗೆ ಜೋಡಿ ಹಳಿ ರೈಲು ಮಾರ್ಗವನ್ನೂ ಒಳಗೊಂಡಿದೆ. ವಿಮಾನ ನಿಲ್ದಾಣವೂ ಇದ್ದು, ಬೆಂಗಳೂರಿನಂತೆಯೇ ಉತ್ತಮ ಹವಾಮಾನ ಮತ್ತು ನೀರಿನ ಸೌಕರ್ಯವನ್ನು ಸಹ ಹೊಂದಿದೆ.

ರಾಜ್ಯ ಸರ್ಕಾರವು ಮಾಡಬೇಕಾಗಿರುವುದಿಷ್ಟೆ. ಮೈಸೂರು ನಗರದಲ್ಲಿ ದೀರ್ಘಕಾಲೀಕ ಮೆಟ್ರೋ ಯೋಜನೆಗಳನ್ನು ರೂಪಿಸುವುದು, ಒಳಚರಂಡಿ ಹಾಗೂ ಮಳೆ ನೀರು ಚರಂಡಿ ವ್ಯವಸ್ಥೆ ಪುನರ್ ರೂಪಿಸುವುದರ ಜೊತೆಗೆ ನಗರದ ಉತ್ತಮ ಸ್ವಾಸ್ಥ್ಯಕ್ಕೆ ಅವಶ್ಯವಿರುವಂತಹ ಖಾಲಿ ಜಾಗಗಳನ್ನು ಕಾಯ್ದಿರಿಸುವುದು.

ಇಂತಹ ಪೂರ್ವ ತಯಾರಿ ಮಾಡಿಕೊಳ್ಳದೇ ಇದ್ದಲ್ಲಿ ಮೈಸೂರು ನಗರವೂ ಅವ್ಯವಸ್ಥೆಯಲ್ಲಿ ಬೆಂಗಳೂರನ್ನು ಹಿಂದಿಕ್ಕುವ ಕಾಲ ಬರಬಹುದು.

ಪ್ರಾಯಶಃ ಬಹು ಕಾಲದಿಂದ ನಿರೀಕ್ಷಿಸಿದ್ದ 'ಗ್ರೇಟರ್ ಮೈಸೂರು' (Greater Mysuru) ಯೋಜನೆಯನ್ನು ಗಂಭೀರವಾಗಿ ಪರಿಗಣಿಸಲು ಇದು ಸಕಾಲವಾಗಿದೆ.

ಸದುದ್ದೇಶಿತ ಬದಲಾವಣೆಗೆ ಇದು ಪ್ರಶಸ್ತ ಸಮಯವಾಗಿದೆ– ಭಾರಿ ತಲೆನೋವಾಗಿರುವ ಬೆಂಗಳೂರಿನ ಜನ ಹಾಗೂ ವಾಹನ ಸಂದಣಿಯನ್ನು ನಿಭಾಯಿಸುವ ಸಲುವಾಗಿ ತೇಪೆಗಳನ್ನು ಹಾಕುವುದರ ಬದಲು ಸುಸಜ್ಜಿತ ಹಾಗೂ ಯೋಜನಾಬದ್ಧ ನಗರಗಳನ್ನು ನಿರ್ಮಿಸಲೂ ಕಾಲ ಪಕ್ವವಾಗಿದೆ.

ಹಾಗೂ ಈ ಮಹಾಕಲ್ಪನೆಯಲ್ಲಿ ಮೈಸೂರು ಕೇವಲ ಪರ್ಯಾಯ ಆಯ್ಕೆ ಮಾತ್ರವಲ್ಲ. ಇದೊಂದು ವಿಶ್ವಾಸಾರ್ಹ ಆಶಾಕಿರಣವೂ ಆಗಿದೆ. ಇದು ನಿಜವಾಗಿಯೂ ಬೆಂಗಳೂರು ಮಹಾನಗರವನ್ನು ರಕ್ಷಿಸಬಲ್ಲದು. ಆದರೆ, ಇದನ್ನು ನಮ್ಮ ರಾಜಕೀಯ ದೇವರುಗಳು ಆಲಿಸಬೇಕಷ್ಟೆ. ಒಂದು ವೇಳೆ ಅವರು ಕಿವುಡರಾದರೆ..! ದೇವರೇ ನಮ್ಮನ್ನು ಕಾಪಾಡಬೇಕು...!

Email:
vikram@starofmysore.com

ಮಾಜಿ ಸಂಸದ ಪ್ರತಾಪ್ ಸಿಂಹರಿಗೆ ಯುಗಾದಿ ಶುಭಾಶಯ...



ಯುಗಾದಿ ಪ್ರಯುಕ್ತ ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ ನೇತೃತ್ವದಲ್ಲಿ ಶುಭಾಶಯ ಕೋರಲಾಯಿತು. ಬಿಜೆಪಿ ಮುಖಂಡರಾದ ಟೆನಿಸ್ ಗೋಪಿ, ಜಯಣ್ಣ, ಅಶೋಕ್, ರವಿ, ಪರಮೇಶಗೌಡ, ಸಂದೇಶ್, ವಿನೋದ್, ಶ್ರೀನಿವಾಸ್ ಇದ್ದಾರೆ.

ನೋಟರಿ ಹುದ್ದೆ ಭರ್ತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರು ಜಿಲ್ಲೆಯ ಮೈಸೂರು ಕಂದಾಯ ತಾಲೂಕಿನಲ್ಲಿ ವಕೀಲರು ಮತ್ತು ನೋಟರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅಬ್ದುಲ್ ರೆಹಮಾನ್ ಪಾಷಾ ಅವರ ನಿಧನದಿಂದ ತೆರವಾಗಿರುವ ನೋಟರಿ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ವಕೀಲರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು Form No.1 ಮೆಮೋರಿಯಲ್ ರೂಲ್ 4(2) ರನ್ವಯ ವಿವರಗಳನ್ನು ಭರ್ತಿ ಮಾಡಿ ಅಗತ್ಯವಾದ ದಾಖಲೆಗಳೊಂದಿಗೆ ಸಹಿ ಮಾಡಿ ಮೈಸೂರಿನ ಪ್ರಧಾನ ಜಿಲ್ಲಾ ನ್ಯಾಯಾಧೀಶರ ಕಾರ್ಯಾಲಯಕ್ಕೆ ಮೇ 2ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಉಷಾರಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಅರಮನೆ ವೇದಿಕೆಯಲ್ಲಿ ಜಾನಪದ ಗೀತೆಗಳ ಸ್ವರ ತರಂಗದ ಸುರಭಿ ; ನೃತ್ಯದ ಬೆಡಗು–ಬಿನ್ನಾಣ

●ಮುದಗೊಳಿಸಿದ ಸುಗಮ ಸಂಗೀತ ●ಸೂಸಿದ ವಾದ್ಯ ಸಂಗೀತದ ಹೊನಲು ●ಮೂರು ದಿನಗಳ ಯುಗಾದಿ ಸಂಗೀತೋತ್ಸವಕ್ಕೆ ವರ್ಣರಂಜಿತ ತೆರೆ



ಯುಗಾದಿ ಸಂಗೀತೋತ್ಸವದಲ್ಲಿ ಡಾ.ಕಾ.ರಾಮೇಶ್ವರಪ್ಪ ನೇತೃತ್ವದ ತಂಡವು ಜಾನಪದ ಗೀತೆಗಳನ್ನು ಸಾದರಪಡಿಸಿತು.



ಶ್ರೇಷ್ಠ ಕೆ.ರಾಗ್ ಹಾಡಿನ ಮೋಡಿ ಮತ್ತು ಕಲಾವಿದೆಯರ ಮನಮೋಹಕ ನೃತ್ಯದ ಭಾವ ಭಂಗಿ.

ಮೈಸೂರು,ಏ.1(ಪಿಎಂ)– ಜಾನಪದ ಗೀತೆಗಳ ಸ್ವರತರಂಗದ ಸುರಭಿ... ನೃತ್ಯದ ಬೆಡಗು–ಬಿನ್ನಾಣ... ಮನ ಮುದಗೊಳಿಸಿದ ಸುಗಮ ಸಂಗೀತದ ನಾದಲೋಕ... ಹೀಗೆ ವೈವಿಧ್ಯಮಯ ಸಾಂಸ್ಕೃತಿಕ ಸೊಗಸಿನೊಂದಿಗೆ ಮೂರು ದಿನಗಳ ಕಾಲ ಅರಮನೆ ಆವರಣದಲ್ಲಿ ನಡೆದ ಯುಗಾದಿ ಸಂಗೀತೋತ್ಸವಕ್ಕೆ ಮಂಗಳವಾರ ವರ್ಣರಂಜಿತ ತೆರೆ ಬಿದ್ದಿತು.

ಮೈಸೂರು ಅರಮನೆ ಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ ಯುಗಾದಿ ಸಂಗೀತೋತ್ಸವ ಕಲಾಸಕ್ತರ ಮನಸೂರೆಗೊಳ್ಳುವಲ್ಲಿ ಯಶಸ್ವಿಯಾಗಿದ್ದು, ಕೊನೆ ದಿನವಾದ ಇಂದೂ ಇಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಮನಮುದಗೊಳಿಸಿ, ಸಂಭ್ರಮಿಸುವಂತೆ ಮಾಡಿದವು.

ಇನಿದನಿ ಮಣ್ಣ ಮಕ್ಕಳ ಹೊನ್ನ ಪದಗಳ ಬಳಗದ ವತಿಯಿಂದ ಡಾ.ಕಾ.ರಾಮೇಶ್ವರಪ್ಪ ನೇತೃತ್ವದಲ್ಲಿ 'ಜಾನಪದವೇ ಸತ್ಯ–ಜಾನಪದವೇ ನಿತ್ಯ' ಶೀರ್ಷಿಕೆಯಡಿ ನಡೆದ ಜಾನಪದ ಹಾಡು–ನೃತ್ಯ ಸಭಿಕರನ್ನು ತಲೆದೂಗುವಂತೆ ಮಾಡಿತು.

ಮುಂಗೋಡದ ಮಾದೇಶ್ವರಗೆ ಶರಣು ಶರಣಯ್ಯ... ಮಾಯಕರಾ ಮಾದೇಶ್ವರಗೆ ಶರಣು ಶರಣಯ್ಯ... ಹೀಗೆ ಮಾದಪ್ಪನ ಮೇಲೆ ಭಕ್ತಿಯ ಪರಾಕಾಷ್ಠೆ ಮೆರೆಯುವ ಜಾನಪದ ಗೀತೆಯನ್ನು ಬಳಗವು ಸಾದರಪಡಿಸಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು. ಜೊತೆಗೆ ಹಾಡಿಗೆ ತಕ್ಕಂತೆ ಜಾನಪದ ಶೈಲಿಯ ಉಡುಗೆ ತೊಡುಗೆ ಧರಿಸಿದ್ದ ಕಲಾವಿದರ ಬಳಗವು ಲಘು ನೃತ್ಯದೊಂದಿಗೆ ಶ್ರೋತೃಗಳನ್ನು ಸಡಗರದಲ್ಲಿ ತೇಲಿಸಿತು.

ಶರಣು ಶರಣಯ್ಯ ಗಣನಾಯ್ಕ... ಗೀತೆ ಸೇರಿದಂತೆ ವಿವಿಧ ಜಾನಪದ ಗೀತೆಗಳನ್ನು ಹಾಡಿ ರಂಜಿಸುವಲ್ಲಿ ಈ ಬಳಗವು ಯಶಸ್ವಿಯಾಯಿತು. ಅರಮನೆ ವಿದ್ಯುತ್ ದೀಪಾಲಂಕಾರದ ಹೊಂಗಿರಣದ ಬೆಳಕಲ್ಲಿ ಜಾನಪದದ ಇನಿಯನ್ನು ಹರಿಸಿದರು.

ಇದಕ್ಕೂ ಮುನ್ನ ಆಕಾಶವಾಣಿ ಎ ಗ್ರೇಡ್ ಕಲಾವಿದ ವಿದ್ವಾನ್ ಆರ್.ಮೋಹನ್ ಅವರ ಕ್ಲಾರಿಯೋನೆಟ್ ವಾದ್ಯ ಸಂಗೀತದ ಹೊನಲು ಸೂಸುವ ಮೂಲಕ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು. ವೇಣುವಾದನದಲ್ಲಿ ವಿದ್ವಾನ್ ಎಸ್.ಪದ್ಮನಾಭ, ವೈಯಲಿನ್‌ನಲ್ಲಿ ವಿದ್ವಾನ್ ಯಶಸ್ವಿ, ತಬಲದಲ್ಲಿ ವಿದ್ವಾನ್ ಎಂ.ಆರ್.ಉದಯಕುಮಾರ್, ಮೃದಂಗದಲ್ಲಿ ವಿದ್ವಾನ್ ವಿಕ್ರಂ ಭಾರಧ್ವಾಜ್, ಮೋರ್ಚಿಂಗ್‌ನಲ್ಲಿ ವಿದ್ವಾನ್ ಜಗದೀಶ್, ರಿದಂ ಪ್ಯಾಡ್‌ನಲ್ಲಿ ವಿದ್ವಾನ್ ಎಸ್. ಶೋಭಿತ್ ಸಹಕಾರ ನೀಡಿ, ವಾದ್ಯಸಂಗೀತ ಇಂಪಿನ ಕಂಪನ ಉಂಟು ಮಾಡಿದರು.

ಬಳಿಕ ಡಾ.ಎಂ.ಪಿ.ಪ್ರೀತಮ್ ಮತ್ತು ತಂಡದ ನೇತೃತ್ವದಲ್ಲಿ ಶ್ರೇಷ್ಠ ಕೆ.ರಾಗ್ ನಡೆಸಿಕೊಟ್ಟ 'ಕನ್ನಡ, ಹಿಂದಿ ಮತ್ತು ಕೊರಿಯಾ ಗೀತೆಗಳ ನೃತ್ಯ' ಕಾರ್ಯಕ್ರಮ ಸಭಿಕರನ್ನು ಬೆರಗಾಗುವಂತೆ ಮಾಡಿತು. ಶ್ರೇಷ್ಠ ಕೆ.ರಾಗ್ ಗಾಯನ ಸಾದರಪಡಿಸಿದರೆ, ಏಳೆಂಟು ಮಂದಿ ಕಲಾವಿದರು ಹಾಡಿಗೆ ತಕ್ಕಂತೆ ನೃತ್ಯ ಪ್ರಸ್ತುತಪಡಿಸಿದರು.

ಕೇಳಿಸದೆ ಕಲ್ಲು ಕಲ್ಲಿನಲಿ ಕನ್ನಡ ನುಡಿ... ಇಂದಿಗೂ ಜೀವಂತ ಶಿಲೆಯೊಳಗೆ ಸಂಗೀತ... ಹಾಗೂ ಬೊಂಬೆ ಹೇಳುತೈತೆ ನೀನೇ ರಾಜಕುಮಾರ... ಗೀತೆಗಳೊಂದಿಗೆ ಹಿಂದಿ ಮತ್ತು ಕೊರಿಯಾ ಗೀತೆಗಳನ್ನು ಶ್ರೇಷ್ಠ ಕೆ.ರಾಗ್ ಹಾಡಿದರೆ, ನೃತ್ಯ ಕಲಾವಿದರ ಕುಣಿದು ಕುಪ್ಪಳಿಸಿದರು. ಈ ತಂಡದ ನೃತ್ಯದ ಬೆಡಗು–ಬಿನ್ನಾಣ ಹಾಗೂ ಗಾನ ಮೋಡಿಗೆ ಸಭಿಕರು ಮನಸೋತರು.



ದೀಪಿಕಾ ಶ್ರೀಕಾಂತ್ ಗಾಯನ ಸಾದರಪಡಿಸುತ್ತಿರುವುದು.

ನಂತರ ದೀಪಿಕಾ ಶ್ರೀಕಾಂತ್ ಮತ್ತು ತಂಡ ನಡೆಸಿಕೊಟ್ಟ ಸುಗಮ ಸಂಗೀತ ಕಾರ್ಯಕ್ರಮ ಸಭಿಕರನ್ನು ಬೆರಗಾಗುವಂತೆ ಮಾಡಿತು. ದ.ರಾ.ಬೇಂದ್ರೆ ರಚನೆಯ 'ಇಳಿದು ಬಾ ತಾಯಿ ಇಳಿದು ಬಾ... ಹರನ ಜಡೆಯಿಂದ ಹರಿಯ ಅಡಿಯಿಂದ...' ಗೀತೆಯನ್ನು ಕೆನರಾ ಬ್ಯಾಂಕ್ ಎದೆ ತುಂಬಿ ಹಾಡಿದೆನು ಕಾರ್ಯಕ್ರಮದ ಸೆಮಿಫೈನಲಿಸ್ಟ್ ಸಹ ಆದ ಗಾಯಕಿ ದೀಪಿಕಾ ಶ್ರೀಕಾಂತ್ ಮತ್ತು ಸುವರ್ಣ ಸ್ಟಾರ್ ಸಿಂಗರ್ ಫೈನಲಿಸ್ಟ್ ಗಾಯಕ ರಾಜೀವ್ ಅಗಳಿ ಅವರು ಜೊತೆಗೂಡಿ ಸಾದರಪಡಿಸಿ ಕೇಳುವರು ತಲೆದೂಗುವಂತೆ ಮಾಡಿದರು.

ದ.ರಾ.ಬೇಂದ್ರೆ ರಚನೆಯ ಘಮ ಘಮ ಘಮ್ಮಾಡಸ್ತಾವ ಮಲ್ಲಿಗೆ ಗೀತೆಯನ್ನು ದೀಪಿಕಾ ಶ್ರೀಕಾಂತ್, ದ.ರಾ.ಬೇಂದ್ರೆ ಅವರದ್ದೇ ರಚನೆಯ ಮತ್ತೊಂದು ಗೀತೆ 'ಶ್ರಾವಣಾ ಬಂತು ಕಾಡಿಗೆ ಬಂತು ನಾಡಿಗೆ...' ಅನ್ನು ರಾಜೀವ್ ಅಗಳಿ ಸಾದರಪಡಿಸಿ, ಸಭಿಕರು ಮಂತ್ರಮುಗ್ಧರಾಗಿ ಮೈಮರೆಯುವಂತೆ ಮಾಡಿದರು. ಇನ್ನು ಅನೇಕ ಗೀತೆಗಳೊಂದಿಗೆ ಈ ಗಾಯಕರು ಸಭಿಕರ ಮನಮುದಗೊಳಿಸಿದರು.

ಪಕ್ಕವಾದ್ಯದಲ್ಲಿ ವಿದ್ವಾನ್ ಪರಶುರಾಮ್ (ಕೀ ಬೋರ್ಡ್), ವಿದ್ವಾನ್ ಶಿವಲಿಂಗು ರಾಜಾಪುರ್ (ಕೊಳಲು), ವಿದ್ವಾನ್ ಆತ್ಮಾರಾಮ್ ಮೈಸೂರು (ತಬಲಾ), ವಿದ್ವಾನ್ ವಿನಯ್ ರಂಗಧೋಳ್ ಮೈಸೂರು (ರಿದಂ ಪ್ಯಾಡ್) ಸಹಕಾರ ನೀಡಿದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮುಖಂಡ ಅಹಿಂದ ಜವರಪ್ಪ ಮತ್ತಿತರರು ಹಾಜರಿದ್ದರು.

ಪಟಾಕಿ ಗೋದಾಮಿನಲ್ಲಿ ಸ್ಫೋಟ: 18 ಮಂದಿ ಸಾವು, ಐವರಿಗೆ ಗಾಯ

ಪಾಲನ್‌ಪುರ, ಏ.1– ಗುಜರಾತ್‌ನ ಬನಸ್ಕಾಂತ ಜಿಲ್ಲೆಯ ಪಟಾಕಿ ಗೋದಾಮಿನಲ್ಲಿ ಸ್ಫೋಟ ಸಂಭವಿಸಿದ್ದು, ಕಟ್ಟಡದ ಸ್ಲ್ಯಾಬ್ ಕುಸಿದು 18 ಮಂದಿ ಮೃತಪಟ್ಟಿದ್ದಾರೆ. ಐದು ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದು (ಮಂಗಳವಾರ) ಬೆಳಗ್ಗೆ 9.45ರ ಸುಮಾರಿಗೆ ದೀಸಾ ಪಟ್ಟಣದ ಬಳಿಯ ಕೈಗಾರಿಕಾ ಪ್ರದೇಶದಲ್ಲಿ ಈ ಅವಘಡ ಸಂಭವಿಸಿದೆ.

'ಘಟನೆಯಲ್ಲಿ 18 ಜನರು ಮೃತಪಟ್ಟಿದ್ದು, ಭಾರಿ ಸ್ಫೋಟದಿಂದ ಕಟ್ಟಡದ ಸ್ಲ್ಯಾಬ್ ಕುಸಿದು ಐದು ಮಂದಿ ಗಾಯಗೊಂಡಿದ್ದಾರೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಅಕ್ಷಯರಾಜ್ ಮಕ್ವಾನಾ ತಿಳಿಸಿದ್ದಾರೆ. ಘಟನೆಯಲ್ಲಿ ಮೃತಪಟ್ಟವರು ಮಧ್ಯಪ್ರದೇಶ ಮೂಲದ ಕಾರ್ಮಿಕರಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಘಟನೆ ಕುರಿತು ಸಂತಾಪ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, 'ದೀಸಾ ಪಟ್ಟಣದ ಪಟಾಕಿ ಗೋದಾಮಿನಲ್ಲಿ ಬೆಂಕಿ ಸ್ಫೋಟ ಮತ್ತು ಸ್ಲ್ಯಾಬ್ ಕುಸಿದು ಕಾರ್ಮಿಕರು ಮೃತಪಟ್ಟಿರುವುದು ಹೃದಯ ವಿದ್ರಾವಕವಾಗಿದೆ. ಈ ದುಃಖದ ಸಮಯದಲ್ಲಿ ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸುತ್ತೇನೆ. ಗಾಯಾಳುಗಳಿಗೆ ಶೀಘ್ರ ಸೂಕ್ತ ಚಿಕಿತ್ಸೆ ಕೊಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ರಾಜ್ಯ ಸರ್ಕಾರವು ಮೃತರ ಕುಟುಂಬಗಳಿಗೆ 4 ಲಕ್ಷ ಮತ್ತು ಗಾಯಾಳುಗಳಿಗೆ 50,000 ಆರ್ಥಿಕ ನೆರವು ಘೋಷಿಸಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಡಾಗ್‌ರೇಸ್ ಆನ್‌ಲೈನ್ ಬೆಟ್ಟಿಂಗ್; ನಾಲ್ವರು ಸಿಸಿಬಿ ಪೊಲೀಸರ ವಶಕ್ಕೆ

ಮೈಸೂರು, ಏ.1(ಎಸ್‌ಬಿಡಿ)– ಡಾಗ್‌ರೇಸ್ ಆನ್‌ಲೈನ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ ನಾಲ್ವರನ್ನು ಮೈಸೂರಿನ ಸಿಸಿಬಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಗರದ ಬನ್ನಿಮಂಟಪದ ನೆಲ್ಸನ್ ಮಂಡೇಲಾ ರಸ್ತೆಯಲ್ಲಿರುವ ಲಾಡ್ಜ್‌ವೊಂದರಲ್ಲಿ ಯುವಕರು ಆನ್‌ಲೈನ್ ಬೆಟ್ಟಿಂಗ್ ಕಟ್ಟಿಕೊಂಡು ಡಾಗ್‌ರೇಸ್(Grey hound) ಆಡುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ದಾಳಿ ನಡೆಸಿ, ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ. ಇದೇ ವೇಳೆ ಆನ್‌ಲೈನ್ ಬೆಟ್ಟಿಂಗ್‌ಗೆ ಬಳಸುತ್ತಿದ್ದ 16 ಮೊಬೈಲ್‌ಗಳು ಹಾಗೂ 29 ಸಿಮ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂಜಾಟ: 8 ಮಂದಿ ಬಂಧನ

ಮೈಸೂರು, ಏ.1(ಎಸ್‌ಬಿಡಿ)– ಮೈಸೂರಿನ ಸಿಸಿಬಿ ಪೊಲೀಸರು ಜೂಜು ಅಡ್ಡೆ ಮೇಲೆ ದಾಳಿ ನಡೆಸಿ, 8 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಬೆಳವಾಡಿ ಗ್ರಾಮದಲ್ಲಿ [illegible] ಕೆಳಗೆ ಜೂಜಾಡುತ್ತಿರುವ ಬಗ್ಗೆ ಮಾಹಿತಿ ತಿಳಿದು ದಾಳಿ ನಡೆಸಿದ ಪೊಲೀಸರು, 8 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ. ಈ ವೇಳೆ ಪಣಕ್ಕಿಟ್ಟಿದ್ದ 49,360 ರೂ. ಹಣವನ್ನೂ ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದಲ್ಲಿರುವುದು 'ದರ ಬೀಜಾಸುರ' ಸರ್ಕಾರ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ



ಬೆಂಗಳೂರು, ಏ.1(ಕೆಎಂಶಿ)–ಕರ್ನಾಟಕದಲ್ಲಿ 'ದರ ಬೀಜಾಸುರ' ಸರ್ಕಾರ ಜನರ ರಕ್ತ ಹೀರುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕರ್ನಾಟಕ ಈಸ್ಟ್ ಇಂಡಿಯಾ ಕಾಂಗ್ರೆಸ್ ಕಂಪನಿ ಸರ್ಕಾರ ಕಸದ ಮೇಲೂ ಸೆಸ್ ವಿಧಿಸುತ್ತಿದೆ. ದಿನಕ್ಕೊಂದು ಸುಳ್ಳು ಹೇಳಿ, ತಿಂಗಳಿಗೊಂದು ವಸ್ತುವಿನ ದರ ಏರಿಕೆ ಮಾಡುತ್ತಿದೆ ಎಂದಿದ್ದಾರೆ.

ದರ ಏರಿಕೆಗೆ ಪಂಚ ಗ್ಯಾರಂಟಿ ನೆಪ ಮಾಡಿಕೊಳ್ಳುತ್ತಿದೆ. ಸರ್ಕಾರದ ದುರುದ್ದೇಶ, ಜನರ ಲೂಟಿ ಮಾಡುವುದಷ್ಟೇ ಆಗಿದೆ. ಭಾರತದ ಮೇಲೆ ಆಕ್ರಮಣ ನಡೆಸಿ ನಿರಂತರ ಲೂಟಿ ಮಾಡಿದ ಮಹಮ್ಮದ್ ಘಜ್ನಿ, ಮಹಮ್ಮದ್ ಘೋರಿ ನಾಚುವಂತೆ ಕಾಂಗ್ರೆಸ್ ಸರ್ಕಾರ ಕನ್ನಡಿಗರ ಮೇಲೆ ದರ ಏರಿಕೆ ಸಮರ ನಡೆಸುತ್ತಿದೆ.

ಕಾಂಗ್ರೆಸ್ ದುರಾಡಳಿತದಿಂದ ಸಮೃದ್ಧ ಕರ್ನಾಟಕ ಹಾಳಾಗುತ್ತಿದ್ದು, ದರ ಬೀಜಾಸುರ ರೂಪ ತಳೆದು ಜನರ ರಕ್ತಹೀರುತ್ತಿದೆ ಎಂದರು.

ನೀರು, ಮೆಟ್ರೋ ರೈಲು, ಬಸ್ ಪ್ರಯಾಣ, ಹಾಲು, ವಿದ್ಯುತ್ ದರ, ಮುದ್ರಾಂಕ ಶುಲ್ಕ, ಮಾರ್ಗದರ್ಶಿ ಮೌಲ್ಯ, ಅಬ್ಕಾರಿ ಸುಂಕ, ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರರೋಗಿಗಳ ಶುಲ್ಕ, ಶವದ ಮರಣೋತ್ತರ ಪರೀಕ್ಷೆ ಶುಲ್ಕ, ವೈದ್ಯಕೀಯ ಪ್ರಮಾಣಪತ್ರ ದರ, ಲ್ಯಾಬ್‌ನಲ್ಲಿ ಪರೀಕ್ಷೆ ಶುಲ್ಕ, ಬಿತ್ತನೆ ಬೀಜಗಳ ದರ ಏರಿಕೆ ಮಾಡಿದೆ

ಮಲೆ ಮಹದೇಶ್ವರ ಸ್ವಾಮಿಯ ಉತ್ಸವ



ಮೈಸೂರಿನ ಕನ್ನೇಗೌಡನ ಕೊಪ್ಪಲು ಶ್ರೀ ಏಳು ಮಲೆ ಮಹದೇಶ್ವರ ಸ್ವಾಮಿ ಭಕ್ತ ಮಂಡಳಿ ವತಿಯಿಂದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಉತ್ಸವವನ್ನು ಏರ್ಪಡಿಸಲಾಗಿತ್ತು. ಈ ವೇಳೆ ಗ್ರಾಮದ ಹಿರಿಯರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಗೋಪಾಲಕರ ಸಂಘದ ಉಪಾಧ್ಯಕ್ಷ ಎಸ್.ಮೊಗಣ್ಣ, ಎಂ.ರವಿಗೌಡ, ಟಿ.ಬಸವರಾಜ್, ರಂಗಪ್ಪ, ಬೋರಲಿಂಗು, ಪಾಲಿಕೆ ಮಾಜಿ ಸದಸ್ಯ ಎಸ್. ಬಾಲು, ಟಿ. ರವಿಗೌಡ, ಬೈರಪ್ಪ, ಕಾಳಪ್ಪ, ಹರೀಶ್, ಕರಿಯಪ್ಪ, ನಾಗೇಂದ್ರ, ರಮೇಶ್, ಬಸವರಾಜು, ಸುಬ್ರಮಣಿ, ಪುರುಷೋತ್ತಮ, ಮಂಜು(ಮಿಲ್ಕ್), ಗುರು, ಕುಮಾರ, ನಾಗೇಶ, ಮಹೇಶ, ಮಹದೇವ(ಮರ್ಚಿ), ಇತರ ಮುಖಂಡರನ್ನು ಕಾಣಬಹುದು.

ಪ್ರತ್ಯೇಕ ಅಪಘಾತ ಪ್ರಕರಣ: ನಾಲ್ವರ ಸಾವು

ಹಲವು ಮಂದಿಗೆ ಗಾಯ



ಗುಂಡ್ಲುಪೇಟೆ ಬಳಿ ನಡೆದ ಅಪಘಾತದ ದೃಶ್ಯ

ನಂಜನಗೂಡು/ಗುಂಡ್ಲುಪೇಟೆ, ಏ.1– ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ನಾಲ್ವರು ಸಾವನ್ನಪ್ಪಿ, ಹಲವು ಮಂದಿ ಗಾಯಗೊಂಡಿರುವ ಘಟನೆ ನಂಜನಗೂಡು ಹಾಗೂ ಗುಂಡ್ಲುಪೇಟೆ ಬಳಿ ನಡೆದಿದೆ.

ನಂಜನಗೂಡು: ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಇಬ್ಬರು ಸಾವನ್ನಪ್ಪಿ, ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ದೊಡ್ಡಕವಲಂದೆ ಹೋಬಳಿಯ ಚಿಕ್ಕಹೊಮ್ಮ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ತಾಲೂಕಿನ ತೊರವಳ್ಳಿ ಗ್ರಾಮದ ನಿವಾಸಿ ಶಿವಕುಮಾರ್ (30) ಹಾಗೂ ಚಿಕ್ಕಹೊಮ್ಮ ಗ್ರಾಮದ ನಿವಾಸಿ ಮಹೇಶ್(22) ಸಾವನ್ನಪ್ಪಿದವರು. ಸೋಮವಾರ ರಾತ್ರಿ ಶಿವಕುಮಾರ್ ಅವರು ತನ್ನ ಸ್ನೇಹಿತ ಬಸವರಾಜು ಎಂಬುವರೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಚಿಕ್ಕಹೊಮ್ಮ ಮತ್ತು ಕಾರೆಮೋಳೆ ಗ್ರಾಮಗಳ ಮುಖ್ಯ ರಸ್ತೆಯಲ್ಲಿ ಎದುರಿಗೆ ಬೈಕ್‌ನಲ್ಲಿ ವೇಗವಾಗಿ ಬಂದ ಮಹೇಶ್ ಡಿಕ್ಕಿ ಹೊಡೆದಿದ್ದಾನೆ. ಡಿಕ್ಕಿ ಹೊಡೆದ ರಭಸಕ್ಕೆ ಎರಡೂ ಬೈಕ್‌ಗಳಲ್ಲಿದ್ದ ಸವಾರರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಶಿವಕುಮಾರ್ ಹಾಗೂ ಮಹೇಶ್ ಸಾವನ್ನಪ್ಪಿದ್ದಾರೆ. ಉಳಿದಂತೆ ಶಿವಕುಮಾರ್ ಜೊತೆಗಿದ್ದ ಬಸವರಾಜು ಹಾಗೂ ಮಹೇಶ್ ಬೈಕ್‌ನಲ್ಲಿದ್ದ ಇನ್ನಿಬ್ಬರು ಅಪರಿಚಿತ ಯುವಕರು ಗಾಯಗೊಂಡಿದ್ದು, ಅವರನ್ನು ಚಾಮರಾಜನಗರ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕವಲಂದೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿದರು. ಬಳಿಕ ಪ್ರಕರಣ ದಾಖಲಿಸಿಕೊಂಡು, ಮರಣೋತ್ತರ ಪರೀಕ್ಷೆ ಬಳಿಕ ಶವಗಳನ್ನು ವಾರಸುದಾರರಿಗೆ ಹಸ್ತಾಂತರಿಸಿದರು. ಈ ಸಂಬಂಧ ಕವಲಂದೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿವಕುಮಾರ್

ಗುಂಡ್ಲುಪೇಟೆ: ಟೆಂಪೋ ಟ್ರಾವೆಲರ್(ಟಿಟಿ) ಹಾಗೂ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಇಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಬೆಂಡಹಳ್ಳಿ ಗೇಟ್ ಬಳಿ ಮಂಗಳವಾರ ನಡೆದಿದೆ.

ಕೇರಳ ಮೂಲದ ನಿವಾಸಿಗಳಾದ ಶಾಹಿದ್(40) ಹಾಗೂ ಮುಸ್ಕಾನ್(19) ಸಾವನ್ನಪ್ಪಿದವರು. ಮಂಗಳವಾರ ಕೇರಳದಿಂದ ಮೈಸೂರಿನತ್ತ ತೆರಳುತ್ತಿದ್ದ ಕಾರಿಗೆ ನಂಜನಗೂಡಿನಿಂದ ಗುಂಡ್ಲುಪೇಟೆಯತ್ತ ತೆರಳುತ್ತಿದ್ದ ಟಿಟಿ ಡಿಕ್ಕಿ ಹೊಡೆದಿದೆ. ಪರಿಣಾಮ ಕಾರಿನಲ್ಲಿದ್ದ ಶಾಹೀದ್ ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದರೆ, ಮುಸ್ಕಾನ್ ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ ಡಿಕ್ಕಿ ರಭಸಕ್ಕೆ ಕಾರು ಸಂಪೂರ್ಣ ನುಜ್ಜುಗುಜ್ಜಾಗಿದೆ. ಇನ್ನು ಕಾರಿನಲ್ಲಿದ್ದ ಶಾಜಿಯಾ ಮತ್ತು ಐವರು ಹಾಗೂ ಟಿಟಿ ಚಾಲಕ ನಗರ್ಲೆ ಗ್ರಾಮದ ಸಾಗರ್ ಸೇರಿದಂತೆ ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ವಾಹನಗಳನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಮಾರ್ಟ್ ಮೀಟರ್ ಹಗರಣದಲ್ಲಿ ಸರ್ಕಾರದಿಂದ ವ್ಯವಸ್ಥಿತ ಲೂಟಿ

●ಮಾಜಿ ಡಿಸಿಎಂ ಡಾ. ಅಶ್ವತ್ಥನಾರಾಯಣ ಆರೋಪ ●ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಹಗರಣದ ಮಾಹಿತಿ ಬಹಿರಂಗ



ಬೆಂಗಳೂರು, ಏ.1(ಕೆಎಂಶಿ)–ರಾಜ್ಯದಲ್ಲಿ ಸ್ಮಾರ್ಟ್ ಮೀಟರ್ ಹಗರಣ ವ್ಯವಸ್ಥಿತವಾಗಿ ನಡೆದಿದೆ. 9 ಸುಳ್ಳುಗಳನ್ನು ಹೇಳಿದ್ದಾರೆ ಎಂದು ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ವಿವರ ನೀಡಿದ ಅವರು, ಸಚಿವರು ಮತ್ತು ಇಲಾಖಾ ಉನ್ನತಾಧಿಕಾರಿಗಳು ಸಮರ್ಪಕ ಮಾಹಿತಿ ನೀಡುತ್ತಿಲ್ಲ. ಇಂಧನ ಸಚಿವರು ಭಾರತ ಸರ್ಕಾರದ ನಿಯಮಗಳ ಪ್ರಕಾರ, ಟೆಂಡರ್ ಮಾಡಿದ್ದು, ಪ್ರೀಬಿಡ್ ಟೆಂಡರ್‌ನಲ್ಲಿ ಯಾರೂ ಪಾಲ್ಗೊಂಡಿರಲಿಲ್ಲ ಎಂದಿದ್ದಾರೆ. ಆದರೆ, 10 ಮಂದಿ ಭಾಗವಹಿಸಿದ್ದು, 117 ಜನ ಮಾಹಿತಿ ಕೇಳಿದ್ದರು ಎಂದರು.

ಕೇಂದ್ರದ ನಿಯಮಾವಳಿಯಂತೆ ಒಂದು ಲಕ್ಷ ಸ್ಮಾರ್ಟ್ ಮೀಟರ್ ಉತ್ಪಾದಿಸಿ ವಿತರಿಸಿದ ಅನುಭವ ಇರುವವರನ್ನು ಆಯ್ಕೆ ಮಾಡಬೇಕಿತ್ತು, ಟೆಂಡರ್ 200 ಕೋಟಿ ರೂ.ಗಿಂತ ಹೆಚ್ಚು ಮೊತ್ತದ್ದಾದರೆ ಗ್ಲೋಬಲ್ ಟೆಂಡರ್ ಕರೆಯಬೇಕು.

ಪ್ರೀಬಿಡ್ ವೇಳೆ ಇದನ್ನು ಪರಿಗಣಿಸಿಲ್ಲ. ಇಂಧನ ಮೀಟರ್‌ಗೆ ಸಂಬಂಧಿಸಿ ಕರ್ನಾಟಕದಲ್ಲಿ ರಿಟೇಲ್ ಔಟ್‌ಲೆಟ್‌ನಲ್ಲಿ 5 ವರ್ಷ ಅನುಭವ ಇರಬೇಕೆಂಬ ನಿಯಮವನ್ನೂ ಪರಿಗಣಿಸಿಲ್ಲ.

ಮೀಟರ್ ಡಾಟಾ ಮ್ಯಾನೇಜ್‌ಮೆಂಟ್ ಸಲ್ಯೂಷನ್ ಅನ್ನು ಗ್ಲೋಬಲ್ ಆಗಿ ತೆಗೆದುಕೊಂಡಿಲ್ಲ, ಡಿಬಾರ್–ಬ್ಲ್ಯಾಕ್ ಲಿಸ್ಟ್ ಆದವರನ್ನು ಪರಿಗಣಿಸಬಾರದು ಎಂಬ ನಿಯಮವಿದೆ, ಗ್ಲೋಬಲ್ ಎಂಬುದನ್ನು ಪರಿಗಣಿಸಿಯೇ ಇಲ್ಲ

ಕೇಂದ್ರದ ನಿಯಮಾವಳಿಯಂತೆ ಟೆಂಡರ್ ಕರೆದಿದ್ದೇವೆ ಎಂಬುದೇ ಸುಳ್ಳು. ಪ್ರಮುಖ ನಿಯಮಾವಳಿಗಳನ್ನು ಉಲ್ಲಂಘಿಸಲಾಗಿದೆ. ಸಚಿವರು, ತಾತ್ಕಾಲಿಕ ಸಂಪರ್ಕ ಪಡೆಯುವವರಿಗೆ ಹಾಗೂ ಹೊಸ ಗ್ರಾಹಕರಿಗೆ ಸ್ಮಾರ್ಟ್ ಮೀಟರ್ ಕಡ್ಡಾಯ ಎಂದಿದ್ದಾರೆ. ಆದರೆ, ಅಧಿಕಾರಿಗಳು ಕಡ್ಡಾಯವಲ್ಲ ಎಂದಿದ್ದಾರೆ.

ಗ್ರಾಹಕರ ಹಣ ಲೂಟಿ ಮಾಡಲು ಸರ್ಕಾರ ಮುಂದಾಗಿದೆ, ಇದರಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಲೂಟಿ, ಕಳ್ಳತನ ನಡೆಯುತ್ತಿದೆ. ಅಧಿಕಾರ ದುರ್ಬಳಕೆ ಮಾಡಿಕೊಂಡು ಸ್ವಾರ್ಥ ಲಾಭಕ್ಕಾಗಿ ಸ್ಮಾರ್ಟ್ ಮೀಟರ್ ಅಳವಡಿಸಲು ಮುಂದಾಗಿದ್ದಾರೆ. ಇವರಿಗೆ ಶಿಕ್ಷೆ ಆಗಲೇಬೇಕು, ಇದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ ಎಂದರು.

ಸಿಎಂ ಕಚೇರಿಯಲ್ಲಿದ್ದ ಗುತ್ತಿಗೆ ಸಿಬ್ಬಂದಿ ವಜಾ

ಬೆಂಗಳೂರು, ಏ.1(ಬಿಎಲ್‌ಯು)– ಮುಖ್ಯಮಂತ್ರಿಗಳ ಸಚಿವಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ 30 ಸಿಬ್ಬಂದಿಯನ್ನು ಸೇವೆಯಿಂದ ವಜಾಗೊಳಿಸಲಾಗಿದೆ. ಈ ಸಿಬ್ಬಂದಿಯ ಸೇವೆ ಅವಶ್ಯಕತೆ ಇಲ್ಲದ ಕಾರಣ ಇಂದು (ಏಪ್ರಿಲ್ 1) ಜಾರಿಗೆ ಬರುವಂತೆ ವಜಾ ಮಾಡಲಾಗಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಸಹಾಯಕರಾದ ವಿ.ಪದ್ಮಬಾಯಿ, ಮಧುಸೂದನ್, ಕುಮಾರಿ ಅನುಷಾ ಸಿ.ಪಿ., ಕೆ.ವಿ.ಮಮತ, ಎನ್.ಜೆ.ಪ್ರಿಯಾಂಕ, ಎನ್. ಮಮತ, ದಾಸೇಗೌಡ ವೈ.ಹೆಚ್., ಚನ್ನಮಲ್ಲಿಕಾರ್ಜುನಪ್ಪ ಟಿ.ಎಸ್., ತೇಜಸ್ವಿ ಕೆ.ಎಸ್., ವಾಸುದೇವ ಹೆಚ್, ಪ್ರತಾಪ್ ಕೆ.ಆರ್., ಗಣಪತಿ ಜಿ.ಕೆ., ಮಂಜುಳಾ ದೇವಿ ಎಸ್, ಶ್ರೀನಾಥ್ ಎಂ., ಆಶಾ ಆರ್.ಪಿ. ಸೇರಿದಂತೆ 30 ಸಿಬ್ಬಂದಿಗಳನ್ನು ಇಂದಿನಿಂದ ಜಾರಿಗೆ ಬರುವಂತೆ ಮುಖ್ಯಮಂತ್ರಿಗಳ ಸಚಿವಾಲಯದಿಂದ ಕಾರ್ಯ ವಿಮುಕ್ತಿಗೊಳಿಸಲಾಗಿದೆ ಎಂದು ಆದೇಶಿಸಲಾಗಿದೆ.

ಮೈಸೂರು ಮಿತ್ರ

46ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆ

'ಮೈಸೂರು ಮಿತ್ರ' ಪ್ರಾದೇಶಿಕ ದಿನ ಪತ್ರಿಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 46ನೇ ವರ್ಷಕ್ಕೆ ಪಾದಾರ್ಪಣೆಗೈಯ್ಯುವ ಈ ಸುಸಂದರ್ಭದಲ್ಲಿ 16–04–2025 (ಬುಧವಾರ) ರಂದು ವರ್ಣರಂಜಿತ ಆಕರ್ಷಕ ವಿಶೇಷಾಂಕವನ್ನು ಹೊರತರಲಾಗುವುದು. ಇದರ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ. 'ಮೈಸೂರು ಮಿತ್ರ' ಪ್ರಸರಣ ಹೊಂದಿರುವ ಐದು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ) ಪ್ರತಿಭಾವಂತ ಕಥೆಗಾರರನ್ನು ಬೆಳಕಿಗೆ ತರುವುದು ಈ ಸ್ಪರ್ಧೆಯ ಮೂಲ ಉದ್ದೇಶ.

ಉತ್ತಮವಾದ ಐದು ಕಥೆಗಳಿಗೆ ನಗದು ಬಹುಮಾನ

● ಪ್ರಥಮ ಬಹುಮಾನ	:	ರೂ. 8,000
● ದ್ವಿತೀಯ ಬಹುಮಾನ	:	ರೂ. 6,000
● ತೃತೀಯ ಬಹುಮಾನ	:	ರೂ. 4,000
● ಪ್ರೋತ್ಸಾಹಕ ಬಹುಮಾನಗಳು (ಎರಡು)	:	ರೂ. 2,500

ಸ್ಪರ್ಧೆಯ ನಿಯಮಗಳು

- ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು.
- ಕಥೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ news@mysurumithra.com ಇ–ಮೇಲ್ ಮಾಡಬಹುದು. ಇಲ್ಲವೆ ಅಂಚೆ ಮೂಲಕವೂ ಕಳಿಸಬಹುದು. ಕಥೆ ಐದು ಪುಟಗಳನ್ನು (ಒಂದೇ ಮಗ್ಗಲು) ಮೀರದಂತಿರಬೇಕು. ಅನುವಾದ–ರೂಪಾಂತರಗಳನ್ನು ಪರಿಗಣಿಸುವುದಿಲ್ಲ.
- ಸ್ಪರ್ಧಿಗಳು ಕಥೆಯ ಶಿರೋನಾಮೆ, ತಮ್ಮ ಹೆಸರು–ವಿಳಾಸ, ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಮತ್ತು ಕಿರು ಪರಿಚಯವನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಫುಟವಾಗಿ ಬರೆದು ಕಥೆಯೊಡನೆ ಲಗತ್ತಿಸಬೇಕು.
- ಸ್ಪರ್ಧೆಗೆ ಕಳುಹಿಸಲಾಗುವ ಕಥೆ ಈಗಾಗಲೇ ಬೇರೆಲ್ಲೂ ಪ್ರಕಟವಾಗಿರಕೂಡದು.
- ತೀರ್ಪುಗಾರರ ಮಂಡಳಿಯ ತೀರ್ಮಾನವೇ ಅಂತಿಮವಾದುದು. ಪ್ರಥಮ ಬಹುಮಾನಿತ ಕಥೆಯನ್ನು ವಿಶೇಷಾಂಕದಲ್ಲಿಯೂ, ಇತರ ಬಹುಮಾನ ಪಡೆದ ಕಥೆಗಳನ್ನು ಯಥಾವಕಾಶ 'ವಾರದ ಮಿತ್ರ' ಸಾಪ್ತಾಹಿಕ ಪುರವಣಿಯಲ್ಲಿಯೂ ಪ್ರಕಟಿಸಲಾಗುವುದು.
- ಬಹುಮಾನಿತ ಕಥೆಗಳ ಸಂಪೂರ್ಣ ಸ್ವಾಮ್ಯ 'ಮೈಸೂರು ಮಿತ್ರ'ನಿಗೆ ಸೇರಿದ್ದು.
- ಅಂಚೆಯಲ್ಲಿ ಕಥೆಗಳು ಸೂಕ್ತ ಸಮಯಕ್ಕೆ ತಲುಪದಿದ್ದಲ್ಲಿ 'ಮೈಸೂರು ಮಿತ್ರ' ಜವಾಬ್ದಾರಿಯಲ್ಲ ಮತ್ತು ಕಥೆಗಳನ್ನು ಯಾವ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ಕಥೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳುವುದೊಳಿತು.
- ಈ ನಿಯಮಾವಳಿಯನ್ನು ಪಾಲಿಸದ ಕಥೆಗಳನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ವಿ.ಸೂ.: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಉದ್ಯೋಗಿಗಳು ಹಾಗೂ ಅವರ ಸಂಬಂಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಕಥೆ ನಮ್ಮ ಕೈಸೇರಲು ಕೊನೆಯ ದಿನಾಂಕ 05–04–2025

ವಿಳಾಸ: ಸಂಪಾದಕರು, 'ಮೈಸೂರು ಮಿತ್ರ' ವಾರ್ಷಿಕ ವಿಶೇಷಾಂಕ
ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು–570 015
ದೂರವಾಣಿ: 2496520, 2496521, 2496526, 2496527

1 ಕಿಸ್‌ಗೆ 50 ಸಾವಿರ! ಫುಲ್ ಕೋ ಆಪರೇಷನ್‌ಗೆ 15 ಲಕ್ಷ!!


ಖತರ್ನಾಕ್ ಟೀಚರ್ ನೇತೃತ್ವದ ಹನಿಟ್ರ್ಯಾಪ್ ಗ್ಯಾಂಗ್ ಬಂಧನ

ಬೆಂಗಳೂರು, ಏ.1– ರಾಜ್ಯದಲ್ಲಿ ಸಚಿವರ ಹಾಗೂ ಇತರ ಪ್ರಭಾವಿ ರಾಜಕಾರಣಿಗಳ ಹನಿಟ್ರ್ಯಾಪ್‌ಗೆ ಯತ್ನ ಪ್ರಕರಣ ದೇಶಾದ್ಯಂತ ಭಾರಿ ಸದ್ದು ಮಾಡುತ್ತಿರುವ ಹೊತ್ತಲ್ಲಿ ಬೆಂಗಳೂರು ಪೊಲೀಸರು ಖಾಸಗಿ ಪ್ರೀಸ್ಕೂಲ್ ಶಿಕ್ಷಕಿ ಸೇರಿದಂತೆ ಹನಿಟ್ರ್ಯಾಪ್ ಗ್ಯಾಂಗ್ ಒಂದನ್ನು ಅರೆಸ್ಟ್ ಮಾಡಿದ್ದಾರೆ.

ಶಿಕ್ಷಕಿ ತನ್ನ ಪ್ರೀಸ್ಕೂಲ್‌ಗೆ ಬರುತ್ತಿದ್ದ ಮಗುವಿನ ತಂದೆಗೆ ಮುತ್ತು ಕೊಟ್ಟು ಹನಿಟ್ರ್ಯಾಪ್ ಮಾಡಿದ್ದಲ್ಲದೆ, ಲಕ್ಷಾಂತರ ರೂಪಾಯಿ ಹಣಕ್ಕೆ ಬೇಡಿಕೆ ಇಟ್ಟಿದ್ದಾಳೆ. ಒಂದು ಕಿಸ್‌ಗೆ 50 ಸಾವಿರ ರೂ. ಕೇಳಿದರೆ, ಅದರ ಜೊತೆಗೆ ಫುಲ್ ಕೋ ಆಪರೇಷನ್‌ಗೆ 15 ಲಕ್ಷ ರೂ. ಬೇಡಿಕೆಯಿಟ್ಟಿದ್ದಳು ಎನ್ನುವುದು ತನಿಖೆಯ ವೇಳೆ ಬೆಳಕಿಗೆ ಬಂದಿದೆ.

2023ರಲ್ಲಿ ಪ್ಲೇ ಹೋಮ್‌ಗೆ ಬರುತ್ತಿದ್ದ ಮಗುವಿನ ತಂದೆ ಉದ್ಯಮಿಯನ್ನು ಆರೋಪಿ ಶಿಕ್ಷಕಿ ಪರಿಚಯ ಮಾಡಿಕೊಂಡಿದ್ದು, ಬಳಿಕ ಅವರ ಬಳಿ ಶಾಲೆ ನಿರ್ವಹಣೆಗಾಗಿ 2 ಲಕ್ಷ ರೂ. ಸಾಲ ಪಡೆದಿದ್ದಾರೆ. ಅಲ್ಲದೆ ಸಾಲದ ಹಣವನ್ನು 2024ರಲ್ಲಿ ವಾಪಸ್ ಕೊಡುವುದಾಗಿ ತಿಳಿಸಿದ್ದಳು. ಹಣ ವಾಪಸ್ ಕೇಳಿದಾಗ ಶಾಲೆಗೆ ಪಾರ್ಟ್ನರ್ ಆಗು ಎಂದು ಹೇಳಿದ್ದು, ಬಳಿಕ ಇಬ್ಬರ ನಡುವೆ ಸಲುಗೆ ಬೆಳೆದು ಸುತ್ತಾಟ ಆರಂಭವಾಗಿತ್ತು. ಈ ಶಿಕ್ಷಕಿ ಜೊತೆ ಮಾತನಾಡಲು ಉದ್ಯಮಿ ಹೊಸ ಸಿಮ್ ಹಾಗೂ ಫೋನ್ ಅನ್ನು ಸಹ ಖರೀದಿಸಿದ್ದರು.

ಜನವರಿ ಮೊದಲ ವಾರದಲ್ಲಿ ಉದ್ಯಮಿ, ಶಿಕ್ಷಕಿ ಬಳಿ ಹಣ ವಾಪಸ್ ಕೇಳಿದ್ದಕ್ಕೆ ನಿನಗೆ ಏನು ಬೇಕು ಕೇಳು ಕೊಡುತ್ತೇನೆ. ಹಣಕಾಸಿನ ವ್ಯವಹಾರ ಒಂದೇ ಸಲ ಮುಗಿಸಿಬಿಡೋಣ ಎಂದಿದ್ದಾಳೆ. ಬಳಿಕ ಒಂದು ದಿನ ಉದ್ಯಮಿ ಮನೆಗೆ ತೆರಳಿದ ಆರೋಪಿ ಶಿಕ್ಷಕಿ, ಒಂದು ಮುತ್ತು ಕೊಟ್ಟು 50 ಸಾವಿರ ರೂ. ಪಡೆದಿದ್ದಳು. ಜೊತೆಗೆ ನಿನ್ನ ಜೊತೆ ರಿಲೇಷನ್‌ಶಿಪ್‌ನಲ್ಲಿ ಇರುತ್ತೇನೆ ಎಂದು ಆಫರ್ ನೀಡಿ, 15 ಲಕ್ಷ ರೂ.ಗೆ ಡಿಮ್ಯಾಂಡ್ ಇಟ್ಟಿದ್ದಾಳೆ. ಆದರೆ ಇದಕ್ಕೆ ಉದ್ಯಮಿ ಒಪ್ಪಿರಲಿಲ್ಲ. ಆದರೂ ಪದೇ ಪದೆ ಹಣಕ್ಕೆ ಡಿಮ್ಯಾಂಡ್ ಮಾಡುತ್ತಿದ್ದರಿಂದ ರೋಸಿ ಹೋಗಿದ್ದ ಉದ್ಯಮಿ, ಸಿಮ್ ಮುರಿದು ಶಿಕ್ಷಕಿಯಿಂದ ಅಂತರ ಕಾಯ್ದುಕೊಂಡಿದ್ದಾರೆ.



ಹನಿಟ್ರ್ಯಾಪ್‌ಗೆ ಯತ್ನಿಸಿ ತಗ್ಲಾಕೊಂಡವರು

ಮಾರ್ಚ್ 12 ರಂದು ಉದ್ಯಮಿ ಪತ್ನಿಗೆ ಕರೆ ಮಾಡಿದ್ದ ಶಿಕ್ಷಕಿ, ಮಕ್ಕಳ ಸ್ಕೂಲ್ ಟಿಸಿ ಕಳುಹಿಸಿಕೊಡುತ್ತೇನೆ, ನಿಮ್ಮ ಪತಿಯನ್ನು ಕಳುಹಿಸಿ ಎಂದಿದ್ದಳು. ಅದರಂತೆ ಪ್ರೀ ಸ್ಕೂಲ್‌ಗೆ ಉದ್ಯಮಿ ತೆರಳಿದ್ದರು. ಆಗ ಅಲ್ಲಿ ಶಿಕ್ಷಕಿ ಜೊತೆ ಹಾಜರಿದ್ದ ಇತರೆ ಆರೋಪಿಗಳಾದ ಸಾಗರ್ ಹಾಗೂ ಗಣೇಶ್ ಬೆದರಿಕೆ ಹಾಕಿದ್ದಾರೆ.

ಸಾಗರ್ ಜೊತೆ ಶಿಕ್ಷಕಿಗೆ ನಿಶ್ಚಿತಾರ್ಥ ಆಗಿದೆ. ಆದರೆ ನೀನು ಆಕೆ ಜೊತೆ ಮಜಾ ಮಾಡುತ್ತಿದ್ದಿ ಎಂದು ಆರೋಪಿ ಗಣೇಶ್ ಬೆದರಿಕೆ ಹಾಕಿದ್ದ. ಬಳಿಕ ಕಾರಿನಲ್ಲಿ ಕೂರಿಸಿಕೊಂಡು, ಯಾರಿಗೂ ವಿಚಾರ ಹೇಳಬಾರದು ಎಂದರೆ 1 ಕೋಟಿ ರೂ. ಕೊಡು ಎಂದು ಬ್ಲ್ಯಾಕ್ ಮೇಲ್ ಮಾಡಿದ್ದಾರೆ. ಕೊನೆಗೆ ಆರೋಪಿಗಳು 20 ಲಕ್ಷ ರೂ.ಗೆ ಬೇಡಿಕೆ ಇಟ್ಟಿದ್ದರು. ನಂತರ 1.90 ಲಕ್ಷ ಹಣ ಪಡೆದು ಬಿಟ್ಟು ಕಳುಹಿಸಿದ್ದರು. ಆದರೆ, ಉಳಿದ ಹಣ ನೀಡುವಂತೆ ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಉದ್ಯಮಿ ಸಿಸಿಬಿ ಪೊಲೀಸರಿಗೆ ದೂರು ನೀಡಿದ್ದಾರೆ.

ಮಾ.17ರಂದು ಮತ್ತೆ ಉದ್ಯಮಿಗೆ ಆರೋಪಿತೆ ಕರೆ ಮಾಡಿದ್ದಳು. ಮತ್ತೆ ಉದ್ಯಮಿಗೆ 15 ಲಕ್ಷ ಹಣ ಕೊಡುವಂತೆ ಡಿಮ್ಯಾಂಡ್ ಮಾಡಿದ್ದರು. ಹಣ ಕೊಟ್ಟರೆ ಅಶ್ಲೀಲ ವೀಡಿಯೋ, ಚಾಟಿಂಗ್ ಡಿಲೀಟ್ ಮಾಡ್ತೀನಿ. ಇಲ್ಲವಾದರೆ ನಿನ್ನ ಪತ್ನಿಗೆ ತೋರಿಸಿ ನಿನ್ನ ಸಂಸಾರವನ್ನೇ ಹಾಳು ಮಾಡ್ತೀವೆಂದು ಬ್ಲ್ಯಾಕ್‌ಮೇಲ್ ಮಾಡಿದ್ದಾಳೆ ಎಂದು ಉದ್ಯಮಿ ಆರೋಪಿಸಿದ್ದಾರೆ.

ಸದ್ಯ ದೂರಿನನ್ವಯ ಪೊಲೀಸರು ಶಿಕ್ಷಕಿ, ಸಾಗರ್ ಮೋರೆ, ಗಣೇಶ್ ಕಾಳೆಯನ್ನು ಬಂಧಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ಮೂವರನ್ನು ಕಸ್ಟಡಿಗೆ ಪಡೆದಿದ್ದಾರೆ. ವಿಚಾರಣೆ ವೇಳೆ ಗಣೇಶ್ ಕಾಳೆ ಬಿಜಾಪುರ ರೌಡಿಶೀಟರ್ ಎಂಬ ವಿಚಾರ ಗೊತ್ತಾಗಿದೆ. ಈತನ ವಿರುದ್ಧ 9 ಪ್ರಕರಣಗಳಿರುವುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ.

ಮೈಸೂರು ಮಿತ್ರ ಬುಧವಾರ 2 ಏಪ್ರಿಲ್ 2025


ಇಂದಿನಿಂದ ವೈರಮುಡಿ ಜಾತ್ರಾ ಮಹೋತ್ಸವ ಆರಂಭ

ಮೇಲುಕೋಟೆ: ವೈರಮುಡಿ ಜಾತ್ರಾ ಮಹೋತ್ಸವ ಬುಧವಾರ (ಏ.2) ಅಂಕುರಾರ್ಪಣೆಯೊಂದಿಗೆ ಆರಂಭವಾಗಲಿದೆ.

ವೈರಮುಡಿ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಏ.14ರ ಶೇರ್ತಿ ಸೇವೆಯವರೆಗೆ 14 ದಿನಗಳ ಕಾಲ ನಡೆಯಲಿದೆ. ಬ್ರಹ್ಮೋತ್ಸವದಲ್ಲಿ ಏ.10ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಮಹಾರಥೋತ್ಸವ, ಏ.11ರಂದು ರಾತ್ರಿ 7 ಗಂಟೆಗೆ ಕಲ್ಯಾಣಿಯಲ್ಲಿ ನಡೆಯುವ ತೆಪ್ಪೋತ್ಸವ, ಏ.12ರಂದು ಬೆಳಿಗ್ಗೆ 11 ಗಂಟೆಗೆ ತೀರ್ಥಸ್ನಾನ, ಸಂಜೆ 5 ಗಂಟೆಗೆ ಪಟ್ಟಾಭಿಷೇಕ ಮಹೋತ್ಸವಗಳು ಪ್ರಮುಖ ಉತ್ಸವಗಳಾಗಿವೆ.

ಉಳಿದಂತೆ ಏ.3ರಂದು ಸಂಜೆ 5ಗಂಟೆಗೆ ಕಲ್ಯಾಣಿಯ ಧಾರಾ ಮಂಟಪದಲ್ಲಿ ಕಲ್ಯಾಣೋತ್ಸವ ಏ4ರಂದು ಬೆಳಿಗ್ಗೆ 9ಗಂಟೆಗೆ ಧ್ವಜಾರೋಹಣ, ರಾಮಾನುಜಾಚಾರ್ಯರಿಗೆ ಅಭಿಷೇಕ, ಏ.6 ರಂದು ಸಂಜೆ ಕಲ್ಯಾಣಿಯಲ್ಲಿ ನಾಗವಲ್ಲೀ ಮಹೋತ್ಸವ, 8ರಂದು ಸಂಜೆ 5ಗಂಟೆಗೆ ನಡೆಯುವ ಪ್ರಹ್ಲಾದ ಪರಿಪಾಲನೋತ್ಸವ, 9ರಂದು ಸಂಜೆ 6.30ಕ್ಕೆ ನಡೆಯುವ ಗಜೇಂದ್ರಮೋಕ್ಷ ಉತ್ಸವ, 13ರಂದು ನಡೆಯುವ ಮಹಾಭಿಷೇಕ ಜಾತ್ರಾ ಮಹೋತ್ಸವದಲ್ಲಿ ನಡೆಯುವ ವಿಶೇಷ ಉತ್ಸವಗಳಾಗಿದೆ.

ವೈರಮುಡಿ ಕಿರೀಟಧಾರಣ ಮಹೋತ್ಸವ: ಮೇಲುಕೋಟೆ ದೇವಾಲಯದಲ್ಲಿ ಅತ್ಯಂತ ಪ್ರಮುಖವಾದ ವೈರಮುಡಿ ಕಿರೀಟಧಾರಣ ಮಹೋತ್ಸವ ಏಪ್ರಿಲ್ 7ರ ಸೋಮವಾರ ರಾತ್ರಿ 8.30ಕ್ಕೆ ನಡೆಯಲಿದೆ. ನಂತರ ಬೆಳಗಿನ 4 ಗಂಟೆಯವರೆಗೆ ವೈರಮುಡಿ



ಉತ್ಸವ ವಿಜೃಂಭಣೆಯಿಂದ ನಡೆಯಲಿದೆ. ಉತ್ಸವಕ್ಕಾಗಿ ಆಕರ್ಷಕ ದೀಪಾಲಂಕಾರ ಸೇರಿದಂತೆ ಎಲ್ಲಾ ವ್ಯವಸ್ಥೆ ಮಾಡಿರುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ. ಚೆಲುವನಾರಾಯಣನಿಗೆ ವೈರಮುಡಿ ಬ್ರಹ್ಮೋತ್ಸವದ ಎಲ್ಲಾ ದಿನಗಳಲ್ಲೂ ಅಮೂಲ್ಯವಾದ ಮುತ್ತುಮುಡಿ ಹಾಗೂ ಮುತ್ತಿನ ಹಾರಗಳು ಅಲಂಕರಿಸುವುದು ವಿಶೇಷವಾಗಿದೆ.

ಏ.4, ಮಂಡ್ಯದಲ್ಲಿ ನೇರ ಸಂದರ್ಶನ

ಮಂಡ್ಯ, ಏ.1– ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ಹಾಗೂ ಮೆ ಚೈತನ್ಯ ಇಂಡಿಯಾ ಫಿನ್ ಕ್ರೆಡಿಟ್ ಪ್ರೈ ಲಿ. ಮೆ. ಕ್ರೆಡಿಟ್ ಆಕ್ಸಿಸ್ ಗ್ರಾಮೀಣ ಲಿಮಿಟೆಡ್, ಮೆ.ಎ.ಯು ಸ್ಮಾಲ್ ಫೈನಾನ್ಸ್ ಬ್ಯಾಂಕ್, ಮೆ.ಮೆಡಿಸೇವ್ ಹೆಲ್ತ್ ಹ್ಯಾಂಡ್ ಲೈಫ್ ಸ್ಟೈಲ್ ಪ್ರೈ.ಲಿ. ಮೆ.ಪವನ್ ಗೋಲ್ಡ್ ಹ್ಯಾಂಡ್ ಡೈಮಂಡ್ಸ್ ಮತ್ತು ಮೆ.ವರ್ಲ್ಡ್‌ವರ್ಸ್ ಸಂಸ್ಥೆಯಲ್ಲಿ ಹುದ್ದೆಗಳು ಖಾಲಿಯಿದ್ದು ಆಸಕ್ತರು ಏ.4 ರಂದು ಬೆಳಿಗ್ಗೆ10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ ತಮ್ಮ ರೆಸ್ಯೂಟಮ್/ಬಯೋಡೇಟಾಗಳೊಂದಿಗೆ ನೇರಸಂದರ್ಶನಕ್ಕೆ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ 08232–295124 ಮತ್ತು 91646 42684, 8970646629 & 86600 61488 ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಅಹೋರಾತ್ರಿ ಧರಣಿ, ಏ.8ರಂದು ಸರ್ಕಾರದ ವಿರುದ್ಧ ಬಿಜೆಪಿ ಜನಾಕ್ರೋಶ ರ್‍ಯಾಲಿ



ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿರುವ ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್.

ಮಂಡ್ಯ,ಏ.1– ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ರಾಜ್ಯದಲ್ಲಿ ಬೆಲೆ ಏರಿಕೆ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರು ತತ್ತರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಖಂಡಿಸಿ ಏಪ್ರಿಲ್ 2ರಂದು ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಪ್ರತಿಭಟನಾ ಧರಣಿ ಹಾಗೂ ಏ.8ರಂದು ಜನಾಕ್ರೋಶ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಇಂದ್ರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಹೋರಾತ್ರಿ ಪ್ರತಿಭಟನಾ ಧರಣಿ ಹಾಗೂ ಜನಾಕ್ರೋಶ ರ್‍ಯಾಲಿಯ ಮೂಲಕ ಬೆಲೆ ಏರಿಕೆ ಸಂಬಂಧ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದಲು ಗ್ಯಾರಂಟಿ ಹೆಸರಿನಲ್ಲಿ ಬೆಲೆ ಏರಿಕೆ ಮಾಡುತ್ತಿದ್ದು, ಅನಗತ್ಯ ಬೆಲೆ ಏರಿಕೆ ಮಾಡಿ ಜನಸಾಮಾನ್ಯರಿಗೆ ಹೊರೆಯಾಗಿ ಹೆಚ್ಚಿಸಿ, ತನ್ನ ಬೊಕ್ಕಸ ತುಂಬಿಕೊಳ್ಳುವಲ್ಲಿ ನಿರತವಾಗಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾದಾಗಿನಿಂದಲೂ ಮೂರು ಬಾರಿ ಹಾಲಿನ ದರ ಏರಿಕೆ ಮಾಡಿ, ರೈತರಿಗೆ ಪ್ರೋತ್ಸಾಹ ಧನ ಹೆಚ್ಚಿಸುತ್ತೇವೆ ಎಂದು ಹೇಳಿದ್ದು, ಮಾತಿಗೆ ತಕ್ಕಂತೆ ನಡೆದುಕೊಳ್ಳದೇ ಇದ್ದು, ರೈತರಿಗೆ ಸುಮಾರು 662 ಕೋಟಿ ರೂ ಬಾಕಿ ಉಳಿಸಿಕೊಂಡಿದೆ. ಇದೀಗ 9 ರೂ. ಬೆಲೆ ಏರಿಕೆ ಮಾಡಿ. ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನವನ್ನು ಹೆಚ್ಚಿಸಿಲ್ಲ ಎಂದು ದೂರಿದರು.

ವಿದ್ಯುತ್ ದರ, ಸರ್ಕಾರಿ ಆಸ್ಪತ್ರೆಯಲ್ಲಿನ ಸೌಲಭ್ಯಗಳ ಬೆಲೆ, ಮುದ್ರಾಂಕ ಶುಲ್ಕ, ವೃತ್ತಿಪರ ಸೇವೆಗಳ ಬೆಲೆ ಏರಿಕೆ ಮಾಡಿ, ಸಾರ್ವಜನಿಕರಿಗೆ ಜೀವನ ನಡೆಸಲಾಗದಂತೆ ಮಾಡಿದ್ದು, ಎಸ್ಸಿಪಿ ಟಿಎಸ್ಪಿ ಯೋಜನೆಯ 38,860.52 ಕೋಟಿ ಹಣವನ್ನು ಗ್ಯಾರಂಟಿ ಹೆಸರಿನಲ್ಲಿ ವಿನಿಯೋಗಿಸಿ ದಲಿತ ಸಮುದಾಯಕ್ಕೆ ಅನ್ಯಾಯವೆಸಗಿದೆ ಎಂದು ಆರೋಪಿಸಿದರು.

ರಾಜ್ಯದ ಬಡವರ, ರೈತರ ಮತ್ತು ಮಹಿಳೆಯರ ಹಿತ ಕಾಪಾಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ಅಲ್ಪಸಂಖ್ಯಾತರಿಗೆ ಶೇ4 ರಷ್ಟು ಮೀಸಲಾತಿ, ರಾಜ್ಯದ ಜನತೆಗೆ ಬೆಲೆ ಏರಿಕೆ ಬಿಸಿ ಮುಟ್ಟಿಸಿ ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತರ ಪರ ಎಂಬುದನ್ನು ತೋರುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಏ.7ರಂದು ನಡೆಯಲಿರುವ ಜನಾಕ್ರೋಶ ರ್‍ಯಾಲಿಯು ಏ.8ರಂದು ಮಂಡ್ಯದಲ್ಲಿ ಜಾಗೃತಿ ಮೂಡಿಸಲಿದ್ದು, ಸುಮಾರು 5 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಪಾಂಡವಪುರದಲ್ಲಿ ಸಿದ್ದಗಂಗಾ ಶ್ರೀಗಳ ಜಯಂತಿ ಆಚರಣೆ



ಪಾಂಡವಪುರದಲ್ಲಿ ಸಿದ್ದಗಂಗಾಶ್ರೀಗಳ ಜನ್ಮದಿನವನ್ನು ಆಚರಿಸಲಾಯಿತು.

ಪಾಂಡವಪುರ, ಏ.1–ಪಟ್ಟಣದ ಐದು ದೀಪದ ವೃತ್ತದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಸಿದ್ದಗಂಗಾ ಮಠದ ಪೀಠಾಧ್ಯಕ್ಷರು, ನಡೆದಾಡುವ ದೇವರು, ಸಿದ್ದಗಂಗಾ ಮಠದ ಪೀಠಾಧ್ಯಕ್ಷ ಡಾ.ಶಿವಕುಮಾರಸ್ವಾಮೀಜಿ ಅವರ 118ನೇ ಜಯಂತೋತ್ಸವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಐದು ದೀಪದ ವೃತ್ತದಲ್ಲಿ ಜಮಾಹಿಸಿದ ವೀರಶೈವ ಲಿಂಗಾಯಿತಿ ಕಾರ್ಯಕರ್ತರು ಸಿದ್ದಗಂಗಾ ಶ್ರೀಗಳಿಗೆ ಭಾವಚಿತ್ರದ ಪೋಸ್ಟರ್‌ಗೆ ಪುಷ್ಪಾರ್ಚನೆ ಸಲ್ಲಿಸಿದರು.

ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎಸ್.ಆನಂದ್ ಮಾತನಾಡಿ, ಸಿದ್ದಗಂಗಾ ಶ್ರೀಗಳಾದ ಡಾ.ಶಿವಕುಮಾರಸ್ವಾಮೀಜಿಗೆ ಮುಂದಾಲೋಚನೆಯಿಂದ ಪ್ರಸ್ತುತ ಲಕ್ಷಾಂತರ ಮಂದಿ ಬದುಕು ರೂಪಿಸಿಕೊಂಡಿದ್ದಾರೆ. ಹಲವಾರು ವರ್ಷಗಳ ಹಿಂದೆ ಆರಂಭಗೊಂಡಿರುವ ತ್ರಿವಿಧ ದಾಸೋಹ ಇಂದಿಗೂ ಸಹ ನಡೆಯುತ್ತಿದೆ. ಹತ್ತು ಸಾವಿರ ಮಕ್ಕಳಿಗೆ ನಿತ್ಯ ದಾಸೋಹ ನಡೆಯುತ್ತಿದೆ ಎಂದರು. ಮುಖಂಡ ಎಸ್.ಎ.ಮಲ್ಲೇಶ್ ಮಾತನಾಡಿ, ಸಿದ್ದಗಂಗಾ ಶ್ರೀಗಳ ವರ್ಧಂತಿ ಜಯಂತೋತ್ಸವನ್ನು ವಿಜೃಂಭಣೆಯಿಂದ ಆಚರಣೆ ಮಾಡಿದ್ದಾರೆ. ಯುವಕರು ಶ್ರೀಗಳ ತತ್ವಸಿದ್ಧಾಂತವನ್ನು ಮೈಗೂಡಿಸಿಕೊಂಡು ಮುನ್ನಡೆಯಬೇಕೆಂದರು.

ಮಹಾಸಭಾ ತಾಲೂಕು ಅಧ್ಯಕ್ಷ ಶಿವಕುಮಾರ್, ಉಪಾಧ್ಯಕ್ಷ ಜಯಣ್ಣ, ಮಹದೇವಪ್ಪ, ಬೇಬಿಚಂದ್ರಶೇಖರ್, ಸದಾಶಿವ್, ಕುಮಾರಸ್ವಾಮಿ, ಕಲಿಗಣೇಶ್, ಕಾಂತರಾಜು, ಪದ್ಮರಾಜು, ದರ್ಶನ್, ಕುಮಾರ್, ಅನಿಲ್, ಕೈಲಾಸ್, ಲಿಂಗರಾಜು ಸೇರಿದಂತೆ ಹಲವರು.

ಕೆ.ಆರ್.ಪೇಟೆ ಪುರಸಭೆಗೆ ಕರವೇ ಮುತ್ತಿಗೆ

ಪ್ರತಿಭಟನೆ ಹಿನ್ನೆಲೆಯಲ್ಲಿ ಹರಾಜು ಪ್ರಕ್ರಿಯೆ ಮುಂದೂಡಿಕೆ



ಕರವೇ ಕಾರ್ಯಕರ್ತರು ಪುರಸಭಾ ಅಧಿಕಾರಿಗೆ ಮನವಿ ಪತ್ರ ಸಲ್ಲಿಸುತ್ತಿರುವುದು.

ಕೆ.ಆರ್.ಪೇಟೆ, ಏ.1– ಪಟ್ಟಣದಲ್ಲಿ ಪುರಸಭೆಗೆ ಸೇರಿದ ಸುಮಾರು 125ಕ್ಕೂ ಹೆಚ್ಚಿನ ವಾಣಿಜ್ಯ ಮಳಿಗೆಗಳು ಸೇರಿದಂತೆ ವಿವಿಧ ಬಾಬ್ತುಗಳ ಹರಾಜುಗಳ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸದೇ ಪುರಸಭೆಯ ಬೊಕ್ಕಸಕ್ಕೆ ಲಕ್ಷಾಂತರ ರೂ ವಂಚಿಸಲಾಗುತ್ತಿದೆ ಎಂದು ಆರೋಪಿಸಿ ತಾಲೂಕು ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಪುರಸಭೆ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಕರವೇ ಕಾರ್ಯಕರ್ತರ ಹೋರಾಟದ ಹಿನ್ನೆಲೆಯಲ್ಲಿ ಇಂದು ನಡೆಯಬೇಕಾಗಿದ್ದ ಕೆ.ಆರ್.ಪೇಟೆ ಪುರಸಭೆಯ ವಿವಿಧ ಬಾಬ್ತುಗಳ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಅನಿರ್ದಿಷ್ಟಾವಧಿಗೆ ಮುಖ್ಯಾಧಿಕಾರಿ ನಟರಾಜ್ ಮುಂದೂಡಿದರು.

ಸಂವಿಧಾನ ಬದ್ಧವಾಗಿ, ಬಹಿರಂಗ ಹರಾಜು ನಡೆಸಿ, ಕರಪತ್ರಗಳನ್ನು ಹಂಚಿ, ದಿನಪತ್ರಿಕೆಗಳಲ್ಲಿ, ಸಾರ್ವಜನಿಕ ಪ್ರಕಟಣೆ ಹೊರಡಿಸಿ ವಾಣಿಜ್ಯ ಮಳಿಗೆಗಳು ಸೇರಿದಂತೆ ವಿವಿಧ ಬಾಬುಗಳ ಹರಾಜು ಪ್ರಕ್ರಿಯೆ ನಡೆಸಬೇಕು. ಆದರೆ ಕೆ.ಆರ್.ಪೇಟೆ ಪುರಸಭೆಯಲ್ಲಿ ಕಳೆದ 25 ವರ್ಷಗಳಿಂದ ವಾಣಿಜ್ಯ ಮಳಿಗೆಗಳ ಬಹಿರಂಗ ಹರಾಜು ನಡೆಸದೇ ಒಳಗೊಳಗೇ ಲಂಚದ ಪಡೆದುಕೊಂಡು ಪ್ರಸ್ತುತ ಅಂಗಡಿ ಮಳಿಗೆಗಳನ್ನು ಬಾಡಿಗೆಗೆ ಪಡೆದುಕೊಂಡಿರುವವರನ್ನೇ ಕಡಿಮೆ ಬಾಡಿಗೆಗೆ ಮುಂದುವರೆಸಲಾಗುತ್ತಿದೆ ಎಂದರು.

ಕಡಿಮೆ ದರಕ್ಕೆ ಬಾಡಿಗೆಗೆ ವಾಣಿಜ್ಯ ಮಳಿಗೆಗಳನ್ನು ಪಡೆದುಕೊಂಡಿರುವ ಪ್ರಭಾವಿಗಳು ಮಳಿಗೆಗಳನ್ನು ಸಬ್ ಲೀಸ್ ಮಾಡಿ ಹೆಚ್ಚಿನ ಬಾಡಿಗೆ ಹಣವನ್ನು ತಮ್ಮ ಜೇಬಿಗೆ ಇಳಿಸಿಕೊಂಡು ಪುರಸಭೆಗೆ ವಂಚಿಸುತ್ತಿರುವುದರಿಂದ ನಟರಾಜ್ ಅವರು ಹರಾಜು ಪ್ರಕ್ರಿಯೆಯನ್ನು ಮುಂದೂಡಬೇಕು ಎಂದು ಕರವೇ ಜಿಲ್ಲಾಧ್ಯಕ್ಷ ವೇಣು ಆಗ್ರಹಿಸಿದಾಗ, ಅಧ್ಯಕ್ಷೆ ಪಂಕಜಾ ಅವರ ನಿರ್ದೇಶನದಂತೆ ಇಂದು ನಿಗಧಿಯಾಗಿದ್ದ ಪುರಸಭೆಯ ಎಲ್ಲಾ ಬಾಬ್ತುಗಳ ಹರಾಜು ಪ್ರಕ್ರಿಯೆಯನ್ನು ಅನಿರ್ದಿಷ್ಟಾವಧಿಗೆ ಚೀಫ್ ಆಫೀಸರ್ ನಟರಾಜ್ ಮುಂದೂಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಮಂಡ್ಯ ಜಿಲ್ಲಾಧ್ಯಕ್ಷ ಡಿ.ಎಸ್. ವೇಣು, ಕರವೇ ತಾಲೂಕು ಘಟಕದ ಅಧ್ಯಕ್ಷ ಟೆಂಪೋ ಶ್ರೀನಿವಾಸ್, ಕರವೇ ಪದವೀಧರ ವಿಭಾಗದ ಜಿಲ್ಲಾ ಉಪಾಧ್ಯಕ್ಷ ಚೇತನ್ ಕುಮಾರ್, ಯುವ ಘಟಕದ ಅಧ್ಯಕ್ಷ ಆನಂದ್, ಕಾರ್ಯದರ್ಶಿ ಮನು, ಕರವೇ ಪದಾಧಿಕಾರಿಗಳಾದ ಶಿವಪ್ರಸಾದ್, ಗೋಪಾಲ್, ಕರವೇ ನಗರ ಘಟಕದ ಅಧ್ಯಕ್ಷ ಮೊಬೈಲ್ ಮದನ್, ಸಂಘಟನಾ ಕಾರ್ಯದರ್ಶಿ ಸ್ವಾಮಿ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಕೆ.ಆರ್.ರವೀಂದ್ರಬಾಬು, ಪುರಸಭಾ ಸದಸ್ಯರಾದ ಡಿ.ಪ್ರೇಮ್ ಕುಮಾರ್, ಕೆ.ಬಿ. ಪ್ರಕಾಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾವೇರಿ ನದಿ ತೀರದಲ್ಲಿ ಒತ್ತುವರಿ

ಒತ್ತುವರಿ ತೆರವುಗೊಳಿಸಿ ನದಿ ಗಡಿ ಗುರುತಿಸಿದ ಅಧಿಕಾರಿಗಳು



ಒತ್ತುವರಿ ತೆರವುಗೊಳಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿ.

ಶ್ರೀರಂಗಪಟ್ಟಣ, ಏ.1– ಕಾವೇರಿ ನದಿ ತೀರದಲ್ಲಿ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ತಹಸೀಲ್ದಾರ್ ಹಾಗೂ ನೀರಾವರಿ ನಿಗಮದ ಅಧಿಕಾರಿಗಳ ನೇತೃತ್ವದಲ್ಲಿ ಅಧಿಕಾರಿಗಳು ಸರ್ವೆ ನಡೆಸಿ ಒತ್ತುವರಿ ತೆರವುಗೊಳಿಸಿ ಹದ್ದುಬಸ್ತು ಗುರುತಿಸಿದ್ದಾರೆ.

ಪಟ್ಟಣ ಸಮೀಪದ ಬಂಗಾರದೊಡ್ಡಿ ನಾಲೆ ಬಳಿಯ ಕಾವೇರಿ ನದಿಯನ್ನು ಒತ್ತುವರಿ ಮಾಡಿ, ಅನ್ಯಕ್ರಾಂತ ಮಾಡಿಸದೆ ಹಾಗೂ ನದಿ, ನಾಲೆಯ ಬಫರ್‌ಜೋನ್ ಬಿಡದೆ ಅಕ್ರಮವಾಗಿ ಕಟ್ಟಡ ನಿರ್ಮಿಸುವುದರ ಜೊತೆಗೆ ಈಗಾಗಲೇ ಕಟ್ಟಡಗಳು ತಲೆಯತ್ತಿ ರೆಸಾರ್ಟ್, ಹೋಂ ಸ್ಟೇಯಂತಹ ಚಟುವಟಿಕೆಗಳು ನಡೆಯುತ್ತಿವೆ. ನದಿ ಒತ್ತುವರಿಯಾಗುತ್ತಿರುವುದನ್ನ ತಡೆಯುವಂತೆ ಸಾರ್ವಜನಿಕರ ದೂರಿನ ಹಿನ್ನಲೆಯಲ್ಲಿ ತಹಸೀಲ್ದಾರ್ ಪರುಶುರಾಮ್ ಸತ್ತಿಗೇರಿ, ಕಾವೇರಿ ನೀರಾವರಿ ನಿಗಮದ ಎಇಇ ಕಿಶೋರ್, ಕಂದಾಯ, ಸರ್ವೆ ಇಲಾಖೆ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಒತ್ತುವರಿ ತೆರವುಗೊಳಿಸಿ ಕಾವೇರಿ ನದಿ ಗಡಿ ಗುರುತಿಸಿದ್ದಾರೆ.

ತಹಸೀಲ್ದಾರ್ ಮಾತನಾಡಿ, ಈ ಹಿಂದೆಯು ಸಹ ಜಂಟಿ ಸರ್ವೆ ನಡೆಸಿ, ನದಿ ಪಾತ್ರದ ಜಾಗದ ಹದ್‌ಬಸ್ತು ಗುರುತಿಸಿ, ಟ್ರಂಚ್ ಸಹ ಮಾಡಲಾಗಿತ್ತು. ಆದರೆ ಆ ಟ್ರಂಚ್ ಮುಚ್ಚಿಕೊಂಡು ನದಿ ಸಮೀಪದಲ್ಲಿನ ಜಾಗವನ್ನು ಸಮತಟ್ಟು ಮಾಡಿ ಮತ್ತೆ ಒತ್ತುವರಿಗೆ ಮಾಡಿರುವುದು ಕಂಡು ಬಂದಿದೆ. ಒಂದೆರಡು ದಿನಗಳ ಗಡುವು ನೀಡಿ, ಸ್ವಂತ ಖರ್ಚಿನಿಂದ ಒತ್ತುವರಿಯಾಗಿರುವುದನ್ನ ತೆರವುಗೊಳಿಸುವಂತೆ ಸಂಬಂಧಪಟ್ಟವರಿಗೆ ಕೂಡಲೇ ನೋಟಿಸ್ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಒಂದನೇ ಪುಟದಿಂದ

ಇಂದು ಅಹೋರಾತ್ರಿ ಧರಣಿ

ಹೋರಾಟ ಆರಂಭವಾಗಲಿದೆ. ಅಂದು ಮಧ್ಯಾಹ್ನ 3ಕ್ಕೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಹೋರಾಟಕ್ಕೆ ಚಾಲನೆ ನೀಡಲಿದ್ದಾರೆ. 7ರಂದು ಮೈಸೂರು, ಚಾಮರಾಜನಗರ ಜಿಲ್ಲೆ, 8 ರಂದು ಬೆಳಿಗ್ಗೆ ಮಂಡ್ಯ, ಮಧ್ಯಾಹ್ನ ಹಾಸನ, 9 ರಂದು ಕೊಡಗು ಮತ್ತು ಮಂಗಳೂರು, 10 ರಂದು ಉಡುಪಿ ಮತ್ತು ಚಿಕ್ಕಮಗಳೂರಿನಲ್ಲಿ ಹೋರಾಟ ನಡೆಯಲಿದೆ ಎಂದು ವಿಜಯೇಂದ್ರ ವಿವರಿಸಿದರು.

ಇದು ಮೊದಲ ಹಂತದ ಹೋರಾಟ: ಈ ಕುರಿತು ಕೇಂದ್ರ ಸಚಿವರಾದ ವಿ. ಸೋಮಣ್ಣ, ಶೋಭಾ ಕರಂದ್ಲಾಜೆ ಜತೆ ಚರ್ಚಿಸಿದ್ದೇನೆ. 2ನೇ ಹಂತದ ಹೋರಾಟ ಏ.13ರಿಂದ ಶಿವಮೊಗ್ಗ, ಉತ್ತರಕನ್ನಡ ಜಿಲ್ಲೆಗಳಲ್ಲಿ ನಡೆಯಲಿದೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿ 2ರಿಂದ 3 ಕಿ.ಮೀ. ಪಾದಯಾತ್ರೆ ನಡೆಸಿ, ಆ ಬಳಿಕ ಸಾರ್ವಜನಿಕ ಸಭೆ ನಡೆಸಲಾಗುವುದು. ಪಕ್ಷದ ಮುಖಂಡರು ಭಾಗವಹಿಸುತ್ತಾರೆ ಎಂದರು.

ಹಿಂದೂಗಳು ಏನು ತಪ್ಪು ಮಾಡಿದ್ದಾರೆ: ರಾಜ್ಯ ಬಜೆಟ್ ಮೂಲಕ ಅಲ್ಪಸಂಖ್ಯಾತರಿಗೆ ಓಲೈಕೆ ಮಾತ್ರವಲ್ಲದೆ ಹಿಂದೂಗಳಿಗೆ ಅಪಮಾನ ಮಾಡಿದ್ದಾರೆ. ಸರ್ಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇ 4 ಮೀಸಲಾತಿ ನೀಡಿರುವುದು ಕಾನೂನಿಗೆ ವಿರುದ್ಧವಾಗಿದೆ. ಉನ್ನತ ಶಿಕ್ಷಣಕ್ಕೆ ವಿದೇಶಗಳಿಗೆ ಮುಸ್ಲಿಂ ಸಮುದಾಯದ ವಿದ್ಯಾರ್ಥಿಗಳಿಗೆ ತಲಾ 20 ಲಕ್ಷ ಇದ್ದದ್ದನ್ನು 30 ಲಕ್ಷಕ್ಕೆ ಏರಿಸಿದ್ದಾರೆ. ಹಿಂದೂಗಳಲ್ಲಿನ ಹಿಂದುಳಿದ ಸಮುದಾಯಕ್ಕೆ ಸೇರಿದವರು ಯಾವ ತಪ್ಪು ಮಾಡಿದ್ದಾರೆ. ಅವರಿಗೆ ಈ ಸೌಲಭ್ಯ ಏಕಿಲ್ಲ? ಮುಸ್ಲಿಂ ಹೆಣ್ಣು ಮಕ್ಕಳ ಆತ್ಮರಕ್ಷಣೆ ತರಬೇತಿಗೆ ನೂರಾರು ಕೋಟಿ ಖರ್ಚು ಮಾಡುತ್ತಿದ್ದಾರೆ. ಹಿಂದೂಗಳ ಹೆಣ್ಣು ಮಕ್ಕಳಿಗೆ ತರಬೇತಿ ಏಕಿಲ್ಲ? ಅವರೇನು ತಪ್ಪು ಮಾಡಿದ್ದಾರೆ' ಎಂದು ವಿಜಯೇಂದ್ರ ಪ್ರಶ್ನಿಸಿದರು.

ಹನಿಟ್ರ್ಯಾಪ್: ತನಿಖೆ ವಿಚಾರ ಸಿಎಂಗೆ ಬಿಟ್ಟಿದ್ದು

ತುಮಕೂರು, ಏ.1– ಮಧುಬಲೆ (ಹನಿಟ್ರ್ಯಾಪ್) ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಸೇರಿದಂತೆ ಯಾವುದೇ



ತನಿಖೆ ನಡೆಸುವುದು ಮುಖ್ಯಮಂತ್ರಿ, ಗೃಹ ಸಚಿವರಿಗೆ ಬಿಟ್ಟ ವಿಚಾರ ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ಪ್ರಕರಣದ ತನಿಖೆ ನಡೆಯುತ್ತಿದೆ. ಈಗ ಏನು ಮಾತನಾಡುವುದು. ನೋಟಿಸ್ ಕೊಟ್ಟರೆ ಕೊಡಲಿ, ಯಾವ ತನಿಖೆ ಆಗುತ್ತದೋ ಆಗಲಿ. ಕೆಲವು ವಿಚಾರ ಹೇಳಲು ಆಗುವುದಿಲ್ಲ ಎಂದರು.

ನಮ್ಮ ಪಕ್ಷ, ಬೇರೆ ಪಕ್ಷದವರು ಪ್ರಯತ್ನ ಮಾಡಿರಬಹುದು. ಬೆಂಗಳೂರು, ಮುಂಬೈನವರೂ ಇರಬಹುದು. ರಾಜಕೀಯೇತರ ವ್ಯಕ್ತಿಗಳು ಮಾಡಿರಬಹುದು. ಯಾರೇ ಮಾಡಿದರೂ ಇದು ಖಂಡನಾರ್ಹ. ಕಾನೂನು ಬಾಹಿರ ಕ್ರಮಕ್ಕೆ ಕುಮ್ಮಕ್ಕು ನೀಡಿದವರಿಗೆ, ಪ್ರಯತ್ನಿಸಿದವರಿಗೆ ದೇವರು ಒಳ್ಳೆಯದು ಮಾಡಲ್ಲ. ಅಂತಹವರು ಸಾರ್ವಜನಿಕ ಜೀವನದಲ್ಲಿ ಇರಬಾರದು ಎಂದರು.

ದೆಹಲಿ ಭೇಟಿ

ಅಲ್ಲದೆ, ರಾಜ್ಯಾಧ್ಯಕ್ಷರ ಬಗ್ಗೆ ಪಕ್ಷದಲ್ಲಿ ಅಪಸ್ವರಗಳು ಕೇಳಿಬರುತ್ತಿದ್ದು, ಅಧ್ಯಕ್ಷರ ಮುಂದುವರಿಕೆ ಅಥವಾ ಬದಲಾವಣೆಗೆ ಸಂಬಂಧಿಸಿದಂತೆ ವರಿಷ್ಠರು ಸ್ಪಷ್ಟ ಸಂದೇಶ ನೀಡಲಿದ್ದಾರೆನ್ನಲಾಗಿದೆ. ಭ್ರಷ್ಟಾಚಾರ ಆರೋಪದ ಮೇಲೆ ಮಂತ್ರಿ ಸ್ಥಾನ ಕಳೆದುಕೊಂಡು ಜೈಲು ಸೇರಿದ್ದ ಬಿ.ನಾಗೇಂದ್ರ ಅವರೊಬ್ಬರನ್ನು ಮಾತ್ರ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲು ಮುಖ್ಯಮಂತ್ರಿ ಆಸಕ್ತಿ ಹೊಂದಿದ್ದು, ಅದಕ್ಕೆ ವರಿಷ್ಠರು ಹಸಿರು ನಿಶಾನೆ ತೋರುವರೇ ಎಂಬುದನ್ನು ಕಾದು ನೋಡಬೇಕಿದೆ.

ವಿಧಾನಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಪಕ್ಷ ಹಾಗೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ನಾಲ್ವರ ಹೆಸರನ್ನು ವರಿಷ್ಠರ ಗಮನಕ್ಕೆ ತಂದು ಆಯ್ಕೆ ಮಾಡುವ ಯತ್ನ ನಡೆಯಲಿದೆ.

ದೆಹಲಿ ಭೇಟಿ ಸಂದರ್ಭದಲ್ಲೇ ಕರ್ನಾಟಕ ಭವನ (ಕಾವೇರಿ) ಕಟ್ಟಡ ಉದ್ಘಾಟನೆ. ಅಲ್ಲದೆ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೇರಿದಂತೆ ಕೆಲವು ಸಚಿವರ ಭೇಟಿ ಕಾರ್ಯಕ್ರಮವಿದೆ ಎಂದು ಮುಖ್ಯಮಂತ್ರಿ ಸಚಿವಾಲಯ ತಿಳಿಸಿದೆ.

ಮುಖ್ಯಮಂತ್ರಿ ಅವರು ಇದೇ ಸಂದರ್ಭದಲ್ಲಿ ನಿಗಮ–ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರಾಗಿ ಕಾರ್ಯಕರ್ತರ ನೇಮಕಾತಿ ಬಗ್ಗೆಯೂ ವರಿಷ್ಠರೊಂದಿಗೆ ಚರ್ಚಿಸಿ ಅನುಮೋದನೆ ಪಡೆದುಕೊಳ್ಳಲಿದ್ದಾರೆ.

ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ ಜಯಂತಿಗೆ ಕನ್ನಡದಲ್ಲೇ ನಮನ ಸಲ್ಲಿಸಿದ ಪ್ರಧಾನಿ

ಬೆಂಗಳೂರು, ಏ.1– ನಡೆದಾಡುವ ದೇವರು ಎಂದೇ ಖ್ಯಾತರಾಗಿದ್ದ, ತ್ರಿವಿಧ ದಾಸೋಹಿ, ಸಿದ್ದಗಂಗಾ ಮಠದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕನ್ನಡದಲ್ಲೇ ಸಂದೇಶ ಪ್ರಕಟಿಸಿ ನಮನ ಸಲ್ಲಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಂದೇಶ ಪ್ರಕಟಿಸಿರುವ ಮೋದಿ, ನಿಸ್ವಾರ್ಥ ಸೇವೆಯು ಸಮಾಜವನ್ನು ಹೇಗೆ ಪರಿವರ್ತಿಸುತ್ತದೆ ಎಂಬುದನ್ನು ಶಿವಕುಮಾರ ಸ್ವಾಮೀಜಿಗಳು ತೋರಿಸಿದ್ದಾರೆ. ನಾನಾ ಕ್ಷೇತ್ರಗಳಲ್ಲಿ ಅವರ ಅಸಾಧಾರಣ ಪ್ರಯತ್ನಗಳು ಪೀಳಿಗೆಗಳಿಗೆ ಸ್ಫೂರ್ತಿ ನೀಡುತ್ತಲೇ ಇವೆ ಎಂದು ಹೇಳಿದ್ದಾರೆ.

ಪರಮಪೂಜ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿಯ ಈ ವಿಶೇಷ ಸಂದರ್ಭದಲ್ಲಿ ಅವರಿಗೆ ಹೃತ್ಪೂರ್ವಕ ನಮನಗಳು. ಕಾರುಣ್ಯ ಮತ್ತು ದಣಿವರಿಯದ ಸೇವೆಯ ದಾರಿದೀಪವೆಂದು ಅವರನ್ನು ಸ್ಮರಿಸಲಾಗುತ್ತದೆ. ನಿಸ್ವಾರ್ಥ ಸೇವೆಯು ಸಮಾಜವನ್ನು ಹೇಗೆ



ಪರಿವರ್ತಿಸುತ್ತದೆ ಎಂಬುದನ್ನು ಅವರು ತೋರಿಸಿದ್ದಾರೆ. ನಾನಾ ಕ್ಷೇತ್ರಗಳಲ್ಲಿ ಅವರ ಅಸಾಧಾರಣ ಪ್ರಯತ್ನಗಳು ಪೀಳಿಗೆಗಳಿಗೆ ಸ್ಫೂರ್ತಿ ನೀಡುತ್ತಲೇ ಇವೆ ಎಂದು ತಿಳಿಸಿದ್ದಾರೆ.

ಶಿವಕುಮಾರ ಸ್ವಾಮೀಜಿಗಳ ಜಯಂತಿ ಪ್ರಯುಕ್ತ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ, ಮಹಾಮಂಗಳಾರತಿ ಮಂಗಳವಾರ ಬೆಳಗ್ಗೆ ನೆರವೇರಿದ್ದು, ವಿವಿಧ ಮಠಾಧೀಶರು ಹಾಗೂ ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿಯವರು ಪೋಸ್ಟ್ ಮಾಡಿ, ಅನ್ನ, ಅಕ್ಷರ, ಆಶ್ರಯದ ಮೂಲಕ ಅಸಂಖ್ಯಾತ ಮನೆಗಳಲ್ಲಿ ಜ್ಞಾನ ದೀವಿಗೆ ಹಚ್ಚಿದ ಶತಮಾನದ ಸಂತರು, ನಮ್ಮೆಲ್ಲರ ಪಾಲಿನ ನಡೆದಾಡುವ ದೇವರು ಶ್ರೀ ಸಿದ್ದಗಂಗಾ ಮಠದ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶ್ರೀ ಶ್ರೀ ಡಾ. ಶಿವಕುಮಾರ ಮಹಾಸ್ವಾಮೀಜಿ ಗಳವರ ಜಯಂತಿಯಂದು ಆ ದಿವ್ಯಚೇತನಕ್ಕೆ ನನ್ನ ಭಕ್ತಿಪೂರ್ವಕ ಪ್ರಣಾಮಗಳು ಎಂದು ಹೇಳಿದ್ದಾರೆ.

ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು ಟ್ವೀಟ್ ಮಾಡಿ. ತ್ರಿವಿಧ ದಾಸೋಹಿ, ಕಾಯಕಯೋಗಿ, 'ನಡೆದಾಡುವ ದೇವರು' ಎಂದೇ ಆರಾಧಿಪ, ಲಿಂಗೈಕ್ಯ ಪರಮಪೂಜ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಶಿವಯೋಗಿಗಳವರ 118ನೇ ಜನ್ಮ ಜಯಂತಿಯಂದು ಭಕ್ತಿಪೂರ್ವಕ ನಮನಗಳು. ಬಡತನ, ಹಸಿವು, ಸಾಮಾಜಿಕ ಅಸಮಾನತೆ ನಿವಾರಣೆಗಾಗಿ ಅವರು ಕೈಗೊಂಡ ಕಾರ್ಯಗಳು ನಮಗೆಲ್ಲಾ ಮಾದರಿಯಾಗಿದೆ ಎಂದು ಹೇಳಿದ್ದಾರೆ.

ಗೂಡ್ಸ್ ರೈಲುಗಳು ಮುಖಾಮುಖಿ ಡಿಕ್ಕಿ; ಇಬ್ಬರು ಸಾವು

ಜಾರ್ಖಂಡ್, ಏ.1– ಜಾರ್ಖಂಡ್‌ನಲ್ಲಿ ಭೀಕರ ರೈಲು ಅಪಘಾತ ಸಂಭವಿಸಿದೆ. ಸಾಹಿಬ್‌ಗಂಜ್‌ನ ಬರ್ಹೆತ್‌ನ ಎನ್‌ಟಿಪಿಸಿ ಗೇಟ್ ಬಳಿ ಎರಡು ಸರಕು ರೈಲುಗಳ ನಡುವೆ ಭಾರಿ ಡಿಕ್ಕಿ ಸಂಭವಿಸಿದೆ. ಘಟನೆಯಲ್ಲಿ ಇಬ್ಬರು ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಆದರೆ ಈ ಅಪಘಾತದಲ್ಲಿ ಕಾರ್ಮಿಕನೊಬ್ಬ ಸಿಕ್ಕಿಹಾಕಿ ಕೊಂಡಿದ್ದಾರೆ ಎಂಬ ಮಾಹಿತಿ ಇದೆ.

ಈ ಬಗ್ಗೆ ಮಾಹಿತಿ ನೀಡಿದ ಸಾಹಿಬ್‌ಗಂಜ್ ಪ್ರಧಾನ ಕಚೇರಿಯಿಂದ ಆಗಮಿಸಿದ ಅಗ್ನಿಶಾಮಕ ದಳದ ಕೆಲಸಗಾರ ರವಿ, ಈ ಘಟನೆ ಬೆಳಗಿನ ಜಾವ 3:30ಕ್ಕೆ ಸಂಭವಿಸಿದೆ. ಹಳಿ ಮೇಲೆ ಸರಕು ರೈಲು ನಿಂತಿತ್ತು. ಈ ಸಮಯದಲ್ಲಿ ಇನ್ನೊಂದು ಬದಿಯಿಂದ ಬರುತ್ತಿದ್ದ ಸರಕು ರೈಲು ಜೋರಾಗಿ ಡಿಕ್ಕಿ ಹೊಡೆದಿದೆ.

ಪರಿಣಾಮ ಎಂಜಿನ್ ಮತ್ತು ಕಲ್ಲಿದ್ದಲು ತುಂಬಿದ ಬೋಗಿಗೆ ಬೆಂಕಿ ಹೊತ್ತಿಕೊಂಡಿತು. ಬೆಂಕಿಯನ್ನು ನಂದಿಸುವ ಕಾರ್ಯ ಮುಂದುವರೆದಿದೆ. ಈ ಅಪಘಾತದಲ್ಲಿ ಎರಡು ರೈಲು ಎಂಜಿನ್‌ಗಳು ಹಳಿತಪ್ಪಿ ಸಂಪೂರ್ಣವಾಗಿ ಹಾನಿಗೊಳಗಾಗಿವೆ ಎಂದು ಹೇಳಿದರು. ಎಂಜಿನ್‌ನಲ್ಲಿ ಏಳು ಜನರಿದ್ದರು, ಅವರಲ್ಲಿ ಇಬ್ಬರು ಸಾವನ್ನಪ್ಪಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಆದರೆ ಕೆಲಸಗಾರನೊಬ್ಬ ಎಂಜಿನ್‌ನಲ್ಲಿ ಸಿಲುಕಿಕೊಂಡಿದ್ದಾರೆ. ಅವರನ್ನು ಹೊರತೆಗೆಯಲು ಪ್ರಯತ್ನಗಳು ನಡೆಯುತ್ತಿವೆ.

ಚಿಕ್ಕಮಗಳೂರಲ್ಲಿ ಗುಂಡು ಹಾರಿಸಿ ಕುಟುಂಬದ ಮೂವರ ಹತ್ಯೆ, ಬಳಿಕ ತಾನೂ ಆತ್ಮಹತ್ಯೆ

ಬಾಳೆಹೊನ್ನೂರು: ಖಾಂಡ್ಯ ಹೋಬಳಿ ಮಾಗಲು ಗ್ರಾಮದಲ್ಲಿ ವ್ಯಕ್ತಿಯೊಬ್ಬ ತಮ್ಮ ಕುಟುಂಬದ ನಾಲ್ವರ ಮೇಲೆ ಗುಂಡು ಹಾರಿಸಿದ್ದು, ಮೂವರು ಮೃತಪಟ್ಟಿದ್ದಾರೆ. ಬಳಿಕ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಕಡುಗೆರೆಯ ಶಾಲೆಯೊಂದರಲ್ಲಿ ವಾಹನ ಚಾಲಕನಾಗಿದ್ದ ರತ್ನಾಕರ ಗುಂಡು ಹಾರಿಸಿದ್ದಾನೆ. ಅತ್ತೆ ಜ್ಯೋತಿ(50), ಮಗಳು ಮೌಲ್ಯ(6), ನಾದಿನಿ ಸಿಂಧು(24) ಗುಂಡು ತಗುಲಿ ಮೃತಪಟ್ಟಿದ್ದಾರೆ. ನಾದಿನಿಯ ಗಂಡನ ಕಾಲಿಗೆ ಗುಂಡು ತಗುಲಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರತ್ನಾಕರ ಕೂಡ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ರಾತ್ರಿ 10 ಗಂಟೆ ಸುಮಾರಿನಲ್ಲಿ ಈ ಕೃತ್ಯ ನಡೆದಿದ್ದು, ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸುತ್ತಿದ್ದಾರೆ. ಗುಂಡು ಹಾರಿಸುವ ಮುನ್ನ ರತ್ನಾಕರ ವಿಡಿಯೊ ಒಂದನ್ನು ಹರಿಬಿಟ್ಟಿದ್ದು, 'ಕುಟುಂಬದವರು ನನಗೆ ಮೋಸ ಮಾಡಿದ್ದಾರೆ. ಎರಡು ವರ್ಷದಿಂದ ಪತ್ನಿ ನನ್ನನ್ನು ಬಿಟ್ಟು ಹೋಗಿದ್ದಾಳೆ' ಎಂದು ಹೇಳಿದ್ದಾರೆ.

ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ತಲೆದಂಡ?

ಚೆನ್ನೈ, ಏ.1– ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ, ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ತಮ್ಮ ಸ್ಥಾನಕ್ಕೆ



ರಾಜೀನಾಮೆ ನೀಡುವ ಸಾಧ್ಯತೆಗಳು ದಟ್ಟವಾಗಿವೆ.

ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಎಐಎಡಿಎಂಕೆ ನಡುವೆ ಮೈತ್ರಿ ಸಾಧ್ಯತೆ ಚಿಗುರೊಡೆದಿದೆ. ಆದರೆ ಎಐಎಡಿ ಎಂಕೆ ಅಣ್ಣಾಮಲೈ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರಾಗಿ ನೋಡಲು ಇಷ್ಟಪಡದಿ ರುವುದು, ಅವರ ಕುರ್ಚಿಗೆ ಮುಳುವಾ ಗುವ ಸಾಧ್ಯತೆ ಇದೆ ಎನ್ನಲಾಗಿದೆ.

2023ರಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ನಡುವಿನ ಮೈತ್ರಿ ಮುರಿದು ಬೀಳಲು ಅಣ್ಣಾಮಲೈ ಕಾರಣ ಎಂಬುದು ಎಐಎಡಿಎಂಕೆ ಪಕ್ಷದ ಅಸಮಾಧಾನಕ್ಕೆ ಪ್ರಮುಖ ಕಾರಣ. ಅಲ್ಲದೇ ಜಾತಿ ಸಮೀಕರಣಗಳ ಕಾರಣದಿಂದಲೂ ಅಣ್ಣಾಮಲೈ ಅವರ ರಾಜೀನಾಮೆಗೆ ಬಿಜೆಪಿ ಒತ್ತಾಯಿಸುವ ಸಾಧ್ಯತೆಗಳಿವೆ.

ತಮಿಳುನಾಡಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಹೈಕಮಾಂಡ್‌ಗೆ ವರದಿಯನ್ನು ಸಲ್ಲಿಸಿದ್ದೇನೆ. ರಾಜ್ಯದ ಪರಿಸ್ಥಿತಿ ಮತ್ತು ಮುಂದಿನ ಕಾರ್ಯತಂತ್ರದ ಬಗ್ಗೆ ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ ಎಂದು ಅಣ್ಣಾಮಲೈ ಹೇಳಿದ್ದಾರೆ.

ಅಣ್ಣಾಮಲೈ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ದೆಹಲಿಯಲ್ಲಿ ಭೇಟಿಯಾದ ಸಂದರ್ಭದಲ್ಲಿ, ತಮಿಳುನಾಡು ಬಿಜೆಪಿ ಅಧ್ಯಕ್ಷ ಸ್ಥಾನದಿಂದ ಅವರನ್ನು ಕೆಳಗಿಳಿಸುವ ಕುರಿತು ಚರ್ಚೆ ನಡೆದಿದೆ ಎನ್ನಲಾಗಿದೆ. ತಮಿಳುನಾಡಿನಲ್ಲಿ ಪಕ್ಷದ ತಂತ್ರವನ್ನು ಅನುಸರಿಸುವಂತೆ ಅಮಿತ್ ಶಾ ಅವರು ಅಣ್ಣಾಮಲೈ ಅವರಿಗೆ ಸೂಚನೆ ನೀಡಿದ್ದು, ಇದರ ಅನುಸಾರವಾಗಿ ಅಣ್ಣಾಮಲೈ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟವನ್ನು ಕಳೆದುಕೊಳ್ಳಲಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಆದರೆ ಅಣ್ಣಾಮಲೈ ಅವರ ಸೇವೆಯನ್ನು ಕಳೆದುಕೊಳ್ಳಲು ಇಷ್ಟಪಡದ ಬಿಜೆಪಿ, ಅವರಿಗೆ ರಾಷ್ಟ್ರೀಯ ಜವಾಬ್ದಾರಿ ಅಥವಾ ಅನ್ಯ ರಾಜ್ಯಗಳ ಉಸ್ತುವಾರಿ ಜವಾಬ್ದಾರಿಯನ್ನು ನೀಡಲು ತೀರ್ಮಾನ ಮಾಡಿದಂತಿದೆ. ಅಣ್ಣಾಮಲೈ ಅವರ ಬದಲಿಗೆ ಬಿಜೆಪಿ ಶಾಸಕ ನೈನಾರ್ ನಾಗೇಂದ್ರನ್ ಅವರಿಗೆ ರಾಜ್ಯಾಧ್ಯಕ್ಷ ಪಟ್ಟ ಕಟ್ಟುವ ಮೂಲಕ, ಜಾತಿ ಸಮೀಕರಣವನ್ನು ಬಲಗೊಳಿಸುವ ಇರಾದೆ ಬಿಜೆಪಿಯದ್ದಾಗಿದೆ.

ಯತ್ನಾಳ್ ಪಕ್ಷ ಕಟ್ಟಲ್ಲ; ಬಿಜೆಪಿಲೇ ಇರ್ತಾರೆ

ಬೆಳಗಾವಿ, ಏ.1– ಯತ್ನಾಳ್ ಅವರೂ ಸೇರಿದಂತೆ ನಮ್ಮ ತಂಡದ ಯಾರೂ ಬಿಜೆಪಿ ಬಿಟ್ಟು ಹೋಗುವುದಿಲ್ಲ. ಯತ್ನಾಳ್




ಹೊಸ ಪಕ್ಷವನ್ನೂ ಕಟ್ಟುವುದಿಲ್ಲ. ಮರಳಿ ಬಿಜೆಪಿಗೆ ಸೇರಿಸಿಕೊಳ್ಳುವ ವಿಶ್ವಾಸವಿದೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು. ನಗರದಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಯತ್ನಾಳ್ ಹೊಸ ಪಕ್ಷ ಕಟ್ಟುವ ನಿರ್ಧಾರ ಮಾಡಿಲ್ಲ. ಮಾಧ್ಯಮಗಳಲ್ಲಿ ಅದು ಬೇರೆ ಅರ್ಥ ಕಲ್ಪಿಸುವಂತೆ ಪ್ರಕಟವಾಗಿದೆ ಎಂದರು.

ಪಕ್ಷಕ್ಕೆ ಮುಜುಗರ ತರುವ ರೀತಿ ಮಾತನಾಡಬೇಡಿ ಎಂದಷ್ಟೇ ನಾನು ಯತ್ನಾಳರಿಗೆ ಮನವಿ ಮಾಡಿಕೊಂಡಿದ್ದೇನೆ. ಬೆಂಗಳೂರಿನಲ್ಲಿ ನಡೆಸಿದ ಸಭೆಯಲ್ಲಿ ಮಹತ್ವದ ವಿಷಯ ಚರ್ಚೆ ಮಾಡಿದ್ದೇವೆ. ಎಲ್ಲವನ್ನೂ ಮಾಧ್ಯಮದವರ ಮುಂದೆ ಹೇಳುವುದಿಲ್ಲ ಎಂದರು. 'ಯತ್ನಾಳ್ ಅವರ ವಿಚಾರವಾಗಿ ಕೆಲವರು ಈಗ ಏನೇನೋ ಮಾತನಾಡುತ್ತಿದ್ದಾರೆ. ಕೆಲವೇ ತಿಂಗಳ ಹಿಂದೆ ಅವರೇ ಮಾತನಾಡಿದ ಮಾತುಗಳು ಯುಟ್ಯೂಬ್‌ನಲ್ಲಿವೆ. ಯತ್ನಾಳ್ ನಮ್ಮ ಅಣ್ಣ, ಚಿಕ್ಕಪ್ಪನ ಸಮಾನ. ಅವರನ್ನು ಮುಖ್ಯಮಂತ್ರಿ ಮಾಡಿಯೇ ತೀರುತ್ತೇವೆ' ಎಂದೆಲ್ಲ ಮಾತನಾಡಿದ್ದಾರೆ. ಈಗ ಉಲ್ಟಾ ಹೊಡೆದಿದ್ದಾರೆ ಎಂದು ಅವರು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರಿಗೆ ತಿರುಗೇಟು ನೀಡಿದರು.

ಬೆಲೆ ಏರಿಕೆ ಖಂಡಿಸಿ ಶೀಘ್ರವೇ ಜೆಡಿಎಸ್‌ನಿಂದ ಹೋರಾಟ

ಬೆಂಗಳೂರು, ಏ.1– ರಾಜ್ಯ ಸರ್ಕಾರದ ಬೆಲೆ ಏರಿಕೆ ಖಂಡಿಸಿ ಜೆಡಿಎಸ್‌ನಿಂದ ರಾಜ್ಯಾದ್ಯಂತ ಶೀಘ್ರವೇ ಉಗ್ರ ಹೋರಾಟ ಮಾಡುವುದಾಗಿ ಜೆಡಿಎಸ್ ಯುವ



ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು 2 ವರ್ಷ ಕಳೆದಿದೆ. ಸಾಮಾನ್ಯ ಜನರ ಜೇಬಿಗೆ ಕತ್ತರಿ ಹಾಕುವ ಕೆಲಸ ಈ ಸರ್ಕಾರ ಮಾಡುತ್ತಿದೆ. ಜನ ಸಾಮಾನ್ಯರ ಮೇಲೆ ಸರ್ಕಾರ ಬೆಲೆ ಏರಿಕೆಯ ಹೊರೆ ಹಾಕಿದೆ. ಬೆಲೆ ಏರಿಕೆ ಜನರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಕಸಕ್ಕೂ ಟ್ಯಾಕ್ಸ್ ಹಾಕುತ್ತಿದ್ದಾರೆ. ಮೆಟ್ರೋ, ಹಾಲು, ನೀರು, ಪೆಟ್ರೋಲ್, ಡಿಸೇಲ್ ಸೇರಿ ಎಲ್ಲಾ ಬೆಲೆ ಏರಿಕೆ ಆಗಿದೆ. ಇದನ್ನು ಖಂಡಿಸಿ ಜೆಡಿಎಸ್ ಪಕ್ಷ ಉಗ್ರ ಪ್ರತಿಭಟನೆ ಮಾಡುತ್ತದೆ. ಈ ವಾರದಲ್ಲಿ ಶಾಸಕರು, ಪದಾಧಿಕಾರಿಗಳ ಸಭೆ ಮಾಡಿ, ಹೋರಾಟದ ರೂಪುರೇಷೆ ಸಿದ್ದತೆ ಮಾಡುವುದಾಗಿ ತಿಳಿಸಿದರು.

ಬಿಜೆಪಿ ಮಾಡುತ್ತಿರುವ ಹೋರಾಟದಲ್ಲಿ ಜೆಡಿಎಸ್ ಭಾಗಿಯಾಗದ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ಬೆಲೆ ಏರಿಕೆ ಖಂಡಿಸಿ ಬಿಜೆಪಿ ಅಹೋರಾತ್ರಿ ಧರಣಿ ಮಾಡುತ್ತಿದೆ. ಅಹೋರಾತ್ರಿ ಧರಣಿ ಜೊತೆಗೆ ಜನಾಕ್ರೋಶ ಯಾತ್ರೆ ಮಾಡುತ್ತಿದ್ದಾರೆ. ಮಿತ್ರ ಪಕ್ಷವಾಗಿ ಸದನದ ಒಳಗೆ, ಹೊರಗೆ ನಾವು ಒಟ್ಟಾಗಿ ಹೋರಾಟ ಮಾಡುತ್ತೇವೆ. ಬಿಜೆಪಿ ಅವರು ತನ್ನದೇ ಹೋರಾಟವನ್ನು ಮಾಡುತ್ತಿದ್ದಾರೆ. ಜೆಡಿಎಸ್ ಕೂಡ ಶೀಘ್ರವೇ ಹೋರಾಟ ಮಾಡುತ್ತದೆ ಅಂದರು.

ಬಿಜೆಪಿ–ಜೆಡಿಎಸ್ ನಡುವೆ ಲೋಕಸಭಾ ಚುನಾವಣೆಯಿಂದ ಸಂಬಂಧ ಬೆಳೆದಿದೆ. ಬಿಜೆಪಿ–ಜೆಡಿಎಸ್ ಸಮನ್ವಯ ಸಮಿತಿ ಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಆದರೆ ಸಮನ್ವಯ ಇನ್ನು ಜಾಸ್ತಿ ಆಗಬೇಕು. ಈ ನಿಟ್ಟಿನಲ್ಲಿ ಸಮನ್ವಯ ಸಮಿತಿ ರಾಜ್ಯ ಮಟ್ಟದಲ್ಲಿ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಲೋಕಸಭೆಯಲ್ಲಿ ಇಂದು ಮಂಡನೆ

ಕುರಿತು ವಿವರವಾದ ಚರ್ಚೆಗಳನ್ನು ನಡೆಸಲು ವಿರೋಧ ಪಕ್ಷಗಳು ಒತ್ತಾಯಿಸಿವೆ ಎಂದು ವರದಿಯಾಗಿದೆ. ಇದರ ನಡುವೆಯೇ, ಪ್ರಸ್ತಾಪಿತ ಮಸೂದೆ ಬಗ್ಗೆ ಸುಳ್ಳು ಮತ್ತು ತಪ್ಪು ಮಾಹಿತಿಗಳು ಎಲ್ಲ ದಾಖಲೆಗಳನ್ನು ಮೀರಿ ವ್ಯಾಪಿಸುತ್ತಿದ್ದು, ಈ ಬಗ್ಗೆ ಸಂಸತ್ತಿನ ಕಲಾಪದಲ್ಲಿ ಚರ್ಚೆಯಾಗಬೇಕು ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಸೋಮವಾರ ಒತ್ತಾಯಿಸಿದ್ದರು. ಸಂಸತ್ತಿನ ಬಜೆಟ್ ಅಧಿವೇಶನವು ಏ.4ರಂದು ಮುಕ್ತಾಯವಾಗಲಿದೆ. ವಕ್ಫ್ ತಿದ್ದುಪಡಿ ಮಸೂದೆ ಕಾಯ್ದೆಯಾಗಲು ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರ ಪಡೆಯಬೇಕು. ಹೀಗಾಗಿ, ಲೋಕಸಭೆಯಲ್ಲಿ ಮಸೂದೆ ಅಂಗೀಕಾರವಾದರೂ, ಸಮಯದ ಕೊರತೆ ಕಾರಣ ರಾಜ್ಯಸಭೆಯಲ್ಲಿ ಮಸೂದೆಗೆ ಅನುಮೋದನೆ ಸಿಗುವ ಸಾಧ್ಯತೆ ಇಲ್ಲ ಎಂದು ಮೂಲಗಳು ತಿಳಿಸಿವೆ. ಈ ಮಧ್ಯೆ ಕಾಂಗ್ರೆಸ್ ಮುಂದಿನ ಮೂರು ದಿನಗಳ ಕಾಲ ತನ್ನ ಸದಸ್ಯರಿಗೆ ವ್ಹಿಪ್ ಜಾರಿ ಮಾಡಿದೆ.

ಡಾ.ಅಂಬೇಡ್ಕರ್ ಜನ್ಮದಿನ: ಏ.14ರಂದು ಮನೆ ಮನೆ ಹಬ್ಬ



ಮೈಸೂರು, ಏ.1(ಜಿಎ)–ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಜನ್ಮದಿನ ಪ್ರಯುಕ್ತ ಏ.14ರಂದು ಮನೆ ಮನೆ ಹಬ್ಬ ಆಚರಿಸಲು ನಿರ್ಧರಿಸಲಾಗಿದೆ ಎಂದು ಅಂಬೇಡ್ಕರ್ ಜನ್ಮದಿನ ಆಚರಣಾ ಸಮಿತಿ ತಿಳಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮುಖಂಡ ಹರಿಹರ ಆನಂದಸ್ವಾಮಿ ಈ ವಿಷಯ ತಿಳಿಸಿ, ನಗರದ ಅಶೋಕಪುರಂ ವೃತ್ತದ ವಿಶ್ವಮೈತ್ರಿ ಬುದ್ಧ ವಿಹಾರದಲ್ಲಿ ಬೌದ್ಧ ಧರ್ಮ ಗುರುಗಳಾದ ಬೋಧಿರತ್ನ ಭಂತೇಜಿ, ಮಾತೆ ಬಿಕ್ಕುಣಿ ಗೌತಮಿ, ಬುದ್ಧರತ್ನ ಭಂತೇಜಿ ಮೊದಲಾದವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದ್ದು, ಅಂದು ಎಲ್ಲರೂ ಅಂಬೇಡ್ಕರ್ ಹುಟ್ಟುಹಬ್ಬವನ್ನು ಮನೆ ಮನೆಯಲ್ಲಿಯೂ ಆಚರಿಸುವಂತೆ ಮನವಿ ಮಾಡಿ, ಜೊತೆಗೆ, ಈ ಕುರಿತು ಎಲ್ಲೆಡೆ ಕರಪತ್ರ ವಿತರಿಸಲಾಗುತ್ತಿದೆ ಎಂದು ತಿಳಿಸಿದರು.

ಸಮುದಾಯ ಭವನಗಳನ್ನು ಸರ್ಕಾರ ಅದೇ ಸಮುದಾಯಗಳ ಆಸ್ತಿಯನ್ನಾಗಿ ಮಾಡಿರುವುದು ಸ್ವಾಗತಾರ್ಹ. ಆದರೆ ಇದೇ ಮಾದರಿಯಲ್ಲಿ ಅಂಬೇಡ್ಕರ್ ಭವನ, ಬಾಬು ಜಗಜೀವನರಾಂ ಭವನ, ವಾಲ್ಮೀಕಿ ಭವನಗಳನ್ನೂ ಸಮುದಾಯಗಳ ಸಂಸ್ಥೆಗಳ ಆಸ್ತಿಯನ್ನಾಗಿಸಬೇಕು. ದಲಿತ ಸಮುದಾಯಕ್ಕೆ ಮೀಸಲಾದ ಹಣವನ್ನ ಇತರೆ ಉದ್ದೇಶಗಳಿಗೆ ಬಳಸುವುದು ತಪ್ಪಬೇಕು ಎಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಗೌತಮಿ ಭಂತೇಜಿ, ಸೋಮಯ್ಯ ಮಲೆಯೂರು, ಬಂಗವಾದಿ ನಾರಾಯಣಪ್ಪ, ಐಲಾಪುರ ರಾಮು, ತುಂಬಲ ರಾಮಣ್ಣ ಉಪಸ್ಥಿತರಿದ್ದರು.

ಕಡಕೊಳ ಪ.ಪಂ. ಉಳಿತಾಯ ಬಜೆಟ್



ಮೈಸೂರು ತಾಲೂಕು ಕಡಕೊಳ ಪಟ್ಟಣ ಪಂಚಾಯಿತಿ ವತಿಯಿಂದ ಮಂಡಿಸಲಾದ 2025–26ನೇ ಸಾಲಿನ 27.84 ಲಕ್ಷ ರೂ.ಗಳ ಉಳಿತಾಯ ಬಜೆಟ್ ಅನ್ನು ಪ.ಪಂ. ಆಡಳಿತಾಧಿಕಾರಿಯೂ ಆದ ತಹಸೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್ ಅಧ್ಯಕ್ಷತೆಯಲ್ಲಿ ಅನುಮೋದಿಸಲಾಯಿತು. ಈ ವೇಳೆ ಪ.ಪಂ ಮುಖ್ಯಾಧಿಕಾರಿ ಶ್ರೀಮತಿ ಎಚ್.ಆರ್.ದೀಪಾ, ಲೆಕ್ಕಿಗ ಸತೀಶ್‌ಕುಮಾರ್ ಉಪಸಿತರಿದ್ದರು.

ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದ ಬಗ್ಗೆ ಸಾರ್ವಜನಿಕರಿಂದ ಅಂತಿಮ ಹಂತದ ಅಭಿಪ್ರಾಯ ಸಂಗ್ರಹ

● ಡಿಸಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಿಂದೂ, ಮುಸ್ಲಿಂ ಮುಖಂಡರು ಭಾಗಿ ● ನಾಳೆ ಹೈಕೋರ್ಟ್‌ನಲ್ಲಿ ವಿಚಾರಣೆ; ಜಿಲ್ಲಾಧಿಕಾರಿಗಳಿಂದ ಮಾಹಿತಿ ಸಲ್ಲಿಕೆ ● ವಿವಾದಿತ ಸ್ಥಳ ಮಸೀದಿಯಲ್ಲ, ಮದರಸ ● ಸೂಕ್ಷ್ಮ ಸ್ಥಳವಾದ ಕಾರಣ ಬೇರೆಡೆ ಜಾಗ ನೀಡಿ ● ಸಾಮರಸ್ಯದಿಂದ ಎಲ್ಲರೂ ಒಂದಾಗಿ ಸಾಗಿ ● ಹೈಕೋರ್ಟ್ ತೀರ್ಪಿನತ್ತ ಎಲ್ಲರ ಚಿತ್ತ



ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವ ಸಲುವಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅಂತಿಮ ಸುತ್ತಿನ ಸಭೆ ನಡೆಸಿದರು.

ಮೈಸೂರು,ಏ.1(ಬಿಎಲ್‌ಯು)– ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸುವ ಸಲುವಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರು ಇಂದು ಅಂತಿಮ ಸುತ್ತಿನ ಸಭೆ ನಡೆಸಿದರು.

ವಿವಾದಿತ ಸ್ಥಳದ ಸಮಸ್ಯೆ ಪರಿಹಾರ ಸಂಬಂಧ ಸಾರ್ವಜನಿಕರ ಅಭಿಪ್ರಾಯ ಆಲಿಸಿ ವರದಿ ಸಲ್ಲಿಸುವಂತೆ ಹೈಕೋರ್ಟ್ ನೀಡಿದ ನಿರ್ದೇಶನದ ಮೇರೆಗೆ ಜಿಲ್ಲಾಡಳಿತ ಇಂದು ಸಭೆ ಆಯೋಜಿಸಿತ್ತು.

ಹೈಕೋರ್ಟ್‌ನಲ್ಲಿ ಈ ವಿಷಯ ಏಪ್ರಿಲ್ 3ರಂದು ವಿಚಾರಣೆಗೆ ಬರಲಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ನಡೆದ ಸಭೆ ಮಹತ್ವ ಪಡೆದಿತ್ತು.

ಸಭೆಯ ಆರಂಭದಲ್ಲಿ ಮಾತನಾಡಿದ ಲಕ್ಷ್ಮಿಕಾಂತ ರೆಡ್ಡಿ ಅವರು, ಕ್ಯಾತಮಾರನಹಳ್ಳಿಯ ಹಲೀಂ ಶಾದಿಯಾ ಮದರಸ ವಿಷಯದಲ್ಲಿ ಜನರ ಅಭಿಪ್ರಾಯ ಪಡೆದು ಈಗಾಗಲೇ ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದೇವೆ. ಅಂತಿಮ ವರದಿ ಸಲ್ಲಿಸಲು ಈ ದಿನ ಮತ್ತೊಂದು ಸುತ್ತಿನ ಶಾಂತಿ ಸಭೆ ಆಯೋಜಿಸಲಾಗಿದೆ ಎಂದರು.

ಸಂವಿಧಾನದಲ್ಲಿ ಎಲ್ಲಾ ಪ್ರಜೆಗಳಿಗೂ ಧಾರ್ಮಿಕ ಸ್ವಾತಂತ್ರ್ಯವಿದೆ. ಈ ಸಂಬಂಧ ಅವರದೇ ಆದ ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ಅವಕಾಶವಿದೆ. ವಿವಾದಿತ ಸ್ಥಳದಲ್ಲಿ ಶಾಲೆ ನಡೆಸಲು ನಗರಪಾಲಿಕೆಯಿಂದ ಅನುಮತಿ ಕೂಡ ಪಡೆದಿದ್ದಾರೆ. ಆದರೆ ಅಲ್ಲಿ ಮಸೀದಿ ನಡೆಸಲು ಅವಕಾಶ ಇರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಹಲೀಂ ಶಾದಿಯಾ ಟ್ರಸ್ಟ್ ಮಂಡಿಸಿರುವ ವಿಚಾರವಾಗಿ ಯಾರು ಬೇಕಾದರೂ ಮುಕ್ತವಾಗಿ ತಮ್ಮ ಅಭಿಪ್ರಾಯ ಮಂಡಿಸಬಹುದು ಎಂದು ಸಲಹೆ ನೀಡಿದರು.

ಮುಸ್ಲಿಂ ಸಮುದಾಯದ ಮುಖಂಡ ಶೌಕತ್ ಪಾಷ ಮಾತನಾಡಿ, ಇದು ಮದರಸವಲ್ಲ. ಅಲ್ಲಿ ಶಿಕ್ಷಣ ಸಂಸ್ಥೆ ಆರಂಭಕ್ಕೆ ಸಹಕಾರ ಕೋರುತ್ತಿದ್ದೇವೆ ಎಂದು ಮನವಿ ಮಾಡಿದರು.

ನಂತರ ಮಾತನಾಡಿದ ಕ್ಯಾತಮಾರನಹಳ್ಳಿಯ ಯಜಮಾನರಾದ ಶಿವಕುಮಾರ್, ವಿವಾದಿತ ಸ್ಥಳದಲ್ಲಿ ಭಯದ ವಾತಾವರಣವಿದೆ. ಧನುರ್ ಮಾಸದಲ್ಲಿ ಒಂದು ತಿಂಗಳ ಕಾಲ ಭಜನೆ, ಮೆರವಣಿಗೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಅದು ಸೂಕ್ಷ್ಮ ಸ್ಥಳವಾದ ಕಾರಣ ಮದರಸ ನಡೆಸಲು ಆ ಸ್ಥಳ ಬಿಟ್ಟು ಬೇರೆ ಸ್ಥಳ ಮಂಜೂರು ಮಾಡಿ. ಇದು ನಮ್ಮ ಪಂಚಾಯಿತಿ ತೀರ್ಮಾನವಾಗಿದ್ದು, ಇದಕ್ಕೆ ಮುಸ್ಲಿಂ ಧರ್ಮದ ಮುಖಂಡರು ಸಹಕಾರ ನೀಡುವಂತೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಎಂದು ತಿಳಿಸಿದರು.

ಕೆಲವರು ತಮ್ಮ ಅಭಿಪ್ರಾಯ ತಿಳಿಸಿದ ನಂತರ ಅಂತಿಮವಾಗಿ ಮಾತನಾಡಿದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು, ಈ ಸಭೆಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ನ್ಯಾಯಾಲಯದ ಮುಂದೆ ಮಂಡಿಸುತ್ತೇವೆ. ಈ ಸಂಬಂಧ ನ್ಯಾಯಾಲಯ ಅಂತಿಮ ತೀರ್ಮಾನ ಮಾಡಲಿದೆ ಎಂದು ಹೇಳಿದರು.

ನೂರಾರು ವರ್ಷಗಳಿಂದ ಒಗ್ಗಟ್ಟಾಗಿದ್ದೀರಾ. ಮುಂದಿನ ದಿನಗಳಲ್ಲಿ ಕೂಡ ಒಟ್ಟಿಗೆ ಸಾಮರಸ್ಯದಿಂದ ಜೊತೆಗೂಡಿ ಸಾಗಿ ಎಂದು ಲಕ್ಷ್ಮಿಕಾಂತ ರೆಡ್ಡಿ ಸಲಹೆ ನೀಡಿದರು.

ಹಲೀಂ ಶಾದಿಯಾ ಟ್ರಸ್ಟ್ ಪ್ರತಿನಿಧಿಗಳಾಗಿ ಶೌಕತ್ ಪಾಷ, ಸೈಯದ್ ಗೌಸ್, ಅಕ್ಬರ್ ಷರೀಫ್, ಅಯೂಬ್ ಅನ್ಸಾರಿ, ರಫೀವುಲ್ಲಾ, ಅಫ್ರೋಜ್ ಪಾಷ, ಮೊಹಮ್ಮದ್ ಅನ್ಸಾರಿ ಸಭೆಯಲ್ಲಿ ಹಾಜರಿದ್ದರು.

ಕ್ಯಾತಮಾರನಹಳ್ಳಿ ಶ್ರೀ ಹುಲಿಯಮ್ಮ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಪ್ರತಿನಿಧಿಗಳಾಗಿ ನಾರಾಯಣಪ್ಪ, ಶಿವಕುಮಾರ್, ರಾಜು, ನಾಗರಾಜು, ಕುಮಾರ್, ಲೋಕೇಶ್, ರಾಮಣ್ಣ, ನಂಜುಂಡ, ಮಹದೇವಸ್ವಾಮಿ ಸಭೆಯಲ್ಲಿ ಭಾಗವಹಿಸಿದ್ದರು.

ಸಭೆ ನಂತರ ಮಾತನಾಡಿದ ಶೌಕತ್ ಪಾಷ, ಈ ವಿಚಾರ ರಾಜಕೀಯಗೊಂಡ ಕಾರಣ ನ್ಯಾಯಾಲಯದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಮುಂದಾದೆವು. ಏಪ್ರಿಲ್ 3ರಂದು ನ್ಯಾಯಾಲಯದಲ್ಲಿ ವಿಚಾರಣೆ ಇದ್ದು, ಅಂದು ನಮಗೆ ನ್ಯಾಯ ಸಿಗುವ ಭರವಸೆ ಇದೆ ಎಂದು ತಿಳಿಸಿದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ನಗರಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್, ಡಿಸಿಪಿ ಮುತ್ತುರಾಜ್ ಸಭೆಯಲ್ಲಿ ಉಪಸ್ಥಿತರಿದ್ದರು.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಮೈಸೂರು ಈಸ್ಟ್ ಮಹಿಳಾ ಸದಸ್ಯರ ಸಾಧನೆ



ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕೊಡವ ಸಮಾಜ ಅಮ್ಮತ್ತಿ ಸಹಭಾಗಿತ್ವದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಶ್ರೀ ಕಾವೇರಿ ಅಸೋಸಿಯೇಷನ್ ಮೈಸೂರು ಈಸ್ಟ್‌ನ ಮಹಿಳಾ ಸದಸ್ಯರು ಭಾಗವಹಿಸಿ, ಉಮ್ಮತ್ತಾಟ್ ವಿಭಾಗದಲ್ಲಿ 2ನೇ ಸ್ಥಾನ ಪಡೆದು ಸಂಘದ ಹಿರಿಮೆ ಹೆಚ್ಚಿಸಿದ್ದಾರೆ. ಇವರಿಗೆ ಸಂಘದ ಸದಸ್ಯರೂ ಆದ ಶ್ರೀಮತಿ ಕುಲಚಂಡ ವಿನುತ ಕೇಸರಿ ತರಬೇತಿ ನೀಡಿದ್ದರು. ವಿಜೇತ ಮಹಿಳಾ ಸದಸ್ಯರನ್ನು ಆಡಳಿತ ಮಂಡಳಿ ಹಾಗೂ ಸಂಘದ ಸರ್ವ ಸದಸ್ಯರು ಅಭಿನಂದಿಸಿದ್ದಾರೆ.

ಇಂದು ಎನ್‌ಐಎಂಎ ಆಯುರ್ ವೈದ್ಯ ಸಮ್ಮೇಳನ

ಮೈಸೂರು, ಏ.1(ಜಿಎ)–ರಾಷ್ಟ್ರೀಯ ಸಮ್ಮಿಶ್ರ ವೈದ್ಯಕೀಯ ಸಂಸ್ಥೆ ವತಿಯಿಂದ ಬರುವ ಏ.2ರಂದು ಬೆಳಗ್ಗೆ 8.30ರಿಂದ ಸಂಜೆ 5 ಗಂಟೆವರೆಗೆ ಜೆ.ಕೆ.ಮೈದಾನದ ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ಎನ್‌ಐಎಂಎ ಆಯುರ್ ವೈದ್ಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸಮ್ಮೇಳನವನ್ನು ಉದ್ಘಾಟಿಸುವರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೊದಲಾದವರು ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಸಿಎಂ, ಡಿಸಿಎಂರಿಂದ ಉದ್ಘಾಟನೆ

ವೈದ್ಯಕೀಯ ಕ್ಷೇತ್ರದಲ್ಲಿನ ತಾರತಮ್ಯ ಹೋಗಲಾಡಿಸಬೇಕು. ಇತರೆ ರಾಜ್ಯದಲ್ಲಿರುವಂತೆ ಕರ್ನಾಟಕದಲ್ಲಿಯೂ ಆಯುರ್ವೇದ ವೈದ್ಯರಿಂದ ಜನರಿಗೆ ಸೇವೆ ಸಲ್ಲಿಸಲು ಉತ್ತೇಜನ ನೀಡಬೇಕು. ಆರ್‌ಬಿಎಸ್‌ಕೆ ಎನ್‌ಎಚ್‌ಎಂ, ಎನ್‌ಎಎಂ ವೈದ್ಯರು ಹಾಗೂ ಬೋಧಕ ವೃತ್ತಿಯಲ್ಲಿ ತೊಡಗಿರುವ ವೈದ್ಯರಿಗೆ ಸಮಾನ ವೇತನ ಹಾಗೂ ಖಾಯಂಗೊಳಿಸುವ ಬಗ್ಗೆ ಗಮನಹರಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಸಿಎಂ ಹಾಗೂ ಆರೋಗ್ಯ ಸಚಿವರ ಮುಂದಿಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿ.ಎನ್.ಶಶಿಧರ್, ಡಾ.ಜಗದೀಶ್ ನಾಯಕ್, ಡಾ.ಮಲ್ಲಿಕಾರ್ಜುನಸ್ವಾಮಿ, ಡಾ.ಅಪ್ರಮೇಯ ರಾಮನ್ ಉಪಸ್ಥಿತರಿದ್ದರು.

ಬಿಜೆಪಿಯಿಂದ ಡಿಕೆಶಿ ಹೇಳಿಕೆ ತಿರುಚುವ ಕೆಲಸ

ಡಿ.ದೇವರಾಜ ಅರಸು ಅಭಿಮಾನಿಗಳ ವೇದಿಕೆಯಿಂದ ಖಂಡನೆ

ಮೈಸೂರು,ಏ.1(ಜಿಎ)–ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಮೀಸಲಾತಿ ಕಲ್ಪಿಸುವ ಸರ್ಕಾರದ ನಿರ್ಧಾರ ಕುರಿತಂತೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಯನ್ನು ತಿರುಚುವ ಕೆಲಸ ಬಿಜೆಪಿ ಮಾಡುತ್ತಿರುವುದು ಖಂಡನೀಯ ಎಂದು ಡಿ.ದೇವರಾಜ ಅರಸು ಅಭಿಮಾನಿಗಳ ವೇದಿಕೆ ಅಧ್ಯಕ್ಷ ಬಿಳಿಕೆರೆ ರಾಜು ವಾಗ್ದಾಳಿ ನಡೆಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನವನ್ನು ವಿರೋಧಿಸುವವರೇ ಸಂವಿಧಾನದ ಬಗ್ಗೆ ಮಾತನಾಡುವುದು ವಿಪರ್ಯಾಸವಾಗಿದೆ. ಡಿ.ಕೆ.ಶಿವಕುಮಾರ್ ಹೇಳಿಕೆ ಕುರಿತು ಅನಗತ್ಯ ಗೊಂದಲ ಸೃಷ್ಟಿಸಲಾಗುತ್ತಿದೆ. ಆದರೆ, ಈ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಂಬೇಡ್ಕರ್ ಕುರಿತು ಅಸಹನೆ ವ್ಯಕ್ತಪಡಿಸಿದಾಗ ಇದೇ ಬಿಜೆಪಿಯವರು ಮೇಜುಕುಟ್ಟಿ ಸಂಭ್ರಮಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ ಎಂದರು.

ಕಾಂಗ್ರೆಸ್ ಪಕ್ಷದ ಇಂದಿರಾಗಾಂಧಿ, ರಾಜೀವ್ ಗಾಂಧಿ ಮೊದಲಾದವರ ವಿವಿಧ ಯೋಜನೆಗಳ ಮೂಲಕ ದನಿ ಇಲ್ಲದ ಸಮುದಾಯಗಳು ರಾಜಕೀಯ ಚಲನೆ ಪಡೆದವು. ಆದರೆ ಬಿಜೆಪಿ ತನ್ನ ಹನ್ನೊಂದು ವರ್ಷಗಳ ಆಡಳಿತದಲ್ಲಿ ಸಾಧಿಸಿದ್ದೇನು ಎಂದು ಪ್ರಶ್ನಿಸಿದರು.

ರಾಜ್ಯದಲ್ಲಿ ಸಮರ್ಥ ಆಡಳಿತ ನೀಡುತ್ತಿರುವ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಜನಪ್ರಿಯತೆ ಸಹಿಸದೇ ಬಿಜೆಪಿ ಅನಗತ್ಯವಾಗಿ ಸುಳ್ಳು ಆರೋಪ ಮಾಡುತ್ತಿದೆ. ಕಾಂಗ್ರೆಸ್ ನಾಯಕರು ಪಕ್ಷ ಮಾಡಿರುವ ಸಾಧನೆ ಬಗ್ಗೆ ಜನತೆಗೆ ತಿಳಿಸಬೇಕು. ಬದಲಾಗಿ ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲ. ಇದೇ ರೀತಿ ಒಬ್ಬರ ಮೇಲೊಬ್ಬರು ಹೇಳಿಕೊಂಡು ಹೋದರೆ, ಮುಂದೆ ಕಾಂಗ್ರೆಸ್ ಪಕ್ಷವೇ ಇರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗೃಹಮಂತ್ರಿ ಡಾ.ಜಿ.ಪರಮೇಶ್ವರ್ ಅವರಿಗೆ ಏನೇ ಅವಮಾನವಾದರೂ ಪಕ್ಷವನ್ನು ಬಿಟ್ಟು ಹೋಗಿಲ್ಲ. ಬದಲಾಗಿ ಪಕ್ಷವನ್ನು ಗಟ್ಟಿಗೊಳಿಸಿದ್ದಾರೆ. ನಾನು ಈ ಮೂಲಕ ಕಾಂಗ್ರೆಸ್ ಅಭಿಮಾನಿಯಾಗಿರುವುದರಿಂದ ಪಕ್ಷದ ಮೇಲಿರುವ ಅಭಿಮಾನದಿಂದ ಮಾತನಾಡುತ್ತಿದ್ದೇನೆ. ಈ ಹಿಂದೆ ದೇವರಾಜ ಅರಸ್, ಚಂದ್ರಪ್ರಭಾ ಅರಸ್ ಅವರೊಟ್ಟಿಗೆ ಪಕ್ಷದ ಕೆಲಸ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ಪಕ್ಷಕ್ಕೆ ಆಹ್ವಾನಿಸಿದರೆ, ಶಿಸ್ತಿನ ಸಿಪಾಯಿಯಂತೆ ಪಕ್ಷ ಸಂಘಟಿಸುವ ಕೆಲಸ ಮಾಡುತ್ತೇನೆ ಎಂದರು.

ಶ್ರೀರಾಮ ನವಮಿ ಪೂಜಾ ಕಾರ್ಯಕ್ರಮ



ಮೈಸೂರು, ಏ.1–ಮೈಸೂರಿನ ಅಗ್ರಹಾರದಲ್ಲಿರುವ ಕುರುಹಿನಶೆಟ್ಟಿ ಶ್ರೀರಾಮ ಸೇವಾ ಸಂಘದಿಂದ ಏ.6ರಂದು ಬೆಳಗ್ಗೆ 11.30 ಗಂಟೆಗೆ 101 ಗಣಪತಿ ದೇವಸ್ಥಾನದ ಹತ್ತಿರವಿರುವ ಶ್ರೀರಾಮಮಂದಿರದಲ್ಲಿ ಶ್ರೀ ರಾಮನವಮಿ ಪೂಜಾ ಕಾರ್ಯಕ್ರಮ ಹಾಗೂ ಮಧ್ಯಾಹ್ನ 1.30 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ರೈಲ್ವೆಯಲ್ಲಿ ಲಿಂಗ ಸಮಾನತೆ: 850 ಮಹಿಳಾ ನೌಕರರಿಂದ ಕರ್ತವ್ಯ ನಿರ್ವಹಣೆ

ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಮಾಹಿತಿ



ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ 114ನೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಉದ್ಘಾಟಿಸಿದರು. ಮೈವಿವಿ ಕುಲಪತಿ ಪ್ರೊ.ಲೋಕನಾಥ್ ಇತರರಿದ್ದಾರೆ.

ಮೈಸೂರು, ಏ.1(ಬಿಎಲ್‌ಯು)– ಮೈಸೂರು ರೈಲ್ವೆ ವಿಭಾಗದಲ್ಲಿ ಲಿಂಗ ಸಮಾನತೆ ಇದ್ದು, 850 ಮಹಿಳಾ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಹೇಳಿದರು.

ನಗರದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ನಡೆದ 114ನೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತಿದೆ. ರೈಲ್ವೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಕೆಲಸ ಮಾಡುತ್ತಿರುವುದು ಇದಕ್ಕೆ ಸ್ಪಷ್ಟ ನಿದರ್ಶನ ಎಂದರು.

ಲೋಕೊ ಪೈಲೆಟ್, ಇಂಜಿನಿಯರ್, ಸ್ಟೇಷನ್ ಮಾಸ್ಟರ್, ಟಿಕೆಟ್ ಎಗ್ಸಾಮಿನರ್ ಸೇರಿದಂತೆ ಹಲವು ವಿಭಾಗದಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಜೊತೆಗೆ ಕಚೇರಿಯಲ್ಲಿ ನೌಕರರಿಂದ, ಅಧಿಕಾರಿ ವರ್ಗದವರಿಗೆ ಬಹಳಷ್ಟು ಮಹಿಳೆಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಶಿಲ್ಪಿ ಅಗರವಾಲ್ ಹೇಳಿದರು.

ಕೈಗಾರಿಕೋದ್ಯಮಿಗಳಾಗಿ ಮಹಿಳೆಯರು ಯಶಸ್ವಿಯಾಗಿದ್ದಾರೆ. ಕ್ರೀಡೆ, ಸಾಂಸ್ಕೃತಿಕ ಕ್ಷೇತ್ರ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಮೂಲಕ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಪಾಲ್ಗೊಳ್ಳುತ್ತಿದ್ದಾರೆ. ಆರ್ಥಿಕ ಸ್ವಾವಲಂಬಿಗಳಾಗಿದ್ದು, ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಪ್ರಾಮುಖ್ಯತೆ ಏನೆಂದು ತೋರಿಸಬೇಕು ಎಂದು ಸಲಹೆ ನೀಡಿದರು.

ಆದರೆ ಕೆಲವೆಡೆ ಇನ್ನು ಕೂಡ ಮಹಿಳೆಯರಿಗೆ ಸುರಕ್ಷತೆ ಇಲ್ಲ. ಈ ಹಿನ್ನೆಲೆ ಮಹಿಳೆಯರು ನಿರ್ಭಿತಿಯಿಂದ ಕೆಲಸ ನಿರ್ವಹಿಸಲು ಸುರಕ್ಷಿತ ವಾತಾವರಣದ ಅಗತ್ಯತೆ ಇದೆ ಎಂದು ಶಿಲ್ಪಿ ಅಗರವಾಲ್ ಅಭಿಪ್ರಾಯಪಟ್ಟರು. ಈ ವೇಳೆ ಮಹಿಳೆಯರು ಮತ್ತು ಹುಡುಗಿಯರಿಗಾಗಿ ಹಕ್ಕುಗಳು: ಸಮಾನತೆ, ಸಬಲೀಕರಣ ಕುರಿತು ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದಲ್ಲದೆ ಬ್ರೆಸ್ಟ್ ಕ್ಯಾನ್ಸರ್ ಸ್ವಯಂ ಪರಿಶೀಲನೆ ಹಾಗೂ ಪರಿಹಾರ ಕುರಿತು ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ.ಪೂರ್ಣಿಮಾ ಉಪನ್ಯಾಸ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ ಸ್ತ್ರೀ ಶಕ್ತಿ ಸಂಘದ ಉತ್ಪಾದನಾ ವಸ್ತುಪ್ರದರ್ಶನ ಆಯೋಜಿಸಲಾಗಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವೆ ಎಂ.ಕೆ.ಸವಿತಾ, ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ್, ಮಹಿಳಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಪ್ರೊ.ಎಂ.ಪುಷ್ಪ ಉಪಸ್ಥಿತರಿದ್ದರು.

ನೂತನ ಸಂವತ್ಸರದ ಕ್ಯಾಲೆಂಡರ್, ಪಂಚಾಂಗ ಬಿಡುಗಡೆ



ಚಂದ್ರಮಾನ ಯುಗಾದಿ ಹಬ್ಬದ ಅಂಗವಾಗಿ ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ಶ್ರೀ ಸ್ವಾಮಿಗೆ ವಿಶೇಷ ಪೂಜಾ–ಕೈಂಕರ್ಯ ನೆರವೇರಿಸಿ, ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಇದೇ ವೇಳೆ ದೇವಾಲಯದ ವತಿಯಿಂದ ಹೊರತರಲಾಗಿರುವ ನೂತನ ಸಂವತ್ಸರದ ಕ್ಯಾಲೆಂಡರ್ ಹಾಗೂ ಪಂಚಾಂಗವನ್ನು ಡಾ.ನಯನಕುಮಾರ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಮುಖ್ಯಸ್ಥರಾದ ಕುಮಾರ್ ದಂಪತಿ ಬಿಡುಗಡೆ ಮಾಡಿದರು. ಪ್ರೊ.ಭಾಷ್ಯಂ ಸ್ವಾಮೀಜಿ, ದೇವಸ್ಥಾನದ ವ್ಯವಸ್ಥಾಪಕ ಶ್ರೀನಿವಾಸ್ ಮತ್ತಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಬಾಹ್ಯಾಕಾಶದಿಂದ ಭಾರತ ಅದ್ಭುತವಾಗಿ ಕಾಣುತ್ತದೆ: ಸುನಿತಾ ವಿಲಿಯಮ್ಸ್ ಬಣ್ಣನೆ



ನ್ಯೂಯಾರ್ಕ್: ಬಾಹ್ಯಾಕಾಶದಿಂದ ಭಾರತ ಅದ್ಭುತವಾಗಿ ಕಾಣುತ್ತದೆ ಎಂದು ಭಾರತ ಮೂಲದ ನಾಸಾ ಗಗನಯಾತ್ರಿ ಸುನಿತಾ ವಿಲಿಯಮ್ಸ್ ಬಣ್ಣಿಸಿದ್ದಾರೆ.

ಪತ್ರಕರ್ತರೊಂದಿಗೆ ನಡೆದ ಸಂವಾದದಲ್ಲಿ ಅವರು ಮಾತನಾಡಿದರು. ಭಾರತ ಅದ್ಭುತ ದೇಶ. ಹಾಗೆಯೇ ಬಾಹ್ಯಾಕಾಶದಿಂದ ಭಾರತ ಅದ್ಭುತವಾಗಿ ಕಾಣುತ್ತದೆ. ಐಎಸ್‌ಎಸ್‌ನಲ್ಲಿ ಭೂಮಿಯನ್ನು ಪ್ರದಕ್ಷಿಣೆ ಹಾಕುವಾಗ ನಾವು ಹಲವು ಬಾರಿ ಹಿಮಾಲಯವನ್ನು ಕಣ್ತುಂಬಿಕೊಂಡಿದ್ದೇವೆ. ನನ್ನ ಸಹೋದ್ಯೋಗಿ ಬುಚ್ ವಿಲ್‌ಮೋರ್ ಅವರು ಹಿಮಾಲಯದ ಅದ್ಭುತ ಫೋಟೊಗಳನ್ನು ಸೆರೆಹಿಡಿದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು.

ಶೀಘ್ರದಲ್ಲೇ ನಮ್ಮ ತಂದೆಯ ತವರು ಭಾರತಕ್ಕೆ ಭೇಟಿ ನೀಡುತ್ತೇನೆ. ಅಲ್ಲಿನ ನಮ್ಮ ಜನರೊಂದಿಗೆ ನನ್ನ ಬಾಹ್ಯಾಕಾಶದ ಅನುಭವಗಳನ್ನು ಹಂಚಿಕೊಳ್ಳುತ್ತೇನೆ. ಅಷ್ಟೇ ಅಲ್ಲದೇ ಭಾರತ ಅದ್ಭುತವಾದ ಪ್ರಜಾಪ್ರಭುತ್ವದ ದೇಶ ಎಂದರು. 2024ರ ಜುಲೈನಲ್ಲಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿದ್ದ ಸುನಿತಾ ತಾಂತ್ರಿಕ ಅಡಚಣೆಯಿಂದಾಗಿ ಅಲ್ಲಿಯೇ ಉಳಿದರು. 286 ದಿನ ಬಾಹ್ಯಾಕಾಶದಲ್ಲಿದ್ದು ವಿವಿಧ ಸಂಶೋಧನೆಗಳನ್ನು ಕೈಗೊಂಡು ಮಾ.19ರಂದು ಅವರು ಭೂಮಿಗೆ ಸುರಕ್ಷಿತವಾಗಿ ಬಂದಿಳಿದಿದ್ದರು.

ಮಧ್ಯಪ್ರದೇಶದ 19 ಧಾರ್ಮಿಕ ಸ್ಥಳಗಳಲ್ಲಿ ಮದ್ಯ ನಿಷೇಧ



ಭೋಪಾಲ್: ಉಜ್ಜಯಿನಿ, ಓಂಕಾರೇಶ್ವರ, ಮಹೇಶ್ವರ ಮತ್ತು ಮೈಹಾರ್ ಸೇರಿದಂತೆ ಮಧ್ಯಪ್ರದೇಶದ 19 ಧಾರ್ಮಿಕ ಸ್ಥಳಗಳು ಮತ್ತು ಆಯ್ದ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ. ಧಾರ್ಮಿಕ ಮಹತ್ವವುಳ್ಳ 19 ನಗರಗಳಲ್ಲಿ ಮದ್ಯ ಮಾರಾಟದ ಮೇಲಿನ ನಿಷೇಧ ಜಾರಿಗೆ ಬರಲಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕ್ರಮವನ್ನು 'ವ್ಯಸನ ಮುಕ್ತಿಯತ್ತ ಐತಿಹಾಸಿಕ ಹೆಜ್ಜೆ' ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ಬಣ್ಣಿಸಿದ್ದಾರೆ.

ಮದ್ಯ ಮಾರಾಟ ನಿಷೇಧಿತ ನಗರಗಳು: ಉಜ್ಜಯಿನಿ, ಓಂಕಾರೇಶ್ವರ, ಮಹೇಶ್ವರ, ಮಂಡಲೇ ಶ್ವರ, ಓರ್ಚಾ, ಮೈಹಾರ್, ಚಿತ್ರಕೂಟ, ದಾಟಿಯಾ, ಪನ್ನಾ, ಮಂಡ್ಲಾ, ಮುಲ್ತೈ, ಮಂದಸೌರ್, ಅಮರ ಕಂಟಕ್ ನಗರ ವ್ಯಾಪ್ತಿಯ ಸಲ್ಕನ್‌ಪುರ , ಕುಂದಲ್ ಪುರ, ಬಂದಕ್‌ಪುರ, ಬರ್ಮನ್‌ಕಲನ್, ಬರ್ಮನ್ ಖುರ್ದ್ ಮತ್ತು ಲಿಂಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಲ್ಲಾ ಮದ್ಯದಂಗಡಿಗಳು ಮತ್ತು ಬಾರ್‌ಗಳನ್ನು ಮುಚ್ಚಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಮ್ರಾನ್ ಖಾನ್‌ಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಲು ನಾಮನಿರ್ದೇಶನ



ಇಸ್ಲಾಮಾಬಾದ್: ನಾರ್ವೆಯಲ್ಲಿ ಪ್ರಮುಖ ರಾಜಕೀಯ ಪಕ್ಷವಾದ Partiet Sentrum ಜೊತೆ ನಂಟು ಹೊಂದಿರುವ ಮೇಂಬರ್ ಆಫ್ ಪಾಕಿಸ್ತಾನ್ ವರ್ಲ್ಡ್ ಅಲಯನ್ಸ್ (PWA) ಸಂಘಟನೆಯೂ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಬೇಕು ಎಂದು ಅವರ ಹೆಸರನ್ನು ನೊಬೆಲ್ ಪ್ರಶಸ್ತಿ ಆಯ್ಕೆ ಸಮಿತಿಗೆ ನಾಮನಿರ್ದೇಶನ ಮಾಡಿದೆ. ಪಾಕಿಸ್ತಾನದ ಮಾನವ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ಕುರಿತಾದ ಖಾನ್ ಅವರ ಕೆಲಸಕ್ಕಾಗಿ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ ಎಂದು ಆ ಪಕ್ಷ ಎಕ್ಸ್‌ನಲ್ಲಿ ಹೇಳಿರುವುದಾಗಿ ಸುದ್ದಿಸಂಸ್ಥೆ ಪಿಟಿಐ ವರದಿ ಮಾಡಿದೆ. ದಕ್ಷಿಣ ಏಷ್ಯಾದಲ್ಲಿ ಶಾಂತಿ ಸ್ಥಾಪನೆ ಮಾಡಲು ಇಮ್ರಾನ್ ಖಾನ್ ಸಾಕಷ್ಟು ಶ್ರಮಿಸಿದ್ದಾರೆ. ಹೀಗಾಗಿ ಅವರಿಗೆ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಬೇಕು ಎಂದು 2019ರಲ್ಲೂ ಕೆಲವರು ನಾಮನಿರ್ದೇಶನ ಮಾಡಿದ್ದರು. ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರದ ಆರೋಪದ ಮೇಲೆ ಇಮ್ರಾನ್ ಖಾನ 14 ವರ್ಷ ಜೈಲು ಶಿಕ್ಷೆಗೆ ಒಳಗಾಗಿದ್ದಾರೆ. ಅವರು ಪಿಟಿಐ ಎಂಬ ರಾಜಕೀಯ ಪಕ್ಷದ ನಾಯಕರೂ ಹೌದು.

ಜಾಮ್‌ನಗರದಿಂದ ದ್ವಾರಕಾಕ್ಕೆ ಅನಂತ್ ಅಂಬಾನಿ ಪಾದಯಾತ್ರೆ!



ಗುಜರಾತ್: ಖ್ಯಾತ ಉದ್ಯಮಿ ಮುಕೇಶ್ ಅಂಬಾನಿ ಅವರ ಕಿರಿಯ ಪುತ್ರ ಹಾಗೂ ರಿಲಯನ್ಸ್ ಇಂಡಸ್ಟ್ರಿ ನಿರ್ದೇಶಕ ಅನಂತ್ ಅಂಬಾನಿ ಪಾದಯಾತ್ರೆ ಹೊರಟಿದ್ದಾರೆ. ದೈವ ಭಕ್ತರೂ ಆಗಿರುವ ಅನಂತ್, ಗುಜರಾತ್‌ನ ಜಾಮ್‌ನಗರದಿಂದ ದೇವಭೂಮಿ ದ್ವಾರಕಾಕ್ಕೆ 141 ಕಿ.ಮೀ ಪಾದಯಾತ್ರೆ ಹೊರಟಿದ್ದಾರೆ. ಮುಂದಿನ ನಾಲ್ಕೈದು ದಿನದಲ್ಲಿ ದ್ವಾರಕಕ್ಕೆ ತಲುಪಲಿದ್ದಾರೆ. ಏ.10ರಂದು ಅನಂತ್ ಜನ್ಮದಿನವಿದ್ದು, ಆ ಪ್ರಯುಕ್ತ ಪಾದಯಾತ್ರೆ ಮೂಲಕ ದ್ವಾರಕಾಕ್ಕೆ ತೆರಳಿ ಕೃಷ್ಣನ ದರ್ಶನ ಮಾಡಲಿದ್ದಾರೆ. ಅಲ್ಲದೆ ದ್ವಾರಕಾದಲ್ಲಿ ಹಲವು ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ಭದ್ರತೆ ಕಾರಣದಿಂದ ಹಾಗೂ ಜನಸಾಮಾನ್ಯರಿಗೆ ತೊಂದರೆ ಆಗಬಾರದೆಂದು ರಾತ್ರಿ ಹೊತ್ತು ಪಾದಯಾತ್ರೆ ಮಾಡುತ್ತಿದ್ದಾರೆ. ಸುದ್ದಿಸಂಸ್ಥೆಯೊಂದಿಗೆ ಮಾತನಾಡಿದ ಅನಂತ್, ಕಳೆದ 5 ದಿನದ ಹಿಂದೆ ದ್ವಾರಕಾಕ್ಕೆ ಪಾದಯಾತ್ರೆ ಆರಂಭಿಸಿದ್ದೇನೆ. ಯಾವುದೇ ಕೆಲಸ ಮಾಡುವ ಮೊದಲು ನಾವು ದೇವರಲ್ಲಿ ನಂಬಿಕೆ ಇಟ್ಟರೇ ಅದು ಖಂಡಿತವಾಗಿಯೂ ಕೈಗೂಡುತ್ತದೆ. ದೇವರು ಇರುವಾಗ ಚಿಂತೆಗೆ ಜಾಗ ಇಲ್ಲ. ದ್ವಾರಕಾಧೀಶನು ನಮ್ಮನ್ನು ಆಶೀರ್ವದಿಸಲಿ ಎಂದಿದ್ದಾರೆ.

ಭೂಕಂಪವಾಗಿದ್ದೂ ಸೈಟ್ ಫೈಲ್ ಕದಿಯಲು ಯತ್ನಿಸಿದ ನಾಲ್ವರ ಅರೆಸ್ಟ್

ಬ್ಯಾಂಕಾಕ್: ಕಳೆದ ವಾರ ಬ್ಯಾಂಕಾಕ್‌ನಲ್ಲಿ ಸಂಭವಿಸಿದ್ದ ಭೂಕಂಪದ ವೇಳೆ ನಿರ್ಮಾಣ ಹಂತದ ಕಟ್ಟಡ ಕುಸಿದಿದ್ದು, ಸ್ಥಳಕ್ಕೆ ಅಕ್ರಮವಾಗಿ ಪ್ರವೇಶಿಸಿ ದಾಖಲೆಗಳನ್ನು ಕದ್ದುಕೊಂಡು ಹೋಗಲು ಯತ್ನಿಸಿದ್ದ ನಾಲ್ವರು ಚೀನಿ ಪ್ರಜೆಗಳನ್ನು ಥೈಲ್ಯಾಂಡ್ ಪೊಲೀಸರು ಬಂಧಿಸಿದ್ದಾರೆ.

ಮಾ.28ರಂದು ಬ್ಯಾಂಕಾಕ್‌ನಲ್ಲಿ ಸಂಭವಿಸಿದ್ದ ಪ್ರಬಲ ಭೂಕಂಪದ ಪರಿಣಾಮ ಕೆಲವು ಕಡೆಗಳಲ್ಲಿ ಕಟ್ಟಡಗಳು ಕುಸಿದಿದ್ದವು. ಈ ವೇಳೆ ಚತುಚಕ್ ಜಿಲ್ಲೆಯಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದಿತ್ತು. ಸ್ಥಳಕ್ಕೆ ಅಕ್ರಮವಾಗಿ ಪ್ರವೇಶಿಸಿ ದಾಖಲೆಗಳನ್ನು ಅಲ್ಲಿಂದ ಕೊಂಡೊಯ್ಯಲು ಪ್ರಯತ್ನಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಭೂಕಂಪದ ಬಳಿಕ ಬ್ಯಾಂಕಾಕ್ ಗವರ್ನರ್ ಕುಸಿತದ ಪ್ರದೇಶವನ್ನು ವಿಪತ್ತು ವಲಯವೆಂದು ಘೋಷಿಸಿದ್ದು, ಅದನ್ನು ನಿರ್ಬಂಧಿತ ಪ್ರದೇಶವೆಂದು ತಿಳಿಸಲಾಗಿತ್ತು. ಆ ಪ್ರದೇಶಕ್ಕೆ ಅನುಮತಿಯಿಲ್ಲದೆ ಯಾರಿಗೂ ಪ್ರವೇಶಿಸಲು ಅವಕಾಶವಿಲ್ಲ ಎಂದು ಸೂಚಿಸಲಾಗಿತ್ತು. ಆದರೆ ಮಾ.29ರಂದು ನಾಲ್ವರು ಚೀನೀ ಪ್ರಜೆಗಳು ಸ್ಥಳದಿಂದ 32 ದಾಖಲೆಗಳ ಫೈಲ್‌ಗಳನ್ನು ಕೊಂಡೊಯ್ಯುತ್ತಿರುವ ಮಾಹಿತಿ ಬಗ್ಗೆ ತಿಳಿದು ಬಂದಿತ್ತು ಎಂದು ಮಾಹಿತಿ ನೀಡಿದ್ದಾರೆ. ಓರ್ವ ಚೀನಿ ಪ್ರಜೆಯನ್ನು ವಿಚಾರಣೆ ನಡೆಸಿದಾಗ ಆತ ಕಟ್ಟಡ ನಿರ್ಮಾಣದ ಯೋಜನಾ ವ್ಯವಸ್ಥಾಪಕ ಎಂದು ತಿಳಿಸಿದ್ದಾನೆ.

ಮೈಸೂರು ಮಿತ್ರ ಬುಧವಾರ 2 ಏಪ್ರಿಲ್ 2025

ಅರೆಭಾಷಿಕರ ಗಡಿ ವಿಸ್ತರಿಸಲು ಗಡಿನಾಡು ಉತ್ಸವ



ಅಕಾಡೆಮಿ ಹೊರತರುವ ಹಿಂಗಾರ ತ್ರೈಮಾಸಿಕದ ಹೊಸ ಸಂಚಿಕೆಯನ್ನು ಜಯಪ್ರಕಾಶ್ ಕುಂಚಡ್ಕ ಬಿಡುಗಡೆ ಮಾಡಿದರು. ಕುಟುಂಬದ ಹಿರಿಯರಾದ ಸಾವಿತ್ರಿ ರವೀಂದ್ರನಾಥ್ ಕುಡೆಕಲ್ಲು ಅಕಾಡೆಮಿ ಅಧ್ಯಕ್ಷ ಸದಾನಂದ ಮೊದಲಾದವರು ಉಪಸ್ಥಿತರಿದ್ದರು.

ಮಡಿಕೇರಿ ಏ.1– ಅರೆಭಾಷೆಯು ಜಾತಿ, ಸಮುದಾಯ, ಗಡಿಯನ್ನು ಮೀರಿ ಬೆಳೆಯುತ್ತಿದ್ದು, ಇದನ್ನು ಇನ್ನಷ್ಟು ವಿಸ್ತರಿಸಲು ಗಡಿನಾಡು ಉತ್ಸವ ಸೇರಿದಂತೆ ವಿನೂತನ ಕಾರ್ಯಕ್ರಮಗಳನ್ನು ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ನುಡಿದರು.

ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದಲ್ಲಿರುವ ಕುಡೆಕಲ್ಲು ಐನ್‌ಮನೆಯಲ್ಲಿ ನಡೆದ ಅರೆಭಾಷಿಕರ ಐನ್‌ಮನೆ ಐಸಿರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಐನ್‌ಮನೆ ಎನ್ನುವುದು ಎಲ್ಲರನ್ನು ಒಗ್ಗೂಡಿಸುವ ಜಾಗ. ಇಲ್ಲಿ ನಮ್ಮ ಸಂಸ್ಕೃತಿ, ಪರಂಪರೆಯನ್ನು ತಿಳಿಸುವುದರೊಂದಿಗೆ ಅರೆಭಾಷೆಯನ್ನು ವಿಸ್ತರಿಸುವ ಪೂರಕ ಸ್ಥಳವಾಗಿರುವುದರಿಂದ ಐನ್‌ಮನೆಯಲ್ಲಿ ಅಕಾಡೆಮಿ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದು ನುಡಿದರು.


ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಕುಡೆಕಲ್ಲು ಕುಟುಂಬದ ಹಿರಿಯರಾದ ಸಾವಿತ್ರಿ ರವೀಂದ್ರನಾಥ್ ಕುಡೆಕಲ್ಲು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಕುಡೆಕಲ್ಲು ಐನ್‌ಮನೆಯ ವಂಶವೃಕ್ಷ ಚಾರ್ಟ್ ಅನ್ನು ಅನಾವರಣಗೊಳಿಸಿದರು. ಅಕಾಡೆಮಿ ಹೊರತರುವ ಹಿಂಗಾರ ತ್ರೈಮಾಸಿಕದ ಹೊಸ ಸಂಚಿಕೆಯನ್ನು ಜಯಪ್ರಕಾಶ್ ಕುಂಚಡ್ಕ ನೆರವೇರಿಸಿದರು.

ದಕ್ಷಿಣ ಕನ್ನಡ ಜೇನು ವ್ಯವಸಾಯಗಾರರ ಸಹಕಾರ ಸಂಘದ ಅಧ್ಯಕ್ಷ ಚಂದ್ರಾ ಕೋಲ್ಚಾರ್, ಅಕ್ರಮ–ಸಕ್ರಮ ಸಮಿತಿ ಸದಸ್ಯೆ ಗೀತಾ ಕೋಲ್ಚಾರ್, ಕುಡೆಕಲ್ಲು ಐನ್‌ಮನೆಯ ಮಾಜಿ ಆಡಳಿತಗಾರರಾದ ವಾಸುದೇವ ಗೌಡ ಕುಡೆಕಲ್ಲು, ಸುಳ್ಯ ಗೌಡರ ಯುವ ಸೇವಾ ಸಂಘದ ಉಪಾಧ್ಯಕ್ಷ ಯತಿರಾಜ ಭೂತಕಲ್ಲು, ಆಲೆಟ್ಟಿ ಗ್ರಾಮ ಗೌಡ ಸಮಿತಿ ಅಧ್ಯಕ್ಷ ಸತೀಶ್ ಕೊಯಿಂಗಾಜೆ, ಕುಡೆಕಲ್ಲು ಐನ್‌ಮನೆಯ ಹಾಲಿ ಆಡಳಿತಗಾರರಾದ ಬಿಪಿನ್ ಕುಡೆಕಲ್ಲು, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕರಾದ ಅಚ್ಯುತ ಮಾಸ್ತರ್ ನಾರ್ಕೋಡು ಮುಖ್ಯ ಅತಿಥಿಗಳಾಗಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅರೆಭಾಷಿಕ ಪರಂಪರೆಯ ಸಂಶೋಧಕರಾದ ಅನಂತರಾಜ ಗೌಜ ಪುತ್ತೂರು ವಹಿಸಿದ್ದರು. ಮೀನುಗಾರಿಕಾ ಇಲಾಖಾ ಸಹಾಯಕ ನಿರ್ದೇಶಕ ಮಿಲನ ಭರತ್ ಇವರು ಅರೆಭಾಷೆ ಕುಟುಂಬಗಳ ಆಡಳಿತ ಸಂಬಂಧದ ಬಗ್ಗೆ ಉಪನ್ಯಾಸ ನೀಡಿದರು. ಹಾಗೆಯೇ ಕುಡೆಕಲ್ಲು ಐನ್‌ಮನೆ ನಡೆದು ಬಂದ ದಾರಿ ವಿಷಯದ ಕುರಿತು ಯುವ ಸಾಹಿತಿ ಮನೋಜೋ ಕುಡೆಕಲ್ಲು ಮಾಹಿತಿ ನೀಡಿದರು.

ಅಕಾಡೆಮಿ ಸದಸ್ಯರಾದ ಚಂದ್ರಾವತಿ ಬಡ್ಡಡ್ಕ, ಚಂದ್ರಶೇಖರ ಪೇರಾಲು, ಪಿ.ಎಸ್.ಕಾರ್ಯಪ್ಪ, ಸೂದನ ಎಸ್.ಈರಪ್ಪ, ಲೋಕೇಶ್ ಊರುಬೈಲು, ಸಂದೀಪ್ ಪೂಳಕಂಡ, ಗೋಪಾಲ್ ಪೆರಾಜೆ ಮತ್ತಿತರರು ಉಪಸ್ಥಿತರಿದ್ದರು.

ಕೊಡಗಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಕ್ಕೆ ಆಗ್ರಹಿಸಿ ಸಿಎನ್‌ಸಿ ಪ್ರತಿಭಟನೆ



ಬಿರುನಾಣಿಯಲ್ಲಿ ಸಿಎನ್‌ಸಿ ಮಾನವ ಸರಪಳಿ ರಚಿಸಿ ಪ್ರತಿಭಟನೆ ನಡೆಸಿತು.

ಮಡಿಕೇರಿ, ಏ.1– ಸಿಕ್ಕಿಂನ ಬೌದ್ಧ ಭಿಕ್ಷುಗಳಿಗೆ ನೀಡಿರುವ 'ಸಂಘ' ಕ್ಷೇತ್ರದ ರೀತಿಯಲ್ಲಿ ಸಂಸತ್ತು ಮತ್ತು ವಿಧಾನ ಸಭೆಯಲ್ಲಿ ವಿಶೇಷ ಪ್ರಾತಿನಿಧ್ಯ ಇಲ್ಲವೆ ಪರ್ಯಾಯವಾಗಿ ಪ್ರತ್ಯೇಕ ಕ್ಷೇತ್ರವನ್ನು ರಚಿಸಬೇಕೆಂದು ಆಗ್ರಹಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಬಿರುನಾಣಿಯಲ್ಲಿ ಮಾನವ ಸರಪಳಿ ರಚಿಸಿ ಪ್ರತಿಭಟಿಸಿತು.

ಸಂಸತ್ತು ಮತ್ತು ವಿಧಾನಸಭೆಯಲ್ಲಿ ಕೊಡವರಿಗೆ ವಿಶೇಷ ಪ್ರಾತಿನಿಧ್ಯ ಕಲ್ಪಿಸಬೇಕು, ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಘೋಷಿಸಬೇಕು, ಎಸ್‌ಟಿ ಟ್ಯಾಗ್ ನೀಡಬೇಕು ಎಂದು ಘೋಷಣೆಗಳನ್ನು ಕೂಗಿದ ಪ್ರತಿಭಟನಾಕಾರರು ಕೊಡವರ ಪ್ರಗತಿ ಹಾಗೂ ರಕ್ಷಣೆಗಾಗಿ ಸಂವಿಧಾನಬದ್ಧ ಹಕ್ಕುಗಳನ್ನು ಒದಗಿಸಿ ಕೊಡುವಂತೆ ಒತ್ತಾಯಿಸಿದರು.

ಕೊಡವರು ಬೇರೆಯೇ ಮೂಲ ವಂಶಸ್ಥ ಜನಾಂಗವಾಗಿದ್ದು, ಸ್ವತಂತ್ರ ಅಸ್ತಿತ್ವ ಮತ್ತು ವ್ಯಕ್ತಿತ್ವವನ್ನು ಗುರುತಿಸಿ 1871–72ರಿಂದ 1931ರವರೆಗೆ ನಡೆಸಿದ ಜನಗಣತಿಯನ್ನೇ ಮಾನದಂಡವಾಗಿಟ್ಟುಕೊಂಡು ರಾಜಕೀಯ ಪ್ರಾತಿನಿಧ್ಯ ನೀಡಬೇಕೆಂದು ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಆಗ್ರಹಿಸಿದರು.

ಕುಟುಂಬದಲ್ಲಿ ಒಬ್ಬರಂತೆ ಸೇನೆಗೆ ಸೇರುವ ಮೂಲಕ ರಾಷ್ಟ್ರೀಯ ಭದ್ರತೆಯನ್ನು ಕೊಡವರು ಕಾಪಾಡುತ್ತಿದ್ದಾರೆ. ಕಟ್ಟುನಿಟ್ಟಾದ ಕುಟುಂಬ ಯೋಜನೆಯ ಪಾಲನೆಯ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಕೊಡವರು ಮಹತ್ವದ ಪಾತ್ರ ವಹಿಸಿದ್ದಾರೆ. ಕೊಡವ ಸಮುದಾಯ ನೀಡಿರುವ ಮತ್ತು ನೀಡುತ್ತಿರುವ ವಿಶಿಷ್ಟ ಕೊಡುಗೆಗಳನ್ನು ಸರ್ಕಾರ ಪರಿಗಣಿಸಬೇಕು. ಮಾನವ ಸರಪಳಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಪ್ರತಿಭಟನಾಕಾರರು ಹಕ್ಕೊತ್ತಾಯ ಮಂಡಿಸಿದರು.

ಆರ್ಜಿ ಗ್ರಾಮದಲ್ಲಿ ಸ್ವಚ್ಛತಾ ಅಭಿಯಾನ



ಸ್ವಚ್ಛತಾ ಅಭಿಯಾನದಲ್ಲಿ ಆರ್ಜಿ ಗ್ರಾಮ ಪಂಚಾಯತ್ ಮತ್ತು ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು.

ವಿರಾಜಪೇಟೆ, ಏ.1– ಸಮೀಪದ ಆರ್ಜಿ ಗ್ರಾಮ ಪಂಚಾಯತ್ ಸಹಯೋಗದೊಂದಿಗೆ ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ ನಡೆಸಿತು.

ಅಭಿಯಾನವನ್ನು ಉದ್ಘಾಟಿಸಿದ ಪಂಚಾಯತ್ ಅಧ್ಯಕ್ಷೆ ಫಾತಿಮಾ ಮಾತನಾಡಿ ಸ್ವಚ್ಛ ಪರಿಸರದ ನಿರ್ಮಾಣ ಪ್ರತಿಯೊಬ್ಬರ ಕರ್ತವ್ಯವಾಗಿದೆ. ನಾವು ಜಾಗೃತರಾದಲ್ಲಿ ಮಾತ್ರ ಸಮಾಜದ ಜಾಗೃತಿ ಸಾಧ್ಯವಾಗುತ್ತದೆ. ಪ್ಲಾಸ್ಟಿಕ್ ಮುಕ್ತ ಪರಿಸರವನ್ನು ನಿರ್ಮಿಸುವಂತೆ ಕರೆ ನೀಡಿದರು. ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಮಾಚಯ್ಯ, ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಸಂಚಾಲಕ ಶಶಿ ಅಚ್ಚಪ್ಪ ಮಾತನಾಡಿದರು.

ಎನ್.ಎಸ್.ಎಸ್ ಘಟಕದ ಉಭಯ ಕಾಲೇಜುಗಳ ವಿದ್ಯಾರ್ಥಿಗಳು ಆರ್ಜಿ ಅನ್ವರುಲ್ ಹುದಾ ಸಂಸ್ಥೆಯಿಂದ ಆರ್ಜಿ ಗ್ರಾಪಂವರೆಗೆ ಹಾಗೂ ಆರ್ಜಿ ಗ್ರಾಪಂನಿಂದ ಪೆರಂಬಾಡಿ ಚೆಕ್ ಪೋಸ್ಟ್, ಬಾಳುಗೋಡು ಸಮೀಪದ ವರೆಗೂ ರಸ್ತೆಯ ಇಕ್ಕೆಲಗಳಲ್ಲಿ ಎಸೆದಿದ್ದ ಪ್ಲಾಸ್ಟಿಕ್, ಪೇಪರ್, ಬಾಟಲಿ ಹಾಗೂ ತ್ಯಾಜ್ಯವನ್ನು ಹೆಕ್ಕುವುದರ ಮೂಲಕ ಸ್ವಚ್ಛತಾ ಅಭಿಯಾನವನ್ನು ಮಾಡಿದರು. ಮಾತ್ರವಲ್ಲದೆ ಸಾರ್ವಜನಿಕರಲ್ಲಿ ಸ್ವಚ್ಛತಾ ಜಾಗೃತಿಯನ್ನು ಮೂಡಿಸಿದರು. ನೂರಕ್ಕೂ ಅಧಿಕ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಈ ಅಭಿಯಾನದಲ್ಲಿ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಕಾವೇರಿ ಪದವಿ ಕಾಲೇಜಿನ ಪ್ರಾಂಶುಪಾಲ ಬೆನೆಡಿಕ್ಟ್ ಸಾಲ್ಡಾನ್ಹಾ, ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಕಾರ್ಯದರ್ಶಿ ಸುನೀತಾ ಹಾಗೂ ಸಮಿತಿಯ ಸದಸ್ಯರು ಗಳು, ಆರ್ಜಿ ಗ್ರಾಪಂ ಉಪಾಧ್ಯಕ್ಷೆ ಕವಿತ, ಪಿಡಿಓ ಪ್ರಮೋದ್ ಪಿ.ಕೆ. ಕಾರ್ಯದರ್ಶಿ ರಾಜನ್ ಆರ್. ವಿರಾಜಪೇಟೆ ಸೆಂಟ್ ಆನ್ಸ್ ಪದವಿ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಬಿ.ಎನ್. ಶಾಂತಿ ಭೂಷಣ್, ಉಪನ್ಯಾಸಕಿ ಲಿಸಿತಾ, ಕಾವೇರಿ ಪದವಿ ಕಾಲೇಜಿನ ಎನ್.ಎಸ್.ಎಸ್. ಅಧಿಕಾರಿ ಬಿ.ಬಿ. ಸುನಿಲ್ ಕುಮಾರ್, ಗ್ರಾಮಸ್ಥರು, ಪಂಚಾಯತ್ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹತ್ಯೆಗೆ ಯತ್ನಿಸಿದ ಹ್ಯಾರಿಸ್ ವಿರುದ್ಧ ಕ್ರಮಕ್ಕೆ ಆಗ್ರಹ

ನಾಪೋಕ್ಲು, ಏ.1– ರಂಜಾನ್ ಹಬ್ಬದ ಆಚರಣೆ ವೇಳೆ ತನ್ನ ಮೇಲೆ ಕಾರು ಚಲಾಯಿಸಿ ಕೊಲೆಗೆ ಯತ್ನಿಸಿ ರುವ ಕೆ.ಎ.ಹ್ಯಾರೀಸ್ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಪಟ್ಟಣದ ಅಬ್ದುಲ್ ಅಜೀಜ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನಿನ್ನೆ ಮಸೀದಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿ ರಸ್ತೆಗೆ ಬರುತ್ತಿದ್ದ ಸಂದರ್ಭದಲ್ಲಿ ಕೆ ಎ ಹ್ಯಾರೀಸ್ ತನ್ನ ಕಾರನ್ನು ಚಲಾಯಿಸಿ ಹತ್ಯೆಗೆ ಪ್ರಯತ್ನಿಸಿದ್ದಾರೆ. ಅದೃಷ್ಟವಶಾತ್ ತಾನು ಪ್ರಾಣಾಪಾಯದಿಂದ ಪಾರಾಗಿದ್ದಾಗಿ ಹೇಳಿದ್ದಾರೆ. ಗಾಯಗೊಂಡಿರುವ ಅಬ್ದುಲ್ ಅಜೀಜ್ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಸಮುದಾಯದ ಪ್ರಮುಖರು ಹ್ಯಾರೀಸ್ ವಿರುದ್ಧ ತೆರಳಿ ಠಾಣಾಧಿಕಾರಿಯನ್ನು ಆಗ್ರಹಿಸಿದ್ದಾರೆ. ಆರೋಪಿ ಹ್ಯಾರೀಸ್ ವಿರುದ್ಧ ಹಲವಾರು ಮೊಕದ್ದಮೆ ಹಾಗೂ ದೂರುಗಳಿದ್ದು ತಲೆ ಮರೆಸಿಕೊಂಡಿರುವುದಾಗಿ ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ.

ಮುದ್ದಂಡ ಕಪ್ ಹಾಕಿ ಉತ್ಸವ: ಇಂದಿನ ಪಂದ್ಯಾವಳಿ

ಮಡಿಕೇರಿ, ಏ.1– ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಏ.2ರಂದು ನಡೆಯಲಿರುವ ಪಂದ್ಯಾವಳಿ ವಿವರ



ಮಾಣೆಪಂಡ ಮತ್ತು ಮರುವಂಡ ತಂಡಗಳ ನಡುವೆ ಬಿರುಸಿನ ಆಟ

ಮೈದಾನ–1: ಬೆಳಿಗ್ಗೆ 9 ಗಂಟೆಗೆ ಪಟ್ಟಮಾಡ ಮತ್ತು ಪೊಂಜಂಡ, 10 ಗಂಟೆಗೆ ಚಿಮ್ಮಣಮಾಡ ಮತ್ತು ಮುದ್ದಿಯಡ, 11 ಗಂಟೆಗೆ ಬೊಳೆಯಾಡಿರ ಮತ್ತು ಪೆಮ್ಮುಡಿಯಂಡ, ಮಧ್ಯಾಹ್ನ 12 ಗಂಟೆಗೆ ಕೊಂಡಿರ ಮತ್ತು ಪೇರಿ ಯಂಡ, 1 ಗಂಟೆಗೆ ಕುಟ್ಟಂಡ (ಕಾರ್ಮಾಡ್) ಮತ್ತು ಪರುವಂಗಡ, 2 ಗಂಟೆಗೆ ಚಿಲ್ಲವಂಡ ಮತ್ತು ಮುದ್ದಂಡ, 3 ಗಂಟೆಗೆ ಕಂಜಿತಂಡ ಮತ್ತು ಪೊನ್ನ ಕಚ್ಚಿರ, ಸಂಜೆ 4 ಗಂಟೆಗೆ ಚರಿಮಂಡ ಮತ್ತು ಮೇವಡ.

ಮೈದಾನ–2: ಬೆಳಿಗ್ಗೆ 9 ಗಂಟೆಗೆ ನಾಪನೆರವಂಡ ಮತ್ತು ನೆಲ್ಲಪಟ್ಟಿರ, 10 ಗಂಟೆಗೆ ಕೋಣಿಯಂಡ ಮತ್ತು ಕಲ್ಲುಮಾಡಂಡ, 11 ಗಂಟೆಗೆ ಕೊಲತಂಡ ಮತ್ತು ಮಲ್ಲಂಡ, ಮಧ್ಯಾಹ್ನ 12 ಗಂಟೆಗೆ ಪಾಂಡೀರ(ಗಾಳಿಬೀಡು) ಮತ್ತು ಪೋರಂಗಡ, 1 ಗಂಟೆಗೆ ಮಾಳೆಯಂಡ ಮತ್ತು ಬಲ್ಯಂಡ, 2 ಗಂಟೆಗೆ ಅಮ್ಮೆಕಂಡ ಮತ್ತು ಚೆಬಂಡ, 3 ಗಂಟೆಗೆ ಮುಂಡಚಾಡಿರ ಮತ್ತು ಅಯ್ಯಮಾಡ, ಸಂಜೆ 4 ಗಂಟೆಗೆ ಬೊಟ್ಟಂಗಡ ಮತ್ತು ಉದ್ದಪಂಡ.

ಮೈದಾನ–3 : ಬೆಳಿಗ್ಗೆ 11 ಗಂಟೆಗೆ ಚಿಂಡಮಾಡ ಮತ್ತು ಕೇಚೆಟ್ಟಿರ (ಬೇಂಗೂರು), ಮಧ್ಯಾಹ್ನ 12 ಗಂಟೆಗೆ ಅರಮಣಮಾಡ ಮತ್ತು ತಾತೀರ, 1 ಗಂಟೆಗೆ ತೀತಿರ ಮತ್ತು ತೆಲಪಂಡ, 2 ಗಂಟೆಗೆ ಕಾಕಮಾಡ ಮತ್ತು ಕುಂಡ್ರಂಡ, 3 ಗಂಟೆಗೆ ಕುಂಚೆಟ್ಟಿರ ಮತ್ತು ಮಳವಂಡ ತಂಡಗಳ ನಡುವೆ ಪಂದ್ಯಾಟ ನಡೆಯಲಿದೆ.

ದುಷ್ಕರ್ಮಿಗಳ ಗುಂಡಿಗೆ ಕಾಡು ಕೋಣಗಳ ಬಲಿ



ಮಡಿಕೇರಿ, ಏ.1– ಗುಂಡು ಹೊಡೆದು ಎರಡು ಕಾಡು ಕೋಣಗಳನ್ನು ಹತ್ಯೆ ಮಾಡಿರುವ ಘಟನೆ ಕುಶಾಲನಗರ ವಲಯ ಅರಣ್ಯ ಪ್ರದೇಶದ ದುಬಾರೆ ಅವರೆಗುಂದ ಅರಣ್ಯ ದಂಚಿನಲ್ಲಿ ನಡೆದಿದೆ. ನಿನ್ನೆ ರಾತ್ರಿ ಸುಮಾರು 10 ಗಂಟೆ ಸಮಯದಲ್ಲಿ ಗುಂಡು ಹಾರಿಸಿದ ಶಬ್ದ ಕೇಳಿ ಸ್ಥಳೀಯರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ. ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು ಸಿಬ್ಬಂದಿಗಳು ಪರಿಶೀಲನೆ ನಡೆಸಿದಾಗ 10 ಹಾಗೂ 6 ವರ್ಷ ಪ್ರಾಯದ ಗಂಡು–ಹೆಣ್ಣು ಕಾಡುಕೋಣಗಳು ಗುಂಡೇಟಿಗೆ ಬಲಿಯಾಗಿರುವುದು ಕಂಡು ಬಂದಿದೆ. ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದು ಅರಣ್ಯದಂಚಿನಲ್ಲಿ ಆರೋಪಿಗಳಿಗಾಗಿ ರಾತ್ರಿ ಹುಡುಕಾಟ ನಡೆಸಿದ್ದಾರೆ. ಬೆಳಗ್ಗೆ ಘಟನಾ ಸ್ಥಳಕ್ಕೆ ಡಿಎಫ್‌ಓ ಭಾಸ್ಕರ್, ಎಸಿಎಫ್ ಗೋಪಾಲ್, ಆರ್‌ಎಫ್‌ಓ ರತನ್ ಕುಮಾರ್, ಡಿಆರ್‌ಎಫ್‌ಓ ಹಂಸ ಭೇಟಿ ಪರಿಶೀಲನೆ ನಡೆಸಿದರು. ವನ್ಯಜೀವಿ ವೈದ್ಯ ಡಾ.ಚೆಟ್ಟಿಯಪ್ಪ ಮರಣೋತ್ತರ ಪರೀಕ್ಷೆ ನಡೆಸಿ ನಡೆಸಿ ಅಂತ್ಯಕ್ರಿಯೆ ಮಾಡಲಾಯಿತು. ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಕರಾಮುವಿವಿ: 16 ರಿಂದ ಪರೀಕ್ಷೆ

ಚಾಮರಾಜನಗರ, ಏ.1–ಶೈಕ್ಷಣಿಕ ಕಾರ್ಯಕ್ರಮಗಳು ಮುಗಿಯದ ಕಾರಣ ಪರೀಕ್ಷೆಗಳನ್ನು ಏಪ್ರಿಲ್ 16 ರಿಂದ ರಾಜ್ಯಾದ್ಯಂತ ನಿಗಧಿಪಡಿಸಿ ಪರೀಕ್ಷೆ ನಡೆಸಲಾಗುವುದು ಎಂದು ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ.

ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸೆಮಿಸ್ಟರ್, ವಾರ್ಷಿಕ ಪರೀಕ್ಷೆಗಳನ್ನು ಏಪ್ರಿಲ್ 7ರಿಂದ ನಡೆಸುವ ಬಗ್ಗೆ ವೇಳಾಪಟ್ಟಿಯನ್ನು ನಿಗದಿಪಡಿಸಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್‌ಜಾಲದಲ್ಲಿ ಈಗಾಗಲೇ ಪ್ರಕಟಿಸಲಾಗಿತ್ತು. ಆದರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪರಿಷ್ಕೃತ ವೇಳಾಪಟ್ಟಿಯನ್ನು ಶೀಘ್ರದಲ್ಲಿ ವಿಶ್ವವಿದ್ಯಾನಿಲಯದ ಅಧಿಕೃತ ಅಂತರ್‌ಜಾಲದಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in ನ online examination portal ಅನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ನಗರದಲ್ಲಿ ಇಂದು ಪೊಲೀಸ್ ಧ್ವಜ ದಿನಾಚರಣೆ

ಚಾಮರಾಜನಗರ, ಏ.1– ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಪೊಲೀಸ್ ಧ್ವಜ ದಿನಾಚರಣೆಯನ್ನು ನಾಳೆ ಬೆಳಗ್ಗೆ 8 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಪೊಲೀಸ್ ಅಧೀಕ್ಷರಾದ ಡಾ. ಬಿ.ಟಿ. ಕವಿತ ಅಧ್ಯಕ್ಷತೆ ವಹಿಸುವರು. ಪೂರ್ವ ಪೊಲೀಸ್ ಠಾಣೆಯ ನಿವೃತ್ತ ಪಿಎಸ್‌ಐ ಕೆ. ವಿಜಯಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ವ್ಯಕ್ತಿ ನಾಪತ್ತೆ

ಚಾಮರಾಜನಗರ, ಏ.1– ತಾಲೂಕಿನ ಹೊಂಗನೂರು ಗ್ರಾಮದ ಕೃಷ್ಣಮೂರ್ತಿ ಎಂಬುವವರು ಕಾಣೆಯಾಗಿದ್ದಾರೆ.



30 ವರ್ಷದವರಾದ ಇವರು 5 ಮುಕ್ಕಾಲು ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆ ಗೆಂಪು ಮೈ ಬಣ್ಣ, ಕೋಲು ಮುಖ ಹೊಂದಿದ್ದು, ಎರಡು ತೋಳು, ಬೆನ್ನಿನ ಹಿಂಭಾಗ ಹಚ್ಚೆ ಗುರುತು ಇರುತ್ತದೆ. ಕನ್ನಡ ಭಾಷೆ ಮಾತನಾಡುತ್ತಾರೆ.

ಇವರ ಸುಳಿವು ದೊರೆತಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂ.ಸಂ. 08226–222243, ಪೂರ್ವ ಪೊಲೀಸ್ ಠಾಣೆ ದೂ.ಸಂ 08226–222058, ಮೊ.ಸಂ 9480804648, ಜಿಲ್ಲಾ ನಿಯಂತ್ರಣ ಕೊಠಡಿ ದೂ.ಸಂ. 08226–222383 ಸಂಪರ್ಕಿಸುವಂತೆ ಪೂರ್ವ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಡಿಯುವ ನೀರು ಸಮಸ್ಯೆಯಾಗದಂತೆ ನೋಡಿಕೊಳ್ಳಿ: ವೆಂಕಟೇಶ್



ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಮಾತನಾಡಿದರು.

ಚಾಮರಾಜನಗರ, ಏ.1 – ಜಿಲ್ಲೆಯ ಯಾವುದೇ ಭಾಗದಲ್ಲೂ ಕುಡಿಯುವ ನೀರಿನ ಸಮಸ್ಯೆಯಾಗದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ತೊಂದರೆ ಕಂಡುಬಂದಲ್ಲಿ ತಕ್ಷಣವೇ ಪರಿಹರಿಸಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ನಗರದ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿಂದು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯ ಗ್ರಾಮಗಳಲ್ಲಿ ಪರ್ಯಾಯ ವ್ಯವಸ್ಥೆ ಮೂಲಕ ನೀರು ಬರಬರಾಜು ಮಾಡಬೇಕು. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲೇ ಇದ್ದು ನೀರಿಗೆ ಕೊರತೆಯಾಗದಂತೆ ನೋಡಿಕೊಳ್ಳಬೇಕು. ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಕುಡಿಯುವ ನೀರು ವ್ಯವಸ್ಥೆಯ ಬಗ್ಗೆ ಸಂಪೂರ್ಣವಾಗಿ ನಿಗಾ ವಹಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಲಭ್ಯವಿರುವ ಅನುದಾನದಲ್ಲಿ ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡಿ. ಮುಂದಿನ ದಿನಗಳಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಜನರಿಗೆ ಸಮಸ್ಯೆಯಾಗದಂತೆ ನೀರು ಪೂರೈಸುವುದು ಅಧಿಕಾರಿಗಳ ಹೊಣೆ ಹೆಚ್ಚು ಸಂಗ್ರಹ ಸಾಮರ್ಥ್ಯದ ಟ್ಯಾಂಕ್‌ಗಳಲ್ಲಿ ನೀರು ಶೇಖರಣೆ ಮಾಡಿ ಸರಬರಾಜು ಮಾಡುವ ಸ್ಥಳಗಳಲ್ಲಿ ಯಾವುದೇ ಸೋರಿಕೆ ಆಗದಂತೆ ಎಚ್ಚರವಹಿಸಿ ಎಂದು ಸಚಿವರು ತಿಳಿಸಿದರು. ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿ ಯಾವುದೇ ಲೋಪವಿಲ್ಲದಂತೆ ನಡೆಯಬೇಕು. ಗ್ರಾಮ ಪಂಚಾಯಿತಿಗಳು ಯೋಜನೆ ಹಸ್ತಾಂತರಿಸಿಕೊಳ್ಳುವ ಮೊದಲು ಎಲ್ಲವೂ ಸರಿಯಾಗಿದೆಯೇ ಎಂಬ ಬಗ್ಗೆ ಪರಿಶೀಲಿಸಿಕೊಳ್ಳಬೇಕು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಈ ಸಂಬಂಧ ಸೂಕ್ತ ಸೂಚನೆ ನೀಡಬೇಕೆಂದು ಸಚಿವರು ಸೂಚಿಸಿದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಜೆಜೆಎಂ ಕಾಮಗಾರಿ ನಿರ್ವಹಿಸಿದ ಕೆಲವು ಕಡೆ ಪೈಪ್‌ಗಳು ಒಡೆದು ಹೋಗಿ ತೊಂದರೆಯಾಗಿದೆ. ನಿಗದಿತ ಆಳ ಮತ್ತು ನಿರ್ದಿಷ್ಟ ಪೈಪ್‌ಗಳ ಅಳವಡಿಕೆಯಲ್ಲಿ ಮಾರ್ಗಸೂಚಿ ಪ್ರಕಾರ ಕಾಮಗಾರಿ ನಡೆಯಬೇಕಿದೆ. ಗುಂಬಳ್ಳಿಯಂತಹ ಪ್ರಕರಣಗಳು ಮರುಕಳಿಸದಂತೆ ನಿಗಾವಹಿಸಬೇಕು ಎಂದರು.

ಕೆಎಸ್‌ಆರ್‌ಟಿಸಿ ಬಸ್‌ಗಳ ಸೇವೆಯಲ್ಲಿ ಲಾಭವನ್ನಷ್ಟೇ ನೋಡದೇ ಗ್ರಾಮೀಣ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಹೆಚ್ಚು ಬಸ್ಸುಗಳನ್ನು ನಿಯೋಜಿಸಬೇಕು. ಎಂದು ಸಚಿವ ಕೆ. ವೆಂಕಟೇಶ್ ಸೂಚಿಸಿದರು.

ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಸ್. ಗಣೇಶ್ ಪ್ರಸಾದ್, ಡಾ. ಡಿ. ತಿಮ್ಮಯ್ಯ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಮೈಸೂರು ವಿಭಾಗದ ಉಪಾಧ್ಯಕ್ಷ ಡಾ. ಪುಷ್ಪಾ ಅಮರನಾಥ್, ಜಿಲ್ಲಾ ಅಧ್ಯಕ್ಷ ಹೆಚ್.ವಿ. ಚಂದ್ರು, ಕೆಡಿಪಿ ನಾಮನಿರ್ದೇಶಿತ ಸದಸ್ಯ ಮಹದೇವಣ್ಣ, ಸಯ್ಯದ್ ಮುಸ್ಸೆಯೀಬ್, ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಂಭ್ರಮದ ಈದ್-ಉಲ್-ಫಿತರ್ ಆಚರಣೆ



ಯಳಂದೂರು ಪಟ್ಟಣದ ಈದ್ಗಾ ಮೈದಾನದಲ್ಲಿ ಸೋಮವಾರ ರಂಜಾನ್ ಹಬ್ಬದ ನಿಮಿತ್ತ ವಿಶೇಷ ಪ್ರವಚನ ನೀಡುತ್ತಿರುವ ಧರ್ಮಗುರು ಅಬ್ರಾರ್ ಅಹಮ್ಮದ್

ಯಳಂದೂರು, ಏ1– ಮುಸ್ಲಿಮರ ಪವಿತ್ರ ಹಬ್ಬವಾದ ರಂಜಾನ್ (ಈದ್–ಉಲ್_ಫಿತರ್) ಹಬ್ಬವನ್ನು ತಾಲೂಕಿನಾದ್ಯಂತ ಸಂಭ್ರಮ ಸಡಗರಗಳಿಂದ ಆಚರಿಸಲಾಯಿತು.

ಪಟ್ಟಣದ ಜಾಮೀಯ ಮಸೀದಿ ಮುಂಭಾಗದಿಂದ ಬೆಳಗ್ಗೆ 9.30 ಕ್ಕೆ ಮೆರವಣಿಗೆ ಮೂಲಕ ಪಟ್ಟಣದ ರಾಷ್ಟ್ರೀಯ ಹೆದ್ದಾರಿ 209 ರಲ್ಲಿ ಇರುವ ಈದ್ಗಾ ಮೈದಾನದಲ್ಲಿ ವಿಶೇಷ ಪ್ರಾರ್ಥನೆ ನೆರವೇರಿಸಿದರು.

ಜಾಮೀಯ ಮಸೀದಿಯ ಧರ್ಮಗುರು ಅಬ್ರಾರ್ ಅಹಮ್ಮದ್ ಹಬ್ಬದ ಮಹತ್ವ ಇದರ ಆಚರಣೆ, ಉಪವಾಸದ ಮಹತ್ವ ಕುರಿತು ಪ್ರವಚನ ನೀಡಿದರು. ನಂತರ ವಿಶೇಷ ನಮಾಜ್‌ನ್ನು ನೆರವೇರಿಸಲಾಯಿತು. ಇದಾದ ಮೇಲೆ ದುವಾ (ಪ್ರಾರ್ಥನೆ) ನೆರವೇರಿಸಲಾಯಿತು. ನಂತರ ಮಕ್ಕಳೂ ಸೇರಿದಂತೆ ಪರಸ್ಪರರು ಆಲಂಗಿಸಿಕೊಳ್ಳುವ ಮೂಲಕ ಹಬ್ಬದ ಶುಭಾಶಯವನ್ನು ವಿನಿಮಯ ಮಾಡಿಕೊಂಡರು.

ಸಿದ್ದಗಂಗಾ ಶ್ರೀಗಳ ಜನ್ಮದಿನ: ದಾಸೋಹ ವ್ಯವಸ್ಥೆ

1500 ಜನರಿಗೆ ತಿಂಡಿ, 3500 ಜನರಿಗೆ ಊಟ ವಿತರಣೆ



ಶಿವಕುಮಾರ ಸ್ವಾಮೀಜಿಗಳ ಜನ್ಮ ದಿನಾಚರಣೆ ಅಂಗವಾಗಿ ಬೆಳಗ್ಗೆ ತಿಂಡಿ, ಮಧ್ಯಾಹ್ನ ಊಟವನ್ನು ಉಚಿತವಾಗಿ ವಿತರಿಸಿತು.

ಚಾಮರಾಜನಗರ, ಏ.1– ಶ್ರೀ ಶಿವಕುಮಾರ್ ಸ್ವಾಮೀಜಿಗಳ 118ನೇ ವರ್ಷದ ಜನ್ಮ ದಿನಾಚರಣೆ ಪ್ರಯುಕ್ತ ಇಂಚರ ಹೋಟೆಲ್ ಸಮೂಹದ ಮಾಲೀಕ ಸ್ಟೈಲ್ ಮಂಜು ಉಚಿತ ದಾಸೋಹದ ವ್ಯವಸ್ಥೆ ಮಾಡಿದ್ದರು.

ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಹೋಟೆಲ್‌ನಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಲಾಯಿತು. ನಂತರ ಬೆಳಿಗ್ಗೆಯಿಂದ ಸಂಜೆಯವರೆಗೆ ತಿಂಡಿ ಊಟ ಹಾಗೂ ಪಾನಕ, ಮಜ್ಜಿಗೆ ವಿತರಿಸಿದರು.

ಇಂಚರ ಹೋಟೆಲ್ ಗ್ರೂಪ್ ಮಾಲೀಕ ಕೆ.ಜಿ.ಮಂಜುನಾಥ ಮಾತನಾಡಿ, ಸ್ವಾಮೀಜಿ ಹುಟ್ಟುಹಬ್ಬದ ಅಂಗವಾಗಿ ಪ್ರತಿ ವರ್ಷವೂ ಉಚಿತವಾಗಿ ಊಟ, ತಿಂಡಿ ವ್ಯವಸ್ಥೆ ಮಾಡುತ್ತಿದ್ದು, ಆದರಂತೆ ಈ ಬಾರಿಯು ಬೆಳಿಗ್ಗೆ 1500 ಮಂದಿಗೆ ತಿಂಡಿ ಮಧ್ಯಾಹ್ನ 3500 ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿದೆ. ಇಡೀ ಪ್ರಪಂಚಕ್ಕೆ ದಾಸೋಹ ತತ್ವವನ್ನು ಸಾರಿ ತ್ರಿವಿಧ ದಾಸೋಹದಲ್ಲಿ ಎತ್ತರಕ್ಕೆ ಸಾಗಿ ಪ್ರಕಾಶಿಸಿ, ಆ ಬೆಳಕನ್ನು ಇಡೀ ನಾಡಿಗೆ ಹಂಚಿದ ದಿವ್ಯ ಬೆಳಕು ಡಾ. ಶ್ರೀ ಶಿವಕುಮಾರ ಮಹಾಸ್ವಾಮೀಜಿ ಅವರನ್ನು ಸ್ಮರಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಇಂಚರ ಗ್ರೂಪ್‌ನ ಇಂಚರ, ಈಶ್ವರ್ ರಕ್ಷಿತ್, ನಾಗರತ್ನಮ್ಮ, ಉಮಾ, ಪ್ರಕಾಶ್, ರಾಧಾಕೃಷ್ಣ, ಸಿಬ್ಬಂದಿ ವರ್ಗದವರು ಹಾಜರಿದ್ದರು.

ಡಾ. ಶಿವಕುಮಾರಸ್ವಾಮಿಗಳ ಜಯಂತೋತ್ಸವ: ಕುಡಿಯುವ ನೀರು ವಿತರಣೆ



ಶ್ರೀ ಡಾ. ಶಿವಕುಮಾರಸ್ವಾಮಿಗಳ ಜಯಂತಿ ಅಂಗವಾಗಿ ಸಿದ್ದಗಂಗಾ ಕುಡಿಯುವ ನೀರಿನ ಘಟಕದಲ್ಲಿ ಗ್ರಾಹಕರಿಗೆ ಉಚಿತವಾಗಿ ಶುದ್ಧ ಕುಡಿಯುವ ನೀರು ವಿತರಿಸಿದರು.

ಚಾಮರಾಜನಗರ, ಏ.1– ಶ್ರೀ ಡಾ. ಶಿವಕುಮಾರಸ್ವಾಮಿಗಳ 118ನೇ ಜಯಂತಿ ಅಂಗವಾಗಿ ನಗರದ ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘದಲ್ಲಿರುವ ಸಿದ್ದಗಂಗಾ ಶುದ್ದ ಕುಡಿಯುವ ನೀರಿನ ಘಟಕದಿಂದ ಗ್ರಾಹಕರಿಗೆ ಶುದ್ಧ ಕುಡಿಯುವ ನೀರು ಮೂಲಕ ನೀಡಲಾಯಿತು.

ಬೆಳಗ್ಗೆ ಸಹಕಾರ ಸಂಘದ ಅಧ್ಯಕ್ಷ ಗೌರಿಶಂಕರ್ ಅವರು ಸಿದ್ದಗಂಗಾಶ್ರೀಗಳ ಭಾವಚಿತ್ರಕ್ಕೆ ಪೂಜಾ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದ ಬಳಿಕ ಉಚಿತವಾಗಿ ಕ್ಯಾನ್‌ಗಳಿಗೆ ನೀರು ತುಂಬಿಸುವ ಮೂಲಕ ಚಾಲನೆ ನೀಡಿ ಸಂಘದ ಕಟ್ಟಡದಲ್ಲಿ ಸಿದ್ದಗಂಗಾ ಶ್ರೀಗಳ ಹೆಸರಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಆರಂಭಿಸಲಾಗಿದೆ. ಬೆಳಗ್ಗೆಯಿಂದ ಸಂಜೆವರೆಗೆ ಉಚಿತವಾಗಿ ಬಡಾವಣೆಯ ನಾಗರಿಕರಿಗೆ ವಿತರಿಸಲಾಗುತ್ತಿದೆ ಸಂಘದ ಸದಸ್ಯರು ಹಾಗೂ ಸಾರ್ವಜನಿಕರಿಗೆ ಕೇವಲ 5 ರೂ.ಗೆ 20 ಲೀಟರ್ ಶುದ್ಧ ಕುಡಿಯುವ ನೀರು ನೀಡಲಾಗುತ್ತಿದೆ ಎಂದರು.

ಸಂಘದ ಉಪಾಧ್ಯಕ್ಷ ಕುಮಾರಸ್ವಾಮಿ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಉಪಾಧ್ಯಕ್ಷೆ ಸುಂದ್ರಪ್ಪ, ಆರ್.ಎಸ್. ಲಿಂಗರಾಜು, ನಿರ್ದೇಶಕರಾದ ಡಾ. ಪರಮೇಶ್ವರಪ್ಪ, ಕೆ.ಎಸ್. ಮಹದೇವಸ್ವಾಮಿ, ವಿ. ನಂಜುಂಡಸ್ವಾಮಿ, ಗುರುಸ್ವಾಮಿ, ಬದನಗುಪ್ಪೆ ಗುರುಸ್ವಾಮಿ, ರಾಜಶೇಖರ್, ಲಿಂಗರಾಜಮೂರ್ತಿ, ದೊರೆಸ್ವಾಮಿ, ನಾಗೇಂದ್ರ, ಪ್ರಮೀಳಾ ಉದಕಟ್ಟಿ, ನಾಗಮಣಿ, ಶಿಕ್ಷಕ ಮಲ್ಲೇಶ್, ಸಿಇಓ ನಂಜುಂಡಸ್ವಾಮಿ, ಮಹೇಂದ್ರ, ಆಕಾಶ್ ಇತರರು ಇದ್ದರು.

ಪಡಿತರ ಚೀಟಿದಾರರಿಗೆ ಏಪ್ರಿಲ್ ಮಾಹೆಯ ಆಹಾರ ಧಾನ್ಯ ವಿತರಣೆ

ಚಾಮರಾಜನಗರ, ಏ.1– ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ 5 ಕೆಜಿ ಅಕ್ಕಿಯ ಬದಲಾಗಿ ನೀಡಲಾಗುತ್ತಿದ್ದ ಹಣದ ಬದಲು ಫೆಬ್ರವರಿ ಮಾಹೆಯಿಂದಲೇ ಅನ್ವಯವಾಗುವಂತೆ ಹೆಚ್ಚುವರಿಯಾಗಿ 5 ಕೆಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ ಎಂದು ಆಹಾರ ಇಲಾಖೆ ತಿಳಿಸಿದೆ.

ಏಪ್ರಿಲ್ ಮಾಹೆಯಲ್ಲಿ ಅಂತ್ಯೋದಯ ಪಡಿತರ ಚೀಟಿದಾರರ ಒಂದರಿಂದ ಮೂವರು ಸದಸ್ಯರಿರುವ ಕುಟುಂಬಕ್ಕೆ 35 ಕೆಜಿ ಅಕ್ಕಿ, ನಾಲ್ಕು ಸದಸ್ಯರ ಕುಟುಂಬಕ್ಕೆ 40 ಕೆಜಿ, ಐವರು ಸದಸ್ಯರ ಕುಟುಂಬಕ್ಕೆ 50 ಕೆಜಿ, ಆರು ಸದಸ್ಯರ ಕುಟುಂಬಕ್ಕೆ 60 ಕೆಜಿ, ಏಳು ಸದಸ್ಯರ ಕುಟುಂಬಕ್ಕೆ 70 ಕೆಜಿ, ಎಂಟು ಸದಸ್ಯರ ಕುಟುಂಬಕ್ಕೆ 80 ಕೆಜಿ, ಒಂಭತ್ತು ಸದಸ್ಯರ ಕುಟುಂಬಕ್ಕೆ 90 ಕೆಜಿ, 10 ಸದಸ್ಯರ ಕುಟುಂಬಕ್ಕೆ 100 ಕೆಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ.

ಏಪ್ರಿಲ್ ಮಾಹೆಯಲ್ಲಿ ಬಿಪಿಎಲ್ ಪಡಿತರ ಚೀಟಿದಾರ ಕುಟುಂಬಕ್ಕೆ ಓರ್ವ ಸದಸ್ಯರಿಗೆ 10 ಕೆಜಿ ಅಕ್ಕಿ, ಇಬ್ಬರು ಸದಸ್ಯರ ಕುಟುಂಬಕ್ಕೆ 20 ಕೆಜಿ, ಮೂವರು ಸದಸ್ಯರ ಕುಟುಂಬಕ್ಕೆ 30 ಕೆಜಿ, ನಾಲ್ಕು ಸದಸ್ಯರ ಕುಟುಂಬಕ್ಕೆ 40 ಕೆಜಿ, ಐದು ಸದಸ್ಯರ ಕುಟುಂಬಕ್ಕೆ 50 ಕೆಜಿ, ಆರು ಸದಸ್ಯರ ಕುಟುಂಬಕ್ಕೆ 60 ಕೆಜಿ, ಏಳು ಸದಸ್ಯರ ಕುಟುಂಬಕ್ಕೆ 70 ಕೆಜಿ, ಎಂಟು ಸದಸ್ಯರ ಕುಟುಂಬಕ್ಕೆ 80 ಕೆಜಿ, ಒಂಭತ್ತು ಸದಸ್ಯರ ಕುಟುಂಬಕ್ಕೆ 90 ಕೆಜಿ ಹಾಗೂ 10 ಸದಸ್ಯರ ಕುಟುಂಬಕ್ಕೆ 100 ಕೆಜಿ ಅಕ್ಕಿ ವಿತರಣೆ ಮಾಡಲಾಗುತ್ತದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಯೋಗಾನಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಸನ ಮಿತ್ರ

ವಿದ್ಯುತ್ ಸ್ವೀಕರಣಾ ಕೇಂದ್ರದ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚನೆ



ಶಾಸಕ ಎ.ಮಂಜು ಮಂಗಳವಾರ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಅರಕಲಗೂಡು: ತಾಲೂಕಿನ ಅಲ್ಲಾ ಪಟ್ಟಣ ಗ್ರಾಮದ ಬಳಿ ನಿರ್ಮಿಸಲು ಉದ್ದೇಶಿಸಿರುವ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದ ಕಾಮಗಾರಿಯನ್ನು ಕೈಗೊಂಡು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕ ಎ.ಮಂಜು, ಕೆಪಿಟಿಸಿಎಲ್ ಅಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ಮಂಗಳವಾರ ಕಂದಾಯ, ಕೆಪಿಟಿಸಿಎಲ್, ಸೆಸ್ಕ್ ಹಾಗೂ ಸರ್ವೆ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಈ ಹಿಂದೆ ಕಣಿಯಾರು ಗ್ರಾಮದ ಬಳಿ ಯೋಜನೆಗೆ ಜಮೀನು ನೀಡಲಾಗಿತ್ತು. ಅರಣ್ಯ ಇಲಾಖೆ ತಕರಾರಿನಿಂದಾಗಿ ಯೋಜನೆಯ ಕಾಮಗಾರಿಗೆ ಹಿನ್ನೆಡೆಯಾಗಿತ್ತು. ಹೀಗಾಗಿ ಅಲ್ಲಾ ಪಟ್ಟಣ ಗ್ರಾಮದ ಸರ್ವೆ ನಂ.59ರಲ್ಲಿ 7.10 ಎಕರೆ ಸರ್ಕಾರಿ ಜಾಗವನ್ನು ಮಂಜೂರು ಮಾಡಿ ಕೆಪಿಟಿಸಿಎಲ್‌ಗೆ ಹಸ್ತಾಂತರಿಸಲಾಗಿದೆ ಎಂದರು.

ಕಳೆದ ವಾರ ಅಧಿಕಾರಿಗಳು ಜಮೀನಿನ ಸರ್ವೆ ಕಾರ್ಯಕ್ಕೆ ಹೋದಾಗ ಕೆಲವರು ಅಡ್ಡಿ ಪಡಿಸಿದರು ಎನ್ನಲಾಗಿದೆ. ಕಂದಾಯ ಮತ್ತು ಸರ್ವೆ ಇಲಾಖೆ ಅಧಿಕಾರಿಗಳು, ಕೆಪಿಟಿಸಿಎಲ್ ಮತ್ತು ಸೆಸ್ಕ್ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ತೆರಳಿ ಸರ್ವೆ ಕಾರ್ಯ ನಡೆಸಿ ಜಾಗದ ಗಡಿ ಗುರುತಿಸಿ ಕೊಡುವಂತೆ ಸೂಚಿಸಿದರು.

ಇದೊಂದು ಮಹತ್ವದ ಯೋಜನೆಯಾಗಿದೆ. ತಾಲೂಕಿಗೆ ಹಾಸನದಿಂದ 66 ಕೆ.ವಿ. ಲೈನ್‌ನಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು, ಹೆಚ್ಚಿನ ಒತ್ತಡದ ಪರಿಣಾಮ ಪದೇ, ಪದೇ ಟ್ರಿಪ್ ಆಗುತ್ತಿದೆ. ಇದರಿಂದಾಗಿ 7 ಗಂಟೆ ವಿದ್ಯುತ್ ಸರಬರಾಜು ಮಾಡಲು ಅಡ್ಡಿಯಾಗುತ್ತಿದ್ದು, ಸಮಸ್ಯೆ ಉಂಟಾಗುತ್ತಿದೆ ಎಂದರು.

ತಾಲೂಕಿನಲ್ಲೇ 220 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರ ಸ್ಥಾಪನೆಯಾದರೆ ಯಾವುದೇ ಸಮಸ್ಯೆ ಇಲ್ಲದೆ, ಗುಣಮಟ್ಟದ ವಿದ್ಯುತ್ ಪೂರೈಕೆ ಆಗಲಿದೆ. ಅಧಿಕಾರಿಗಳು ನಿಗಾ ವಹಿಸಿ ಯೋಜನೆ ಅನುಷ್ಠಾನಕ್ಕೆ ಮುಂದಾಗುವಂತೆ ತಿಳಿಸಿದರು. ತಹಶೀಲ್ದಾರ್ ಕೆ.ಸಿ.ಸೌಮ್ಯ ಗ್ರೇಡ್-2 ತಹಶೀಲ್ದಾರ್ ಸಿ.ಸ್ವಾಮಿ, ವಿದ್ಯುತ್ ಇಲಾಖೆ ಅಧಿಕಾರಿಗಳಾದ ಸೋಮಶೇಖರ್, ಚಿದಂಬರ್, ಖುಷ್ವಂತ್, ಪಿಎಸ್‌ಐ ಸಿ.ಆರ್.ಕಾವ್ಯ ಉಪಸ್ಥಿತರಿದ್ದರು.

ನಾಲೆ ಮೇಲೆ ಸೌರ ಪ್ಯಾನೆಲ್

ಅರಕಲಗೂಡು ತಾಲೂಕಿನಲ್ಲಿ ಸೌರ ಪಾರ್ಕ್ ನಿರ್ಮಾಣಕ್ಕೆ ನಾಲೆಗಳನ್ನು ಬಳಸಿಕೊಳ್ಳಲು ಕೆಪಿಟಿಸಿಎಲ್ ಮುಂದಾಗಬೇಕು ಎಂದು ಶಾಸಕ ಎ.ಮಂಜು ಸಲಹೆ ನೀಡಿದರು.

ನಾಲೆಗಳ ಮೇಲ್ಭಾಗದಲ್ಲಿ ಸೌರ ಪ್ಯಾನೆಲ್‌ಗಳನ್ನು ಅಳವಡಿಸುವುದರಿಂದ ವಿದ್ಯುತ್ ಉತ್ಪಾದನೆಯ ಜೊತೆಗೆ ನಾಲೆಯ ನೀರು ಆವಿಯಾಗುವ ಪ್ರಕ್ರಿಯೆ ಸಹ ಕಡಿಮೆಯಾಗುತ್ತದೆ. ವಿದೇಶಗಳಲ್ಲಿ ಈ ತಂತ್ರಜ್ಞಾನ ಅಳವಡಿಸಿರುವುದನ್ನು ನೋಡಿದ್ದು ಇಲ್ಲೂ ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಹೇಳಿದರು.

ಸ್ಮರಣೆ ಮಾಡಿದರೆ ಸಾಲದು, ಆದರ್ಶಗಳ ಅಳವಡಿಸಿಕೊಳ್ಳಬೇಕು



ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿಗಳ ಜಯಂತಿ ಆಚರಣೆ.

ಬೇಲೂರು: ನಮ್ಮ ಸಂಸ್ಕೃತಿ, ಸಂಸ್ಕಾರಗಳು ಕಣ್ಮರೆಯಾಗುತ್ತಿರುವುದು ಸಮಾಜಕ್ಕೆ ಮಾರಕವಾದ ವಿಷಯವಾಗಿದೆ ಎಂದು ಪುಷ್ಪಗಿರಿ ಮಠದ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ವಿಷಾದ ವ್ಯಕ್ತಪಡಿಸಿದರು.

ಇಲ್ಲಿನ ವೀರಶೈವ ಕಲ್ಯಾಣ ಮಂಟಪದಲ್ಲಿ ತಾಲೂಕು ವೀರಶೈವ, ಲಿಂಗಾಯತ ಮಹಾಸಭಾದ ವತಿಯಿಂದ ಮಂಗಳವಾರ ಆಯೋಜಿಸಿದ್ದ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳ 118ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು, ಯಾವುದೇ ವ್ಯವಸ್ಥೆಗಳು ಇಲ್ಲದ ಸುಮಾರು 80 ವರ್ಷಗಳ ಹಿಂದೆ ಶಿವಕುಮಾರ ಶ್ರೀಗಳು ಸ್ವತಹ ಕೃಷಿ ಮಾಡಿ, ಕಷ್ಟಪಟ್ಟಿ ಮಠವನ್ನು ಕಟ್ಟಿ ತ್ರಿವಿಧ ದಾಸೋಹಿಗಳದರು. ನಾವು ಅವರ ಸ್ಮರಣೆ ಮಾಡಿದರೆ ಸಾಲದು, ಅವರ ಹಿತನುಡಿಗಳನ್ನು ಹಾಗೂ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಪುರಸಭೆ ಅಧ್ಯಕ್ಷ ಎ.ಆರ್.ಅಶೋಕ್ ಮಾತನಾಡಿದರು. ಶಿವಕುಮಾರ ಸ್ವಾಮೀಜಿಗಳು ಯಾವುದೇ ಜಾತಿ, ಧರ್ಮಕ್ಕೆ ಸಿಮೀತರಾದವರಲ್ಲ, ಸಾಕಷ್ಟು ವಿದ್ಯಾರ್ಥಿಗಳ ಜೀವನ ರೂಪಿಸಿಕೊಟ್ಟವರು. ಸಾಕ್ಷತ್ ನಡೆದಾಡುವ ದೇವರಂತೆ ಇದ್ದವರು. ಇವರ ಸ್ಮರಣೆಯನ್ನು ನಾವುಗಳು ಪ್ರತಿದಿನ ಮಾಡಬೇಕಿದೆ. ಪಟ್ಟಣದ ಯಾವುದಾದರೂ ಬೀದಿಗೆ ಇವರ ಹೆಸರು ಇಡಲಾಗುವುದು ಎಂದು ತಿಳಿಸಿದರು.


ಇವರ ಕೊಡುಗೆ ಸಮಾಜಕ್ಕೆ ಅಗಮ್ಯವಾಗಿದ್ದರೂ ಸಹ ಇವರಿಗೆ ಭಾರತರತ್ನ ಪ್ರಶಸ್ತಿ ನೀಡದಿರುವುದು ವಿಷಾದನೀಯವಾಗಿದ್ದು ಕೇಂದ್ರ ಸರ್ಕಾರ ಮರಣೋತ್ತರ ಭಾರತರತ್ನ ಪ್ರಶಸ್ತಿ ನೀಡಿ, ಇವರ ಸೇವೆಗೆ ಗೌರವ ನೀಡಬೇಕು ಎಂದು ಒತ್ತಾಯಿಸಿದರು.

ಅಖಿಲ ಭಾರತ ವೀರಶೈವ, ಲಿಂಗಾಯತ ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಅಡಗೂರು ಬಸವರಾಜು ಮಾತನಾಡಿದರು.

ಈ ಸಂದರ್ಭದಲ್ಲಿ ಸಮಾಜಕ್ಕಾಗಿ ಸೇವೆ ಸಲ್ಲಿಸಿದ್ದ ಅನ್ನಪೂರ್ಣ, ಉಮೇಶ್, ಅದ್ದೂರಿ ಚಂದ್ರಶೇಖರ್ ಹಾಗೂ ವಿರೂಪಾಕ್ಷ ಅವರಿಗೆ ಸನ್ಮಾನಿಸಲಾಯಿತು.

ಅಖಿಲ ಭಾರತ ವೀರಶೈವ, ಲಿಂಗಾಯತ ಮಹಾಸಭಾದ ತಾಲೂಕು ಘಟಕದ ನಿಕಟಪೂರ್ವ ಅಧ್ಯಕ್ಷ ರವಿಕುಮಾರ್, ರಾಜ್ಯ ಯುವ ಘಟಕದ ಕಾರ್ಯದರ್ಶಿ ವಿಕ್ರಂ, ಯುವ ಘಟಕದ ನಿಕಟಪೂರ್ವ ಅಧ್ಯಕ್ಷ ಚೇತನ್, ಶಿವಕುಮಾರ ಟ್ರಸ್ಟ್ ಅಧ್ಯಕ್ಷ ಧರ್ಮೇಂದ್ರ ಕುಮಾರ್, ಯೋಗೀಶ್, ನಿಂಗರಾಜು, ಹಾಲಪ್ಪ ಇತರರಿದ್ದರು.

ದೊಡ್ಡಹಳ್ಳಿ: ವಿಶೇಷ ಮಹಿಳಾ ಗ್ರಾಮಸಭೆ



ದೊಡ್ಡಹಳ್ಳಿ ಗ್ರಾಪಂ ವತಿಯಿಂದ ವಿಶೇಷ ಮಹಿಳಾ ಗ್ರಾಮಸಭೆ ನಡೆಯಿತು.

ಹಾಸನ: ಹೊಳೆನರಸೀಪುರ ತಾಲೂಕಿನ ದೊಡ್ಡಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ ವಿಶೇಷ ಮಹಿಳಾ ಗ್ರಾಮಸಭೆ ನಡೆಯಿತು.

ನರೇಗಾ ಯೋಜನೆಯಡಿ ತಾಲೂಕಿನಲ್ಲಿ ಗ್ರಾಮ ಪಂಚಾಯಿತಿಯು ವಿಶೇಷ ಸಾಧನೆ ಮಾಡಿದ್ದು, ಎನ್‌ಆರ್‌ಎಲ್‌ಎಂ ಯೋಜನೆಯಡಿ ಕೆರೆ-ಕಟ್ಟೆ, ನೀರುಗಾಲುವೆ, ಶಾಲಾ ಕಾಂಪೌಂಡ್, ಶಾಲೆಗಳಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣ ಮಾಡಲಾಗಿದೆ ಎಂದು ಪಿಡಿಒ ಈಶ್ವರ ಚಿನ್ನಶೆಟ್ಟಿ ತಿಳಿಸಿದರು.

ಪರಿಶಿಷ್ಟ ಜಾತಿ, ಪಂಗಡದವರಿಗೆ ವಿಶೇಷ ಸೌಲಭ್ಯಗಳಾದ ಸೌರ ಹೈಮಾಸ್ಟ್ ದೀಪ ಅಳವಡಿಕೆ ಮಾಡಿದ್ದು, ವಿಶೇಷ ಅನುದಾನಗಳ ಬಳಕೆ ಮಾಡಲಾಗಿದೆ. ಅಂಗವಿಕಲರ ಅನುದಾನ ಬಳಕೆ, ಶಾಲೆಗಳಿಗೆ ಕ್ರೀಡಾ ಅನುದಾನ ಬಳಕೆ ಮಾಡಲಾಗಿದೆ ಎಂದು ಹೇಳಿದರು.

ಗ್ರಾಪಂ ಅಧ್ಯಕ್ಷ ಮಾದೇಗೌಡರ ಅಧ್ಯಕ್ಷತೆಯಲ್ಲಿ ಬಜೆಟ್ ಅನ್ನು ನಿಯಮಾನುಸಾರ ಎಲ್ಲಾ ಕ್ಷೇತ್ರಗಳಿಗೆ ಬಳಕೆ ಮಾಡಲಾಗಿದೆ ಎಂದರು. ವಿಶೇಷ ಮಹಿಳಾ ಗ್ರಾಮಸಭೆಯ ಅಂಗವಾಗಿ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ವೀಣಾ, ತ್ರಿವೇಣಿ, ಮ್ಯುಜಿಕಲ್ ಚೇರ್‌ನಲ್ಲಿ ಸಾವಿತ್ರಿ, ಲತಾ, ಲೆಮನ್ ಸ್ಪೂನ್ ರನ್ನಿಂಗ್‌ನಲ್ಲಿ ಸಾವಿತ್ರಮ್ಮ, ಗೌರಮ್ಮ, ಸಂಗೀತ ಕಾರ್ಯಕ್ರಮದಲ್ಲಿ ರಾಜಮ್ಮ, ಕಾಳಮ್ಮ ಬಹುಮಾನ ಗಳಿಸಿದರು.

ಡಾ.ಶಿವಕುಮಾರ ಸ್ವಾಮಿಗಳಿಗೆ 'ಭಾರತ ರತ್ನ' ನೀಡಲು ಡಿಸಿಎಂ ಡಿ.ಕೆ.ಶಿವಕುಮಾರ್ ಮನವಿ

- ಶ್ರೀಗಳ 118ನೇ ಜಯಂತಿ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ರಾಜನಾಥ್ ಸಿಂಗ್‌ರಲ್ಲಿ ಕೋರಿಕೆ
- ತ್ರಿವಿಧದ ದಾಸೋಹದ ಮೂಲಕ ಸಮಾಜಕ್ಕೆ ಬಹುದೊಡ್ಡ ಕೊಡುಗೆ ನೀಡಿದ ಚೇತನಕ್ಕೆ ನಮನ



ತುಮಕೂರಿನ ಸಿದ್ಧಗಂಗಾ ಮಠದಲ್ಲಿ ನಡೆದ ಶಿವೈಕ್ಯ ಡಾ.ಶಿವಕುಮಾರ ಸ್ವಾಮೀಜಿಗಳ 118ನೇ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತಿತರ ಗಣ್ಯರು ಭಾಗವಹಿಸಿದ್ದರು.

ಬೆಂಗಳೂರು, ಏ.1(ಕೆಎಂಶಿ)-ಜಾತಿ, ಧರ್ಮಗಳ ತಾರತಮ್ಯವಿಲ್ಲದೆ ಅನ್ನ, ಅಕ್ಷರ, ಆಶ್ರಯದಂತಹ ತ್ರಿವಿಧ ದಾಸೋಹದ ಮೂಲಕ ಸಮಾಜಕ್ಕೆ ಸಾವಿರಾರು ಮುತ್ತು-ರತ್ನಗಳನ್ನು ನೀಡಿದ ಡಾ.ಶಿವಕುಮಾರಸ್ವಾಮೀಜಿ ಅವರಿಗೆ 'ಭಾರತ ರತ್ನ' ನೀಡಿ ಗೌರವಿಸಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ತುಮಕೂರಿನ ಸಿದ್ಧಗಂಗಾ ಮಠದಲ್ಲಿಂದು ನಡೆದ ಶಿವೈಕ್ಯ ಡಾ.ಶಿವಕುಮಾರ ಸ್ವಾಮೀಜಿಗಳ 118ನೇ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕೇಂದ್ರ ಸಚಿವ ರಾಜನಾಥ್ ಸಿಂಗ್ ಅವರನ್ನುದ್ದೇಶಿಸಿ ಮಾತನಾಡಿದ ಉಪಮುಖ್ಯಮಂತ್ರಿ, ಶ್ರೀಗಳಿಗೆ 'ಭಾರತ ರತ್ನ' ನೀಡುವಂತೆ ರಾಜ್ಯದ ಜನ ಹಾಗೂ ಸರ್ಕಾರದ ಪರ ಮನವಿ ಮಾಡುವುದಾಗಿ ತಿಳಿಸಿದರು.

ಮನುಷ್ಯತ್ವದ ಪ್ರತಿರೂಪ ಡಾ.ಶಿವಕುಮಾರ ಸ್ವಾಮೀಜಿಯ ಆಚಾರ-ವಿಚಾರ ಮೈಗೂಡಿಸಿಕೊಳ್ಳಲು ಇಲ್ಲಿ ಸೇರಿದ್ದೇವೆ. ಶ್ರೀಗಳನ್ನು ಕೊನೆ ದಿನಗಳಲ್ಲಿ ಚೆನ್ನೈ ಆಸ್ಪತ್ರೆಯಲ್ಲಿ ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಸ್ವಾಮೀಜಿ ನಮ್ಮ ಜಿಲ್ಲೆಯವರು, ನಮ್ಮ ತಂದೆ-ತಾಯಿ ನನಗೆ ಶಿವಕುಮಾರ ಎಂಬ ಹೆಸರಿಟ್ಟಿರುವುದು ನನ್ನ ಭಾಗ್ಯ. ಶ್ರೀಗಳನ್ನು ದಿನವೂ ಸ್ಮರಿಸುವ ಪುಣ್ಯ ನನ್ನದು. ನಾವೆಲ್ಲ ದೇವರ ಸ್ವರೂಪಿಯನ್ನು ಸ್ಮರಿಸುತ್ತಿದ್ದೇವೆ. ದೇಹಕ್ಕೆ ಹಸಿವಾದರೆ ಪ್ರಸಾದ ಬೇಕು, ಮನಸ್ಸಿಗೆ ಹಸಿವಾದರೆ ಪ್ರಾರ್ಥನೆ ಮಾಡಬೇಕು. ಮನುಷ್ಯನ ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲವಾಗುವುದಿಲ್ಲ ಎಂಬುದು ನನ್ನ ನಂಬಿಕೆ. ಧರ್ಮ, ದೇವರ ಮೇಲೆ ನಂಬಿಕೆ ಇಟ್ಟುಕೊಂಡಿರುವವನು ನಾನು, ಧರ್ಮ ಯಾವುದಾದರೂ ತತ್ವವೊಂದೇ, ನಾಮ ನೂರಾದರೂ ದೈವವೊಂದೇ, ಪೂಜೆ ಯಾವುದಾದರೂ ಭಕ್ತಿಯೊಂದೇ, ಕರ್ಮ ಹಲವಾದರೂ ನಿಷ್ಠೆಯೊಂದೆ, ದೇವನೊಬ್ಬ ನಾಮ ಹಲವು ಎಂದರು.

ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಸಚಿವನಾಗಿದ್ದಾಗ ಶ್ರೀಮಠಕ್ಕೆ ಆಗಮಿಸಿದ್ದೆ. ಮಠದ ಅನ್ನದಾಸೋಹ ಸರ್ಕಾರದ ಕಾರ್ಯಕ್ರಮ ಆಗಬೇಕೆಂಬ ಕಾರಣಕ್ಕೆ ಅಂದಿನ ಮುಖ್ಯಮಂತ್ರಿ ಕೃಷ್ಣ, ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆ ಆರಂಭಿಸಿದರು ಎಂದು ಸ್ಮರಿಸಿದರು.

ನಾವು ತಿನ್ನುವ ಅನ್ನ, ಕುಡಿಯುವ ನೀರು, ನಮ್ಮ ದುಡಿಮೆಯ ಬೆವರಾಗಬೇಕೇ ಹೊರತು, ಬೇರೆಯವರ ಕಣ್ಣೀರಾಗಬಾರದು ಎಂಬುದಾಗಿ ಡಾ.ಶಿವಕುಮಾರ ಸ್ವಾಮೀಜಿ ಹೇಳಿದ್ದರು. ನಾನು ಅವರ ಅನೇಕ ಭಾಷಣ ಕೇಳಿದ್ದೇನೆ, ಅವರ ಪ್ರತಿಯೊಂದು ಮಾತು ಅರ್ಥಗರ್ಭಿತವಾಗಿವೆ. ಭಾರತದ ಸಂಸ್ಕೃತಿ ದೇಶದ ಆಸ್ತಿ, ವಿಶ್ವದ ಜನತೆ ನಮ್ಮ ದೇಶದ ಆಚಾರ-ವಿಚಾರ ನಂಬಿ ಶರಣಾಗಿದ್ದಾರೆ, ಧರ್ಮ ಎಂದರೆ ಮನುಷ್ಯತ್ವ, ಮನುಷ್ಯತ್ವ ರೂಪಿಸುವ ಪವಿತ್ರ ಕೆಲಸವನ್ನು ಶ್ರೀಗಳು ಮಾಡಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಎಸ್ಸಿ, ಎಸ್ಟಿ ದೂರುಗಳ ಬಗ್ಗೆ ತ್ವರಿತ ಕ್ರಮ ವಹಿಸಲು ಡಿಸಿ ಸೂಚನೆ



ಮೈಸೂರಲ್ಲಿ ಎಸ್ಸಿ, ಎಸ್ಟಿ ದೌರ್ಜನ್ಯ ನಿಯಂತ್ರಣ ಸಮಿತಿ ಸಭೆ ನಡೆಯಿತು.

ಮೈಸೂರು, ಏ.1(ಆರ್‌ಕೆ)-ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲೆ ದೌರ್ಜನ್ಯವೆಸಗಿದವರ ವಿರುದ್ಧ ತ್ವರಿತವಾಗಿ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅಧೀನಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮೈಸೂರಿನ ಪಡುವಾರಹಳ್ಳಿಯಲ್ಲಿರುವ ಬಾಬು ಜಗಜೀವನ ರಾಂ ಭವನದ ಸಭಾಂಗಣದಲ್ಲಿ ನಡೆದ ಎಸ್ಸಿ, ಎಸ್ಟಿ ದೌರ್ಜನ್ಯ ನಿಯಂತ್ರಣ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು, ಎಸ್ಸಿ, ಎಸ್ಟಿ ಸಮುದಾಯದವರ ಮೇಲಿನ ದೌರ್ಜನ್ಯ ಕುರಿತ ಮಾಹಿತಿಗಳೊಂದಿಗೆ ಸಭೆಗೆ ಬಂದು ಮಾಹಿತಿ ನೀಡಬೇಕು ಎಂದು ನುಡಿದರು.

ಈ ವಿಚಾರದಲ್ಲಿ ನಿರ್ಲಕ್ಷ್ಯ ತೋರಿ ಅಗತ್ಯ ಕ್ರಮ ಕೈಗೊಂಡು ಸಮಸ್ಯೆ ಇತ್ಯರ್ಥಗೊಳಿಸದಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ ಲಕ್ಷ್ಮೀಕಾಂತ ರೆಡ್ಡಿ ಅವರು ಪೊಲೀಸ್ ಠಾಣಾ ವ್ಯಾಪ್ತಿಯ ಕುಂದು-ಕೊರತೆ ವಿಚಾರಣಾ ಸಭೆಗಳಲ್ಲಿ ಈ ದೂರುಗಳ ಬಗ್ಗೆ ಪರಿಶೀಲಿಸಿ ತಡ ಮಾಡದೇ ಅಗತ್ಯ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ತಮ್ಮ ಹಂತದಲ್ಲೇ ದೂರುಗಳ ಬಗ್ಗೆ ವಿಚಾರಣೆ ನಡೆಸಿ ಕ್ರಮ ವಹಿಸಿದರೆ ಸಮಸ್ಯೆಗಳು ಉಲ್ಬಣವಾಗುವುದಿಲ್ಲ ಕಾನೂನು, ನಿಯಮಾವಳಿಗಳನ್ನು ಪರಿಣಾಮಕಾರಿಯಾಗಿ ಬಳಸಿ ಸಮುದಾಯದ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಎಸ್‌ಸಿಪಿ ಹಾಗೂ ಟಿಎಸ್‌ಪಿ ಅನುದಾನದಲ್ಲಿ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಸಮುದಾಯ ಭವನಗಳ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಿರ್ವಹಣೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಅಕ್ರಮ ಮದ್ಯ ಮಾರಾಟದ ಬಗ್ಗೆ ದೂರುಗಳು ಬಂದರೆ ಅಬಕಾರಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾನೂನು ರೀತಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದ ಜನರ ಮೇಲೆ ಹಲ್ಲೆ, ದೌರ್ಜನ್ಯಗಳು ನಡೆದರೆ ತಕ್ಷಣವೇ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುವುದು ಹಾಗೂ ಪ್ರತಿ ಪೊಲೀಸ್ ಠಾಣೆಯಲ್ಲಿಯೂ ಕುಂದು-ಕೊರತೆ ಸಭೆ ನಡೆಸಲಾಗುತ್ತಿದೆ ಎಂದರು. ಸಭೆಯಲ್ಲಿ ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಎಎಸ್ಪಿ ಸಿ.ಮಲ್ಲಿಕ್ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಎಕೆಬಿಎಂಎಸ್ ಚುನಾವಣೆ ಡಾ.ಭಾನುಪ್ರಕಾಶ್ ಶರ್ಮ ಬೆಂಬಲಿಗರ ಆಯ್ಕೆ

ಬೆಂಗಳೂರು: ಏ.13ರಂದು ನಡೆಯಲಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನದ ಚುನಾವಣೆಗೆ ಪೂರ್ವಭಾವಿಯಾಗಿ ರಾಜ್ಯದ ಹಲವು ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಪ್ರತಿನಿಧಿಗಳ ಆಯ್ಕೆಯಲ್ಲಿ ಡಾ.ಭಾನುಪ್ರಕಾಶ್ ಶರ್ಮ ಅವರ ಬೆಂಬಲಿಗರು ಹಲವು ಜಿಲ್ಲೆಗಳಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಾಲಿ ಅಧ್ಯಕ್ಷ ಅಶೋಕ ಹಾರ್ನಹಳ್ಳಿ ಬೆಂಬಲದೊಂದಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಭಾನುಪ್ರಕಾಶ್ ಶರ್ಮಾ ಬೆಂಬಲಿಗರಾದ ದುರ್ಗಾ ಪ್ರಸಾದ್ (ಕೊಡಗು), ಮಹೇಶ್ ಕಜೆ (ಮಂಗಳೂರು), ಡಾ.ಶ್ರೀನಾಥ್ (ಬಳ್ಳಾರಿ), ಕೆ.ದಿವಾಕರ್ (ವಿಜಯನಗರ), ಅಕ್ಷಯ ಕುಲಕರ್ಣಿ (ಬೆಳಗಾವಿ), ಮಹಾಬಲ (ಚಿಕ್ಕಮಗಳೂರು), ಶ್ರೀನಿವಾಸ ಹುಯಿಲಗೋಳ (ಗದಗ) ಹಾಗೂ ಉತ್ತರ ಕನ್ನಡದಲ್ಲಿ ಶ್ರೀಪಾದ ನಾರಾಯಣ ರಾಯಸದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶ್ರೀ ಶಿವಕುಮಾರಸ್ವಾಮಿಗಳ ಜಯಂತಿ ಆಚರಣೆ



ಚಾಮುಂಡಿಪುರಂ ಬಸವ ಬಳಗದ ವತಿಯಿಂದ ಶ್ರೀ ಶಿವಕುಮಾರಸ್ವಾಮಿಗಳವರ ಜಯಂತ್ಯುತ್ಸವ ಆಚರಿಸಲಾಯಿತು.

ಮೈಸೂರು, ಏ. 1- ಮೈಸೂರಿನ ಚಾಮುಂಡಿಪುರಂ ಬಸವ ಬಳಗದ ವತಿಯಿಂದ ಸಿದ್ದಗಂಗಾ ಮಠದ ಶ್ರೀ ಶಿವಕುಮಾರಸ್ವಾಮಿಗಳವರ ಜಯಂತ್ಯುತ್ಸವ ಆಚರಿಸಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿ ನಂತರ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಮಾಡಿದರು. ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಬಸವ ಬಳಗಗಳ ಒಕ್ಕೂಟದ 2025ನೇ ಸಾಲಿನ ಅಧ್ಯಕ್ಷ ನಾಗರಾಜ್, ಸಂಘದ ಅಧ್ಯಕ್ಷ ಸಂದೀಪ್ ಚಂದ್ರಶೇಖರ್, ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಉಪಾಧ್ಯಕ್ಷ ಬಸವರಾಜು, ಮುಖಂಡರಾದ ಬಸವರಾಜು, ಮಂಜುನಾಥ್, ಧರ್ಮೇಂದ್ರ ಯೋಗೇಶ್, ರಾಜೇಂದ್ರ ಮೋಹನ್, ಶೇಖರ್, ಶಿವಪ್ರಸಾದ್, ಧನುಷ್, ಎಸ್‌ಆರ್‌ಎಸ್ ಶಿವಕುಮಾರ್, ಪಾರ್ಥಸಾರಥಿ, ದೇವೇಂದ್ರಸ್ವಾಮಿ, ಸಂದೇಶ್, ಸತ್ಯರಾಜ್ ಮತ್ತಿತರರು ಹಾಜರಿದ್ದರು.

ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡರಿಗೆ ಸನ್ಮಾನ...



ಮೈಸೂರು ತಾಲೂಕು ಜಯಪುರ ಹೋಬಳಿಯ ಧನಗಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಜಯಗಳಿಸಿ ನಿರ್ದೇಶಕರಾಗಿ ಆಯ್ಕೆಯಾದ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲಪುರ ಬಿ.ಗುರುಸ್ವಾಮಿ ಬಣದ 8 ಮಂದಿ ನಿರ್ದೇಶಕರು, ಚಾಮುಂಡೇಶ್ವರಿ ಕ್ಷೇತ್ರ ಹಿರಿಯ ಕಾಂಗ್ರೆಸ್ ಮುಖಂಡರೂ ಆದ ಮೈಮುಲ್ ಮಾಜಿ ಅಧ್ಯಕ್ಷ ಮಾವಿನಹಳ್ಳಿ ಎಸ್.ಸಿದ್ದೇಗೌಡ ಅವರನ್ನು ಸನ್ಮಾನಿಸಿದರು. ಈ ವೇಳೆ ಧನಗಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ನಿರ್ದೇಶಕರಾದ ಬಿ.ಗುರುಸ್ವಾಮಿ, ಚಿಕ್ಕಣ್ಣ, ಅಂದಾನಿ, ಮಹೇಶ್, ನಾಗೇಶ್, ಸಾಲುಂಡಿ ಚಂದ್ರು, ಕೆಂಪಮ್ಮ,ದೊಡ್ಡತಾಯಮ್ಮ ಹಾಗೂ ಚಾಮುಂಡೇಶ್ವರಿ ಕ್ಷೇತದ ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ನಾಳೆ ನಾದಬ್ರಹ್ಮ ಗಾನ ರಸದೌತಣ

ಮೈಸೂರು,ಏ.1(ಜಿಎ)-ಮೈಸೂರಿನ ಶ್ರೀ ವಿದ್ಯಾಸಾಧನ ಕಲಾ ತಂಡದ ವತಿಯಿಂದ ಏ.3ರಂದು ಸಂಜೆ 5ರಿಂದರಾತ್ರಿ 9ರವರೆಗೆ ಜೆಎಲ್‌ಬಿ ರಸ್ತೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗಾನ ರಸದೌತಣ ಕನ್ನಡ ಚಲನಚಿತ್ರ ಗೀತೆಗಳ ಗಾನ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆ ಮುಖ್ಯಸ್ಥೆ ಎನ್.ತನುಜಾ ಅಶೋಕ್ ಈ ವಿಷಯ ತಿಳಿಸಿ, ಇದು ಕರೋಕೆ ಗಾಯನ ಕಾರ್ಯಕ್ರಮವಾಗಿದ್ದು, 12ರಿಂದ 13 ಗಾಯಕ, ಗಾಯಕಿಯರು ಸುಮಾರು 38 ಗೀತೆ ಹಾಡಲಿದ್ದಾರೆ. ಶೇ.75ರಷ್ಟು ಹಳೆಯ ಕನ್ನಡ ಚಿತ್ರಗೀತೆಗಳು, ಹಾಗೂ ಇತ್ತೀಚಿನ ಕನ್ನಡ ಚಿತ್ರಗೀತೆಗಳಾಗಿರಲಿವೆ. ಲೋಕೇಶ್, ರಾಮ್‌ಪ್ರಸಾದ್, ಚೆಲುವರಾಜ್, ಮುತ್ತುರಾಜ್, ರವಿ, ಮಲ್ಲಿಕಾರ್ಜುನ್ ಮತ್ತು ಬಸವಾನಂದ ಹಾಗೂ ತನುಜಾ, ಶುಭ, ಶಾಂತಿ ಮತ್ತು ಗೀತಾ ಹಾಡಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಶಾಂತಿ, ಮುತ್ತುರಾಜ್, ಲೋಕೇಶ್, ಚೆಲುವರಾಜ್ ಉಪಸ್ಥಿತರಿದ್ದರು.

ಕೆ.ಎಸ್.ತಿಮ್ಮಯ್ಯನವರ ಜನ್ಮ ದಿನಾಚರಣೆ



ಮಿಷನ್ ಮೋದಿ ಡೆಮಾಕ್ರಸಿ ಡೆವಲಪ್‌ಮೆಂಟ್ ಟ್ರಸ್ಟ್ ವತಿಯಿಂದ ವೀರ ಸೇನಾನಿ ಜನರಲ್ ಕೆ.ಎಸ್.ತಿಮ್ಮಯ್ಯನವರ 119ನೇ ಜನ್ಮದಿನ ಆಚರಿಸಲಾಯಿತು. ಟ್ರಸ್ಟ್‌ನ ಜಿಲ್ಲಾಧ್ಯಕ್ಷ ಮೈ.ನಾ.ಲೋಕೇಶ್, ಮಾಜಿ ಸೈನಿಕ ಪಿ.ಬಿ.ಕಣ್ಣನ್, ಸಂಘಟನಾ ಕಾರ್ಯದರ್ಶಿ ಕಾಯಪಂಡ ವಿಷ್ಣು ನಾಚಪ್ಪ, ರವಿಶಂಕರ್, ಬಲ್ಲಡಚಂಡ ನಾಚಪ್ಪ, ವಿಜಯ್ ಕುಮಾರ್, ವಾದಿರಾಜ ಆಚಾರ್ಯ, ಮಹಿಳಾ ಘಟಕದ ಉಪಾಧ್ಯಕ್ಷರಾದ ಶ್ರೀಮತಿ ಸುಮಾ ರಾವ್ ಉಪಸ್ಥಿತರಿದ್ದರು.

ವೀರಶೈವ ಲಿಂಗಾಯಿತ ವಧು-ವರರ ಸಮಾವೇಶ

ಮೈಸೂರು,ಏ.1-ಮೈಸೂರಿನ ಗನ್‌ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಏ.13ರಂದು ಮಧ್ಯಾಹ್ನ 3 ರಿಂದ ಸಂಜೆ 6ರವರೆಗೆ ವೀರಶೈವ ಲಿಂಗಾಯತ ವಧು-ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಏ.12ರೊಳಗೆ ನೋಂದಣಿ ಮಾಡಿಕೊಳ್ಳುವಂತೆ ಕೋರಲಾಗಿದೆ. ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗಿನಲ್ಲಿರುವ ಸಮುದಾಯದ ಎಲ್ಲರೂ ಇದನ್ನು ಸದುಪಯೋಗಪಡಿಸಿಕೊಳ್ಳಬಹುದು. ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

ತತ್ವ ಸಂಖ್ಯಾನ ಗ್ರಂಥದ ಸ್ಪರ್ಧೆಯಲ್ಲಿ ನೀಲಕಂಠ, ಶ್ರೀಹರಿಗೆ ಬಹುಮಾನ

- ರಾಜ್ಯಮಟ್ಟದಲ್ಲಿ ಮೈಸೂರಿಗೆ ಸ್ಥಾನ
- ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಗಳ ಸಾಧನೆ
- ಆಚಾರ್ಯ ವಿದ್ಯಾಧಿಷ್ಠಾನಂ-ಆಯೋಜನೆ

ಮೈಸೂರು: ಬೆಂಗಳೂರಿನ ಹನುಮಂತನಗರದ ಮಾಧ್ವ ಮಂದಿರದಲ್ಲಿ ಆಚಾರ್ಯ ವಿದ್ಯಾಧಿಷ್ಠಾನಂ ಪ್ರತಿಷ್ಠಾನದ ವಾರ್ಷಿಕೋತ್ಸವದ ಅಂಗವಾಗಿ ಪಂಡಿತ ಬಾಳಗಾರು ರುಚಿರಾಚಾರ್ಯರು ಆಯೋಜಿಸಿದ್ದ ತತ್ವ ಸಂಖ್ಯಾನ ಗ್ರಂಥ ಆಧಾರಿತ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೈಸೂರಿಗೆ ಎರಡು ಬಹುಮಾನ ದೊರೆತಿದೆ. ಶ್ರೀ ಸೋಸಲೆ ವ್ಯಾಸರಾಜರ ಮಠದ ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ವಿದ್ಯಾರ್ಥಿಗಳು ಬಹುಮಾನ ಪಡೆದ್ದಾರೆ.

ವಿದ್ಯಾರ್ಥಿಗಳಾದ ನೀಲಕಂಠನಿಗೆ ಪ್ರಥಮ ಬಹುಮಾನ ಫಲಕ ಸಹಿತ 10,000 ರೂ. ನಗದು ಮತ್ತು ಪ್ರಶಸ್ತಿ ಪತ್ರ, ಶ್ರೀಹರಿಗೆ ತೃತೀಯ ಬಹುಮಾನ ಫಲಕ ಸಹಿತ 3,000 ರೂ. ನಗದು ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಗಿದೆ. ಆಚಾರ್ಯ ಶ್ರೀ ಮಧ್ವರು ರಚಿಸಿದ 37 ಸರ್ವಮೂಲ ಗ್ರಂಥಗಳಲ್ಲಿ ತತ್ವ ಸಂಖ್ಯಾನ ವಿಶೇಷ ಕೃತಿಯಾಗಿದೆ. ಈ ಗ್ರಂಥದ ಬಗ್ಗೆ ಪರಿಚಯಾತ್ಮಕ ಜ್ಞಾನವು ಸಂಸ್ಕೃತ, ವೇದ, ದ್ವೈತ ಶಾಸ್ತ್ರ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ದೊರಕಬೇಕು ಎಂಬ ನಿಟ್ಟಿನಲ್ಲಿ ಅನುವಾದ, ಲಿಖಿತ ಪರೀಕ್ಷೆ ಮತ್ತು ಮೌಖಿಕ ಪ್ರಶ್ನೋತ್ತರ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜನೆ ಮಾಡಲಾಗಿತ್ತು. ರಾಜ್ಯದ ವಿವಿಧ ಭಾಗದ ವಿದ್ಯಾಪೀಠಗಳ 16 ವರ್ಷದೊಳಗಿನ ಮಕ್ಕಳು ಭಾಗವಹಿಸಿದ್ದು ವಿಶೇಷವಾಗಿತ್ತು. ನಂತರ ನಡೆದ ವಿದ್ವತ್ ಸಭೆಯಲ್ಲಿ ಪಂಡಿತರಾದ ವರದಾಚಾರ್ಯ ಜಾಲೀಹಾಳ, ರುಚಿರಾಚಾರ್ಯ, ಬಾಳಗಾರು ವಿದಾರ್ಣವ, ನರಸಿಂಹಾಚಾರ್ಯ ಕಟ್ಟಿ ಅವರು ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಇದೇ ಸಂದರ್ಭ ವಿದ್ವಾಂಸರಿಂದ ಶಾಸ್ತ್ರ ಗ್ರಂಥಗಳ ಚಿಂತನ- ಮಂಥನ ಗೋಷ್ಠಿ ನಡೆಯಿತು.



ಬೆಂಗಳೂರಿನ ಹನುಮಂತ ನಗರದ ಮಾಧ್ವ ಮಂದಿರದಲ್ಲಿ ಆಚಾರ್ಯ ವಿದ್ಯಾಧಿಷ್ಠಾನಂ ಪ್ರತಿಷ್ಠಾನ ಹಮ್ಮಿಕೊಂಡಿದ್ದ ತತ್ವ ಸಂಖ್ಯಾನ ಗ್ರಂಥ ಆಧಾರಿತ ಸ್ಪರ್ಧೆಯಲ್ಲಿ ಮೈಸೂರಿನ ಶ್ರೀ ಶ್ರೀ ವ್ಯಾಸತೀರ್ಥ ವಿದ್ಯಾಪೀಠದ ನೀಲಕಂಠ (ಪ್ರ), ಶ್ರೀಹರಿ (ತೃತೀಯ) ಬಹುಮಾನ ಪಡೆದರು. ಪಂಡಿತರಾದ ವರದಾಚಾರ್ಯ ಜಾಲೀಹಾಳ, ರುಚಿರಾಚಾರ್ಯ, ಬಾಳಗಾರು ವಿದಾರ್ಣವ, ನರಸಿಂಹಾಚಾರ್ಯ ಕಟ್ಟಿ ಹಾಜರಿದ್ದರು.

ಮೈಸೂರು ಮಿತ್ರ

ತ್ರಿವಿಧ ದಾಸೋಹಿ ಡಾ.ಶಿವಕುಮಾರ ಸ್ವಾಮೀಜಿ ಜಯಂತಿ

ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರದ ಮೂಲಕ ಅರ್ಥಪೂರ್ಣ ಆಚರಣೆ

ತಿ.ನರಸೀಪುರ, ಏ.1– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ನಡೆದಾಡುವ ದೇವರು, ತ್ರಿವಿಧ ದಾಸೋಹಿ, ತುಮಕೂರಿನ ಸಿದ್ಧಗಂಗಾ ಮಠದ ಡಾ.ಶಿವಕುಮಾರ ಸ್ವಾಮೀಜಿ ಅವರ 118ನೇ ಜಯಂತಿಯನ್ನು ಪಟ್ಟಣದಲ್ಲಿ ಮಂಗಳವಾರ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರದ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದ ಜೆಎಸ್‌ಎಸ್ ಸಭಾ ಭವನದಲ್ಲಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಹಾಗೂ ಜೀವಧಾರೆ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ 200ಕ್ಕೂ ಹೆಚ್ಚು ಮಂದಿ ಆರೋಗ್ಯ ತಪಾಸಣೆಗೆ ಒಳಗಾದರು. ರಕ್ತದಾನ ಶಿಬಿರದಲ್ಲಿ ಪುರಸಭಾ ಸದಸ್ಯ ಎಸ್.ಕೆ.ಕಿರಣ, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ಪೇದೆ ಮಾಲೇಗೌಡ ಕೆಂಪಿ, ಗೀತಾ ಸೇರಿದಂತೆ 87 ಮಂದಿ ರಕ್ತದಾನ ಮಾಡಿದರು. ಇಬ್ಬರು ಮಹಿಳೆಯರು ಹಾಗೂ ನಿಲಸೋಗೆ ಗ್ರಾಮದ ಯುವಕ ರಾಜೇಶ್ ಕೈಗೆ ಸಿದ್ಧಗಂಗಾಶ್ರೀಗಳ ಟ್ಯಾಟೂ ಹಾಕಿಸಿಕೊಂಡು ರಕ್ತದಾನ ಮಾಡಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ. ಬಸವರಾಜು ಮಾತನಾಡಿ, ನಾಡಿನ ದಾಸೋಹ ಪರಂಪರೆಯನ್ನು ಎಲ್ಲೆಡೆ ಪಸರಿಸಿದ ತ್ರಿವಿಧ ದಾಸೋಹಿ ಸಿದ್ದಗಂಗಾ ಮಠದ ಶ್ರೀ ಶಿವ ಕುಮಾರಸ್ವಾಮೀಜಿ ಅವರ ಜಯಂತಿಯನ್ನು ವಿಶೇಷವಾಗಿ ಆಚರಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಹಾಗೂ ದೇಶಾದ್ಯಂತ ಸಂಘಟನೆಯಾಗಲು ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ಈ ದೆಸೆಯಲ್ಲಿ ಪದಾಧಿಕಾರಿಗಳಾಗಿ ಆಯ್ಕೆಯಾಗಿರುವವರು ಜವಾಬ್ದಾರಿ ಅರಿತು ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ವಾಟಾಳು ಮಠದ ಡಾ.ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಲಕ್ಷಾಂತರ ಮಕ್ಕಳಿಗೆ ಶಿಕ್ಷಣ ಮತ್ತು ಆಸರೆ ನೀಡಿದ ಶಿವಕುಮಾರ ಸ್ವಾಮೀಜಿ ಅವರು ಮಠಮಾನ್ಯಗಳ ಗೌರವವನ್ನು ಉತ್ತುಂಗಕ್ಕೆ ಕೊಂಡೊಯ್ದರು. ಅಂತಹ ಮಹಾನ್ ತ್ಯಾಗಿಗಳ ಜಯಂತಿಯಂದು ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ಆಯೋಜಿಸಿರುವುದು ಸಮಾಜಮುಖಿ ಕಾರ್ಯವಾಗಿದೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ರಾಜಶೇಖರ ಸ್ವಾಮೀಜಿ, ಗುರುಸ್ವಾಮಿ ಸ್ವಾಮೀಜಿ, ಮಲ್ಲಪ್ಪ ಶ್ರೀಗಳು, ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಎನ್.ಮಹದೇವಸ್ವಾಮಿ, ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್, ಯುವ ಘಟಕದ ಜಿಲ್ಲಾಧ್ಯಕ್ಷ ಅರ್ಜುನ್ ಪಾರ್ಥ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಎಂ.ಪಿ.ಧನ್ಯಕುಮಾರಿ, ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ವಿ.ಶಿವಶಂಕರ್, ಕಾರ್ಯದರ್ಶಿ ಕಾರ್ ಮಲ್ಲಪ್ಪ, ನಿರ್ದೇಶಕ ಎಸ್.ಬಿ.ಸುಗಂಧರಾಜು, ಕೆ.ಎಂ.ಮಲ್ಲು, ತೋಂಟೇಶ್, ಉದ್ಯಮಿ ಪೆಟ್ರೋಲ್ ಬಂಕ್ ಚಂದ್ರು, ಪಿಎಸಿಎಸ್ ಅಧ್ಯಕ್ಷ ಎಂ.ಕುಮಾರಸ್ವಾಮಿ, ಪುಟ್ಟಸ್ವಾಮಿ, ಡೈರಿ ಗುರುಮೂರ್ತಿ, ಕಾಡ ಮಾಜಿ ನಿರ್ದೇಶಕ ಹಿರಿಯೂರು ವೀರೇಂದ್ರ, ಜಾಗತಿಕ ಮಹಾಸಭಾ ಅಧ್ಯಕ್ಷ ತೊಟ್ಟವಾಡಿ ರವಿ, ಬಸವ ಬಳಗದ ಅಧ್ಯಕ್ಷ ಪರಮೇಶ್ ಪಟೇಲ್, ಗ್ರಾಪಂ ಸದಸ್ಯ ಕಿರಗಸೂರು ಮಹದೇವಸ್ವಾಮಿ, ಮುಖಂಡರಾದ ಕೆಬ್ಬೆಹುಂಡಿ ಶಿವಕುಮಾರ್, ಸೋಮಶೇಖರ್, ಮುಸುವಿನ ಕೊಪ್ಪಲು ಶಿವರಾಂ, ತೋಂಟೇಶ್, ನಿಲಸೋಗೆ ಮಹಾದೇವ ಪ್ರಸಾದ್, ಕೆಇಬಿ ಸಿದ್ದಲಿಂಗಸ್ವಾಮಿ, ಬೆನಕನಹಳ್ಳಿ ಪ್ರಭುಸ್ವಾಮಿ, ಬಿಳಿಗೆರೆಹುಂಡಿ ಮಹದೇವಸ್ವಾಮಿ, ಬಿ.ಮಂಟೇಲಿಂಗಪ್ಪ ಸತ್ಯೇಂದ್ರ ಮೂರ್ತಿ, ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ಸ್ವಾಮಿ, ಎನ್.ಲೋಕೇಶ್, ನೆರಗ್ಯಾತನಹಳ್ಳಿ ಪುಟ್ಟಸ್ವಾಮಿ, ಗುರುಮೂರ್ತಿ, ಪ್ರವೀಣ್, ಚಂದ್ರಧರ, ಮಾಯಪ್ಪ ಹಾಗೂ ಇತರರಿದ್ದರು.





ತಿ.ನರಸೀಪುರದಲ್ಲಿ ನಡೆದ ಸಿದ್ದಗಂಗಾ ಮಠದ ಶಿವಕುಮಾರಸ್ವಾಮೀಜಿ ಅವರ ಜಯಂತಿಯನ್ನು ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಬಸವರಾಜು ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಸಾರ್ವಜನಿಕರು ರಕ್ತದಾನ ಮಾಡುತ್ತಿರುವುದನ್ನು ಕಾಣಬಹುದು.

ಮಹಾಸಭಾ, ಮಹಿಳಾ ಘಟಕಗಳಿಗೆ ಪದಾಧಿಕಾರಿಗಳ ಆಯ್ಕೆ

ಮಹಾಸಭಾ ಯುವ ಘಟಕದ ಪದಾಧಿಕಾರಿಗಳು: ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕಕ್ಕೆ ಕೆ.ಎನ್.ಅಶೋಕ್(ಅಧ್ಯಕ್ಷ), ರವಿ, ನಾಗೇಶ್, ನಿಲಸೋಗೆ ಯೋಗೇಶ್ (ಉಪಾಧ್ಯಕ್ಷರು), ರಘು(ಪ್ರ.ಕಾರ್ಯದರ್ಶಿ), ಪ್ರವೀಣ್ ಕುಮಾರ್, ಸಾಗರ್(ಕಾರ್ಯದರ್ಶಿ), ಶರತ್ ಕುಮಾರ್(ಖಜಾಂಚಿ), ಸುನೀಲ್, ಮಹದೇವಸ್ವಾಮಿ, ಮಹೇಶ್, ಮಹಾಲಿಂಗಸ್ವಾಮಿ, ಮಣಿಕಂಠ, ಮನು, ಸಂತೋಷ್, ನಂದೀಶ್, ನಂದನ್, ನಂಜುಂಡಸ್ವಾಮಿ, ನಿತಿನ್, ಮಹದೇವ ಪ್ರಸಾದ್, ಪೃಥ್ವಿ, ಸಂತೋಷ್, ಶ್ರೀನಾಥ್ ಹಾಗೂ ತೇಜಸ್ (ನಿರ್ದೇಶಕರು) ಅವರನ್ನು ಆಯ್ಕೆ ಮಾಡಲಾಯಿತು.

ಮಹಿಳಾ ಘಟಕ: ಜಿ.ರೂಪಶ್ರೀ ಪರಮೇಶ್ (ಅಧ್ಯಕ್ಷೆ) ಡಿ.ಕೋಮಲ ಕುಮಾರಸ್ವಾಮಿ, ಜ್ಯೋತಿ ಪರಮೇಶ್ ಪಟೇಲ್, ಸುಶೀಲಾ ಮಲ್ಲಪ್ಪ (ಉಪಾಧ್ಯಕ್ಷೆಯರು), ಶೋಭಾ ಶಿವಕುಮಾರಸ್ವಾಮಿ (ಪ್ರಧಾನ ಕಾರ್ಯದರ್ಶಿ), ಸುಮಿತ್ರ ಶ್ರೀಧರ್, ಇಂದ್ರ ಸಿದ್ದಲಿಂಗಸ್ವಾಮಿ, ರಾಜೇಶ್ವರಿ ಶ್ರೀಕಂಠಸ್ವಾಮಿ, (ಕಾರ್ಯದರ್ಶಿ), ತ್ರಿವೇಣಿ ಶಂಕರಪ್ಪ (ಕೋಶಾಧ್ಯಕ್ಷೆ), ಲಾವಣ್ಯವತಿ ನಟರಾಜು, ಶಾರದಾಂಬ ಜಗದೀಶ್, ವಿಜಯಲಕ್ಷ್ಮಿ ಶಿವಣ್ಣ, ಲಲಿತಮ್ಮ ಶಿವಲೀಲಾ, ಶಿವಶಂಕರಮ್ಮ, ಮಲ್ಲಿಕಾ ಬಸವರಾಜು, ಸೌಭಾಗ್ಯ, ನೀಲಾಂಬಿಕೆ, ನಾಗಮಣಿ(ನಿರ್ದೇಶಕಿಯರು) ಅವರನ್ನು ಆಯ್ಕೆ ಮಾಡಿ, ಪದವಿ ಪದಗ್ರಹಣ ನೆರವೇರಿಸಲಾಯಿತು.

ಗ್ಯಾರಂಟಿ ಯೋಜನೆ ತಲುಪಿಸಲು ನಿರ್ಲಕ್ಷ್ಯ ವಹಿಸುವ

ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ: ಎಚ್ಚರಿಕೆ



ಕೆ.ಆರ್.ನಗರ, ಏ.1– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹರಿಗೆ ತಲುಪಿಸಲು ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಶಿಫಾರಸ್ಸು ಮಾಡುವುದಾಗಿ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಎಸ್.ಎಸ್.ಮಹದೇವ್ ಮತ್ತು ಉದಯಶಂಕರ್ ಎಚ್ಚರಿಕೆ ನೀಡಿದರು.

ಪಟ್ಟಣದ ತಾಪಂ ಕೃಷ್ಣರಾಜೇಂದ್ರ ಸಭಾಂಗಣದಲ್ಲಿ ನಡೆದ ಸಾಲಿಗ್ರಾಮ ಮತ್ತು ಕೆಆರ್.ನಗರ ತಾಲೂಕಿನ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಈ ವಿಚಾರದಲ್ಲಿ ಯಾರನ್ನೂ ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದರು.

ಕೆ.ಆರ್.ನಗರ ತಾಲೂಕು ಸಮಿತಿ ಅಧ್ಯಕ್ಷ ಎಂ.ಎ.ಮಹದೇವ್ ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿತವಾದ ವಿಚಾರಗಳು ಮತ್ತು ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮ ಕೈಗೊಂಡು ನಮಗೆ ಮುಂದಿನ ಸಭೆಯೊಳಗೆ ಸಂಪೂರ್ಣ ವರದಿ ನೀಡಬೇಕೆಂದು ತಾಕೀತು ಮಾಡಿದರು.

ಸಾಲಿಗ್ರಾಮ ತಾಲೂಕು ಅಧ್ಯಕ್ಷ ಉದಯಶಂಕರ್ ಮಾತನಾಡಿ, ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡುವ ವಿಚಾರದಲ್ಲಿ ಕೆಲವು ಅಧಿಕಾರಿಗಳು ನಿರ್ಲಕ್ಷ್ಯ ಮಾಡುವುದರೊಂದಿಗೆ ಸಮಿತಿ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂದು ವ್ಯಾಪಕ ದೂರುಗಳು ಕೇಳಿ ಬರುತ್ತಿದ್ದು, ಇದು ಪುನರಾವರ್ತನೆಯಾಗಬಾರದು ಎಂದು ತಿಳಿಸಿದರು. ಈ ಸಂದರ್ಭ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಬರುವ ಪ್ರಗತಿ ಬಗ್ಗೆ ವರದಿ ಮಂಡಿಸಿ ಮುಂದಿನ ದಿನಗಳಲ್ಲಿ ಶೇ.100 ರಷ್ಟು ಪ್ರಗತಿ ಸಾಧಿಸುವುದಾಗಿ ತಿಳಿಸಿದರು.

ಗ್ಯಾರಂಟಿ ಯೋಜನಾ ಸಮಿತಿ ಜಿಲ್ಲಾ ಉಪಾಧ್ಯಕ್ಷೆ ಲತಾ, ಸದಸ್ಯ ಯೋಗೇಶ್, ತಾಲೂಕು ಸಮಿತಿ ಸದಸ್ಯರಾದ ಸೈಯದ್ ಜಾಬೀರ್, ಮಂಜುನಾಥ್, ಮಹದೇವ ನಾಯಕ, ಕುಮಾರ್, ಸರಿತಾ, ಮಹಾಲಿಂಗು, ಜಯಮ್ಮ, ಜಿ.ಎಂ.ಹೇಮಂತ್, ತಾಪಂ ಇಓಗಳಾದ ವಿ.ಪಿ.ಕುಲದೀಪ್, ಎ.ಎನ್.ರವಿಕುಮಾರ್, ಸುರೇಶ್, ಚೆಸ್ಕಾಂನ ಸಹಾಯಕ ಕಾರ್ಯಪಾಲಕ ಅಭಿಯಂತರ ಅರ್ಕೇಶ್ ಮೂರ್ತಿ, ಆಹಾರ ಇಲಾಖೆಯ ಶಿರಸ್ತೇದಾರ್ ಎಲ್.ಮಂಜುನಾಥ್ ಹಾಜರಿದ್ದರು.

ಏ.4, ಲಕ್ಷ್ಮೀದೇವಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ

ಹೆಚ್.ಡಿ.ಕೋಟೆ, ಏ.1– ಪಟ್ಟಣದ ಶ್ರೀಲಕ್ಷ್ಮೀ ವರದರಾಜಸ್ವಾಮಿ ದೇವಸ್ಥಾನದ ಶ್ರೀಲಕ್ಷ್ಮೀ ದೇವಿ ಅಮ್ಮನವರ ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮ ಏ.4ರಂದು ನಡೆಯಲಿದೆ ಎಂದು ದೇವಾಲಯದ ಕಾರ್ಯದರ್ಶಿ ತಿರುಮಲಾಚಾರ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಶ್ರೀಲಕ್ಷ್ಮೀ ವರದರಾಜ ಸ್ವಾಮಿ ದೇವಸ್ಥಾನದಲ್ಲಿರುವ ಶ್ರೀಲಕ್ಷ್ಮೀ ದೇವಿ ಅಮ್ಮನವರ ದೇವಸ್ಥಾನ ಶಿಥಿಲವಾಗಿದ್ದು, ಪುನರ್ ನಿರ್ಮಾಣಕ್ಕೆ ಶಾಸಕ ಅನಿಲ್ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಇದಕ್ಕೆ ಸ್ಪಂದಿಸಿದ ಶಾಸಕರು ಪುರಾತತ್ವ ಇಲಾಖೆಯಿಂದ 40 ಲಕ್ಷ ಅನುದಾನ ಬಿಡುಗಡೆ ಮಾಡಿಸಿದ ಫಲವಾಗಿ ಇಂದು ದೇವಾಲಯ ನಿರ್ಮಾಣಗೊಂಡಿದೆ ಎಂದರು.

ದೇವಾಸ್ಥಾನ ಪುನರ್ ಪ್ರತಿಷ್ಠಾಪನೆ ಮತ್ತು ಕುಂಭಾಭಿಷೇಕ ಹಾಗೂ ವಿಮಾನ ಗೋಪುರ ಕಾರ್ಯಕ್ರಮ ಏ.2, 3, 4 ರಂದು ನಡೆಯಲಿದೆ. 4 ಲಕ್ಷ ವೆಚ್ಚದಲ್ಲಿ ದೇವಾಲಯದ ವಿಮಾನ ಗೋಪುರವನ್ನು ಬಿ.ಎಸ್.ರಂಗ ಅಯ್ಯಂಗಾರ್ ಕುಟುಂಬದವರು ನಿರ್ಮಿಸಿಕೊಟ್ಟಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ದೇವಾಲಯದ ಕಾರ್ಯದರ್ಶಿ ತಿರುಮಲಾಚಾರ್ ಮಾತನಾಡಿದರು.

ಏ.4 ರಂದು ರಂಗ ಅಯ್ಯಂಗಾರ್ ಅವರ ಪುತ್ರಿ ರೂಪ ಅಯ್ಯಂಗಾರ್ ಅವರು ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಂಡಿದ್ದಾರೆ ಎಂದರು.

ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್ ವಿಮಾನ ಗೋಪುರ ಕಳಸಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಸಾರಿಗೆ, ಮುಜರಾಯಿ ಇಲಾಖೆ ಸಚಿವ ರಾಮಲಿಂಗರೆಡ್ಡಿ ಶಿಲಾನ್ಯಾಸ ಅನಾವರಣಗೊಳಿಸಲಿದ್ದಾರೆ. ಶಾಸಕ ಅನಿಲ್ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಸುನೀಲ್ ಬೋಸ್, ಎಂಎಲ್‌ಸಿಗಳಾದ ಡಾ.ಯತೀಂದ್ರ, ಕೆ.ವಿವೇಕಾನಂದ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇ ಗೌಡ, ಪುರಸಭಾಧ್ಯಕ್ಷೆ ಶಿವಮ್ಮ, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಸಮಾಜ ಸೇವಕ ಕೃಷ್ಣನಾಯಕ, ಪುರಾತತ್ವ ಸಂಗ್ರಹಾಲಯ ಹಾಗೂ ಪರಂಪರೆ ಇಲಾಖೆ ಆಯುಕ್ತ ದೇವರಾಜ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಆಚರಣೆ ಸಮಿತಿ ಅಧ್ಯಕ್ಷ ನಾಗಣ್ಣ, ಉಪಾಧ್ಯಕ್ಷ ಶ್ರೀಕಾಂತ್, ನಿರ್ದೇಶಕ ದೇವರಾಜು ಹಾಜರಿದ್ದರು.

ವಿವಿಧೆಡೆ ಶಿವಕುಮಾರಶ್ರೀಗಳ ಜಯಂತಿ



ಬೆಟ್ಟದಪುರ ಸಮೀಪ ಶ್ರೀಶಿವಕುಮಾರ ಸ್ವಾಮೀಜಿ ಜಯಂತಿ ಆಚರಿಸಲಾಯಿತು.

ಬೆಟ್ಟದಪುರ, ಏ.1– ಪಿರಿಯಾಪಟ್ಟಣ ತಾಲೂಕಿನ ವಿವಿಧೆಡೆ ಸಿದ್ಧಗಂಗಾ ಶ್ರೀ ಶಿವಕುಮಾರಸ್ವಾಮೀಜಿ ಅವರ 118ನೇ ಜಯಂತಿಯನ್ನು ಅನ್ನದಾನ, ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಆಚರಿಸಲಾಯಿತು.

ತಾಲೂಕಿನ ಕೊಣಸೂರು, ಕೂರಗಲ್ಲು, ಗೊರಹಳ್ಳಿ, ಹರದೂರು, ಅತ್ತಿಗೋಡು, ಕಿತ್ತೂರು, ಮರದೂರು, ಮೇಲೂರು ಸೇರಿದಂತೆ ವಿವಿಧೆಡೆ ವೀರಶೈವ ಲಿಂಗಾಯತ ಸೇರಿದಂತೆ ಎಲ್ಲಾ ಸಮಾಜದ ಮುಖಂಡರು ಒಗ್ಗೂಡಿ ಆಚರಿಸಿದರು. ಅಲ್ಲದೇ ಕೊಪ್ಪದಲ್ಲಿ ಬಿವಿಎಸ್ ಗ್ರೂಪ್ ಹಾಗೂ ತಿರುಮಲಾಪುರದಲ್ಲಿ ಅನ್ನದಾನ ಹಮ್ಮಿಕೊಳ್ಳಲಾಗಿತ್ತು

ವಿಜೃಂಭಣೆಯ ಶ್ರೀಚಿಕ್ಕದೇವಮ್ಮ ಜಾತ್ರಾ ಮಹೋತ್ಸವ



ಸರಗೂರು, ಏ.1– ತಾಲೂಕಿನ ಇಟ್ನಾ ಗ್ರಾಮದಲ್ಲಿ ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ಜಮಾಯಿಸಿದ್ದ ಸಾವಿರಾರು ಭಕ್ತರು ಗ್ರಾಮದ ಬೀದಿಗಳಲ್ಲಿ ದೇವರ ಮೆರವಣಿಗೆ ನಡೆಸಿ ಭಕ್ತಿ ಸಮರ್ಪಿಸಿದರು. ಈ ವೇಳೆ ಭಕ್ತರು ಹರಕೆ ತೀರಿಸಿದರು. ಮೆರವಣಿಗೆ ನಂತರ ಶ್ರೀಚಿಕ್ಕದೇವಮ್ಮ ಹಾಗೂ ಶಿವ ಪಾರ್ವತಿ ಉತ್ಸವ ಮೂರ್ತಿಯನ್ನು ಚಿಕ್ಕದೇವಮ್ಮನವರ ಬೆಟ್ಟಕ್ಕೆ ಕಳುಹಿಸಲಾಯಿತು. ಈ ಸಂದರ್ಭ ಸಾವಿರಾರು ಭಕ್ತರು ದೇವರ ದರ್ಶನ ಪಡೆದರು. ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಸ್ವಾರ್ಥ ಬಿಟ್ಟು ಸಂಘ ಬೆಳೆಸಲು ಕಾರ್ಯೋನ್ಮುಖರಾಗಿ

ಚುಂಚನಕಟ್ಟೆ, ಏ.1– ಸ್ವಾರ್ಥ ಬಿಟ್ಟು ಸಂಘ ಕಟ್ಟಿ ಬೆಳೆಸಲು ಪ್ರತಿಯೊಬ್ಬರೂ ಕಾರ್ಯೋನ್ಮುಖರಾಗಬೇಕು ಎಂದು ಸಾಲಿಗ್ರಾಮ ತಾಲೂಕು ವಿಶ್ವ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಎಸ್.ಪಿ.ಅಪ್ಪಾಜಿಗೌಡ ಸಲಹೆ ನೀಡಿದರು.

ಪಟ್ಟಣದ ವಿಶ್ವ ಒಕ್ಕಲಿಗರ ಸಂಘದ ಸಭಾಂಗಣದಲ್ಲಿ ನಡೆದ ಸರ್ವ ಸದಸ್ಯರ ಸಭೆ ಮತ್ತು ಕೆಂಪೇಗೌಡರ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಂಘ ಮತ್ತು ಸಮುದಾಯವನ್ನು ಕಟ್ಟಿ ಬೆಳೆಸಬೇಕಾದರೆ ಕೆಲವು ತ್ಯಾಗ ಮಾಡಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ನಾನೇ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಎಂಬ ಮನೋಭಾವದಿಂದ ಸಂಘದ ಸಂಘಟನೆಗೆ ಕೈಜೋಡಿಸುವಂತೆ ಸದಸ್ಯರಲ್ಲಿ ಮನವಿ ಮಾಡಿದರು.

ಸಾಲಿಗ್ರಾಮ ತಾಲೂಕಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಾಲಿಗ್ರಾಮ ತಾಲೂಕು ವಿಶ್ವ ಒಕ್ಕಲಿಗರ ಸಂಘವನ್ನು ದೊಡ್ಡದಾಗಿ ಕಟ್ಟುವ ಜೊತೆಗೆ ಅತಿ ಹೆಚ್ಚು ಸದಸ್ಯರನ್ನಾಗಿ ಮಾಡುವ ಮೂಲಕ ಷೇರು ಬಂಡವಾಳ ಮತ್ತು ದಾನಿಗಳಿಂದ ಸಹಾಯ ಪಡೆದು ನಿವೇಶನ ಜೊತೆಗೆ ಸಮುದಾಯ ಭವನ ನಿರ್ಮಿಸುವ ಜವಾಬ್ದಾರಿ ಈ ಆಡಳಿತ ಮಂಡಳಿ ಮೇಲಿದೆ ಎಂದರು.




ಸಂಘದ ಖಜಾಂಚಿ ನಾಗೇಶ್ ಸಂಘದ ಹಣಕಾಸು ವಿವರ ಮಂಡಿಸುತ್ತಿರುವುದು.

ಸಮುದಾಯದ ಸ್ವಾಮೀಜಿ ಮತ್ತು ವಿವಿಧ ಗಣ್ಯರನ್ನು ಆಹ್ವಾನಿಸಿ ಬೆಂಗಳೂರು ಕಟ್ಟಿದ ಕೆಂಪೇಗೌಡರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದರು.

ಸಂಘದ ಅಧ್ಯಕ್ಷ ಸೋಮು ಮಾತನಾಡಿ, ಹಿರಿಯರು ಮತ್ತು ಸಂಘದ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಮತ್ತು ಸದಸ್ಯರ ಸಲಹೆ ಪಡೆದು ರಾಜ್ಯದಲ್ಲೇ ಮಾದರಿ ಸಂಘವನ್ನಾಗಿ ಬೆಳೆಸುವ ಜವಾಬ್ದಾರಿ ಈ ಆಡಳಿತ ಮಂಡಳಿಯ ಮೇಲಿದ್ದು ಅದನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದರು.

ಸಂಘದ ಖಜಾಂಚಿ ನಾಗೇಶ್ ಮಾತನಾಡಿದರು. ಸಂಘದ ಉಪಾಧ್ಯಕ್ಷ ಗುರುಪ್ರಸಾದ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ವಕ್ತಾರ ಎಸ್‌ಎ ರವೀಶ್, ಪತ್ರಕರ್ತ ಚುಂಚನಕಟ್ಟೆ ಮಧು, ನಿರ್ದೇಶಕರಾದ ಮಹೇಶ, ಅನಂತು, ನಾಗೇಂದ್ರ, ಮಂಜು, ಸತೀಶ, ಶ್ರೀನಿವಾಸ, ವೆಂಕಟೇಶ, ಮಹದೇವ, ಮಧುಚಂದ್ರ, ಕುಮಾರ್, ಮಹೇಶ್, ರಾಮೇಗೌಡ, ಮಂಜು, ಗಿರೀಶ್, ತುಳಸಿ, ರಾಮೇಗೌಡ ಇನ್ನಿತರರಿದ್ದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರಿಗೆ ಸನ್ಮಾನ



ತಿ.ನರಸೀಪುರ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಉಪಾಧ್ಯಕ್ಷ ಎನ್.ಎನ್. ಮಹದೇವಸ್ವಾಮಿ ಅವರನ್ನು ಪುರಸಭಾ ಸದಸ್ಯರಾದ ಬಾದಾಮಿ ಮಂಜು, ಎಸ್‌ಕೆಕಿರಣ್, ನಾಗರಾಜು, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್ ಗೌಡ, ಮಹದೇವಪ್ಪ, ಬ್ಯಾಂಕ್ ವ್ಯವಸ್ಥಾಪಕ ಮಹೇಶ್, ಸಿ.ಮಹದೇವ್, ಗುರುದತ್, ನಂಜಪ್ಪ ಅಭಿನಂದಿಸಿದರು.

ಸಚಿವರು ದಲಿತ ವಿರೋಧಿ ನೀತಿ ಅನುಸರಿಸುತ್ತಿಲ್ಲ

ತಿ.ನರಸೀಪುರ, ಏ.1– ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಸಂಘಟನೆಗಳ ಐಕ್ಯತೆ ಅಪೇಕ್ಷಿಸಿ, ಬಣಗಳೆಲ್ಲವೂ ಒಗ್ಗೂಡಿ ಸಮುದಾಯದ ಪರ ಹೋರಾಟ ಮಾಡಬೇಕೆಂಬ ಕನಸು ಕಂಡವರು. ಹೀಗಾಗಿ ಸಚಿವರು ದಲಿತ ವಿರೋಧಿ ನೀತಿ ಅನುಸರಿಸುತ್ತಿಲ್ಲ ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ (ಡಾ. ಡಿ.ಜಿ.ಸಾಗರ್ ಬಣ)ಯ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ ತಿಳಿಸಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆ ಪೂರ್ವದಲ್ಲಿ 15 ಬಣಗಳಾಗಿ ಒಡೆದು ಹಂಚಿ ಹೋಗಿದ್ದ ಸಂಘಟನೆಗಳಲ್ಲಿ 12 ಸಮಿತಿಗಳನ್ನು ಒಗ್ಗೂಡಿಸಿದ ಮಹದೇವಪ್ಪ ಅವರು ನ್ಯಾಷನಲ್ ಕಾಲೇಜು ಆವರಣದಲ್ಲಿ ಕೋಮುವಾದಿ ಆಡಳಿತದ ವಿರುದ್ಧ ಬೃಹತ್ ಹೋರಾಟವನ್ನು ಸಮಾವೇಶದ ಮಾದರಿ ಮಾಡಿದ್ದರು. ಅಂತಹವರ ವಿರುದ್ಧ ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಕುಂಟು ನೆಪವೊಡ್ಡಿ ದಲಿತ ವಿರೋಧಿ ಎಂಬ ಅಸ್ಪಷ್ಟತೆಯ ವಾಕ್ಯಗಳನ್ನು ಬರೆದು ತೇಜೋವಧೆ ಮಾಡಲಾಗುತ್ತಿದೆ ಎಂದು ದೂರಿದರು.

ಹಿಂದಿನ ಸರ್ಕಾರದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನಿಲ್ಲಿಸಲಾಗಿತ್ತು. ಅದನ್ನು ಸರಿಪಡಿಸುವುದು ಹಾಗೂ ನೆನೆಗುದಿಗೆ ಬಿದ್ದಿದ್ದ ತಾಂತ್ರಿಕ ಕೆಲಸಗಳನ್ನು ಸರಿಪಡಿಸಲು ಸಚಿವರಿಗೆ ವರ್ಷಗಳೇ ಬೇಕಾಯಿತು. ನಾವೆಲ್ಲರೂ ಒತ್ತಾಯ ಮಾಡಿದ್ದರಿಂದ ಮೈಸೂರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು 23.75 ಕೋಟಿ ರೂ. ಬಿಡುಗಡೆ ಮಾಡಿಸಿದ್ದಾರೆ. ಈ ಹಿಂದೆ ದಲಿತರ ಮೇಲೆ ದೌರ್ಜನ್ಯ ನಡೆಸಿದವರಿಗೆ ಶೇ.10ರಷ್ಟು ಶಿಕ್ಷೆ ಆಗುತ್ತಿರಲಿಲ್ಲ. ಇಂತಹ ಗಂಭೀರ ವಿಷಯವನ್ನು ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಿ, ದೌರ್ಜನ್ಯ ಪ್ರಕರಣಗಳಲ್ಲಿ ದಲಿತರಿಗೆ ನ್ಯಾಯ ಕೊಡಿಸಲು ಪ್ರತ್ಯೇಕ ನಿರ್ದೇಶನಾಲಯ ಆರಂಭಿಸಿದ್ದಾರೆ. ಅಲ್ಲದೇ 33 ಪೊಲೀಸ್ ಠಾಣೆಗಳನ್ನು ದೌರ್ಜನ್ಯ ಪ್ರಕರಣಗಳ ತ್ವರಿತ ತನಿಖೆಗಾಗಿ ತೆರೆದಿದ್ದಾರೆ ಎಂಬುದನ್ನು ವಿರೋಧಿ ಮನಸ್ಥಿತಿಯುಳ್ಳವರು ಹಾಗೂ ಸಮುದಾಯ ಮನಗಾಣಬೇಕು ಎಂದರು.



ದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್ ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ತೆರೆಯಲು ಪ್ರಸ್ತಾವನೆ: ರಾಜ್ಯದ ಪ.ಜಾತಿ ಮತ್ತು ಪಂಗಡಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳು ದೆಹಲಿಯಲ್ಲಿ ಐಎಎಸ್ ಮತ್ತು ಐಪಿಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯ ಹಾಗೂ ತರಬೇತಿ ಕೇಂದ್ರ ತೆರೆಯುವ ಪ್ರಸ್ತಾವನೆಯನ್ನು ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಸಲ್ಲಿಸಿದ್ದಾರೆ. ಆಂಧ್ರದಲ್ಲಿರುವಂತೆ 128 ಅಡಿ ಎತ್ತರದ ಅಂಬೇಡ್ಕರ್ ಪ್ರತಿಮೆ ಮಾದರಿ ಬೆಂಗಳೂರಿನಲ್ಲಿ ಬೃಹತ್ ಪುತ್ಥಳಿ ನಿರ್ಮಾಣ ಮಾಡಬೇಕು ಮತ್ತು ವಸ್ತು ಸಂಗ್ರಹಾಲಯ ತೆರೆಯಬೇಕೆಂಬ ಯೋಜನೆಯನ್ನು ತೆರೆಮರೆಯಲ್ಲಿ ರೂಪಿಸಿದ್ದಾರೆ. ಅಂತಹ ಕಾರ್ಯ ನೆರವೇರಿದ ಬಳಿಕ ಬಹಿರಂಗಪಡಿಸೋಣವೆಂದು ಅನುಷ್ಠಾನದ ಪ್ರಕ್ರಿಯೆ ನಡೆಸುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಮಿತಿ ಸದಸ್ಯ ಗೋವಿಂದರಾಜು, ಜಿಲ್ಲಾ ಸಂಘಟನಾ ಸಂಚಾಲಕ ಸುರೇಶ್, ಕೃಷ್ಣ, ಖಜಾಂಚಿ ಪುಟ್ಟಸ್ವಾಮಿ ಇತರರಿದ್ದರು.

ಅತ್ಯುತ್ತಮ ಶಾಲಾ ನಿರ್ವಹಣೆ, ಶೈಕ್ಷಣಿಕ ಚಟುವಟಿಕೆಗಳಿಗೆ

ಹೊಸವೀಡುಹುಂಡಿ ಸರ್ಕಾರಿ ಶಾಲೆಗೆ ಪ್ರಶಸ್ತಿ

ಬಿಇಓ, ಬಿಆರ್‌ಸಿ, ಸಿಆರ್‌ಪಿ ಹಾಗೂ ಗ್ರಾಮಸ್ಥರಿಂದ ಶಿಕ್ಷಕರ ಕಾರ್ಯಕ್ಕೆ ಶ್ಲಾಘನೆ

ನಂಜನಗೂಡು, ಏ.1– ಅತ್ಯುತ್ತಮ ಶಾಲಾ ನಿರ್ವಹಣೆ ಮತ್ತು ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತಾಲೂಕಿನ ಹೊಸವೀಡುಹುಂಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಸಮಗ್ರ ಶಿಕ್ಷಣ ಕರ್ನಾಟಕದ ಅಡಿ 1 ಲಕ್ಷ ರೂ. ಬಹುಮಾನ ನೀಡಿ ಶಾಲಾ ಶಿಕ್ಷಣ ಇಲಾಖೆ ಗೌರವಿಸಿದೆ.

ಶಾಲಾ ಶಿಕ್ಷಣ ಇಲಾಖೆ ರಾಜ್ಯದ ವಿವಿಧ ಜಿಲ್ಲೆಗಳ 44,762 ಪ್ರಾಥಮಿಕ ಮತ್ತು ಪ್ರೌಢಶಾಲಾ ಒಳಗೊಂಡಂತೆ ವಿದ್ಯಾವಾಹಿನಿ ಪೋರ್ಟಲ್‌ನಲ್ಲಿ ಎಸ್‌ಡಿಎಂಸಿ ಸಮೀಕ್ಷೆಗೆ ಪಾಲ್ಗೊಳ್ಳುವ ಮೂಲಕ ಕ್ಲಸ್ಟರ್ ಹಂತದಿಂದ ತಾಲೂಕು ಹಂತಕ್ಕೆ 1836 ಶಾಲೆಗಳು ಹಾಗೂ ತಾಲೂಕು ಹಂತದಿಂದ 612 ಶಾಲೆಗಳು ಜಿಲ್ಲಾ ಹಂತದವರೆಗಿನ ಮೌಲ್ಯಮಾಪನದಲ್ಲಿ ತೊಡಗಿಸಲಾಗಿತ್ತು.

ಇದರಲ್ಲಿ 204 ಶಾಲೆಗಳು ಪ್ರತಿ ತಾಲೂಕಿಗೆ ಒಂದರಂತೆ ವಿದ್ಯಾವಾಹಿನಿ ಪೋರ್ಟಲ್ ಮೂಲಕ ಆಯ್ಕೆಗೊಂಡಿದ್ದು, ಈ 204 ಶಾಲೆಗಳಲ್ಲಿ ಹೊಸ ವೀಡುಹುಂಡಿ ಶಾಲೆ ಆಯ್ಕೆಯಾಗಿ ಒಂದು ಲಕ್ಷ ನಗದು ಬಹುಮಾನ ಪಡೆಯುವ ಮೂಲಕ ನಂಜನಗೂಡು ತಾಲ್ಲೂಕಿನ ಇತರೆ ಶಾಲೆಗಳಿಗೆ ಮಾದರಿಯಾಗಿದೆ.

ಬಿಆರ್‌ಸಿ ಬಾಲರಾಜ್ ಮಾತನಾಡಿ, ರಾಜ್ಯದ ಪುಷ್ಠಿ ಕಾರ್ಯಕ್ರಮದಡಿ ಹೊಸ ವೀಡುಹುಂಡಿ ಶಾಲೆಗೆ ಅನೇಕ ಬಾರಿ ಭೇಟಿ ನೀಡಿದ ಸಂದರ್ಭ ಇಲ್ಲಿನ ಶೈಕ್ಷಣಿಕ ವಾತಾವರಣ ಉತ್ತಮವಾಗಿದೆ. ಅಲ್ಲದೇ ಶಾಲೆ ಹಸಿರು ಪರಿಸರದೊಂದಿಗೆ ಕಂಗೊಳಿಸುತ್ತಿದ್ದು, ಈ ಶಾಲೆಗೆ ದಾನಿಗಳು ನೆರವಿನ ಮಹಾಪೂರವನ್ನೇ ಹರಿಸಿದ್ದಾರೆ. ಸುಮಾರು 3 ಸಾವಿರ ಪುಸ್ತಕಗಳು, ಸ್ಮಾರ್ಟ್ ಟಿವಿ, ನಲಿ–ಕಲಿ ಟೇಬಲ್, ಶಾಲಾ ಕೊಠಡಿಗೆ ಪೇಂಟ್ ಮಾಡಿಸಲಾಗಿದೆ. ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಲು ಇಲ್ಲಿನ ಎಸ್‌ಡಿಎಂಸಿ ಸಹಕಾರ ನೀಡಿದ್ದು, ಈ ಶಾಲೆಗೆ ಪ್ರಶಸ್ತಿ ಬಂದಿರುವುದು ಸಂತೋಷದ ವಿಚಾರ ಎಂದರು.



ಸಿಆರ್‌ಪಿ ಶಿವನಾಗ ಮಾತನಾಡಿ, ಪುಷ್ಠಿ ಕಾರ್ಯಕ್ರಮದಡಿ ಉತ್ತಮ ಎಸ್‌ಡಿಎಂಸಿ ಶಾಲೆ ಎಂದು ಹೆಸರು ಪಡೆದಿರುವ ಈ ಶಾಲೆಯು ಶೈಕ್ಷಣಿಕವಾಗಿ ಗುಣಮಟ್ಟವನ್ನು ಹೊಂದಿರುವ ಶಾಲೆಯಾಗಿದ್ದು, ಬಿಸಿಯೂಟ ನಿರ್ವಹಣೆಯಲ್ಲಿಯೂ ಅತ್ಯುತ್ತಮವಾಗಿದೆ ಎಂದರು.

> ಈ ಪ್ರಶಸ್ತಿ ಗೌರವ ಹೊಸವೀಡುಹುಂಡಿ ಗ್ರಾಮದವರಿಗೆ ಸಲ್ಲಬೇಕು. ಅವರ ಸಹಕಾರದಿಂದ ರಾಜ್ಯ ಸರ್ಕಾರದಿಂದ ಪ್ರಶಸ್ತಿ ಲಭಿಸಿದೆ. ಬಹುಮಾನದ ಹಣವನ್ನು ಶಾಲಾ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ವಿನಿಯೋಗಿಸಲಾಗುವುದು.
> –ಹನುಮಂತರಾಜು, ಮುಖ್ಯ ಶಿಕ್ಷಕ, ಹೊಸ ವೀಡುಹುಂಡಿ.

> ಒಂದು ಕಾಲಕ್ಕೆ ಸಮಸ್ಯೆ ಹೊಂದಿದ್ದ ಶಾಲೆಯಾಗಿತ್ತು. ಈ ಶಾಲೆಗೆ ಹೊಸದಾಗಿ ಬಂದ ಮುಖ್ಯ ಶಿಕ್ಷಕ ಹನುಮಂತರಾಜು ಹಾಗೂ ಸಹ ಶಿಕ್ಷಕ ಪಿ.ನಾಗೇಶ ಅವರ ಕಾರ್ಯ ಕ್ಷಮತೆ, ಗ್ರಾಮಸ್ಥರೊಂದಿಗಿನ ಒಡನಾಟದಿಂದ ಶಾಲೆಗೆ ಬಹುಮಾನ ಬಂದಿದೆ. –ಕಿರಣ್ ಮೌರ್ಯ, ಹಳೇ ವಿದ್ಯಾರ್ಥಿ.

> ಹೊಸವೀಡು ಹುಂಡಿ ಸರ್ಕಾರಿ ಕಿರಿಯ ಶಾಲೆ ಚಿಕ್ಕದಾದರೂ ತುಂಬಾ ಸುಂದರವಾಗಿದೆ. ಈ ಶಾಲೆಗೆ ಪ್ರಶಸ್ತಿ ಬಂದಿರುವುದು ಹರ್ಷದಾಯಕ. ಇಲ್ಲಿನ ಶಾಲೆ ಶೈಕ್ಷಣಿಕ ಗುಣಮಟ್ಟ ಕಾಪಾಡಿಕೊಂಡಿದ್ದು ಎಸ್‌ಡಿಎಂಸಿ ನಿರ್ವಹಣೆಯಲ್ಲಿ ಉತ್ತಮವಾಗಿದೆ. ಶಾಲೆಯ ಮುಖ್ಯ ಶಿಕ್ಷಕ ಹನುಮಂತರಾಜು ಹಾಗೂ ಶಿಕ್ಷಕ ಪಿ. ನಾಗೇಶ ಅವರ ನಿರಂತರ ಪರಿಶ್ರಮದಿಂದ ಈ ಶಾಲೆಗೆ ಪ್ರಶಸ್ತಿ ಬಂದಿರುವುದು ತಾಲೂಕಿನ ಹೆಮ್ಮೆ. –ಮಹೇಶ್, ಬಿಇಓ, ನಂಜನಗೂಡು.

ಐಪಿಎಲ್ ಹಂಗಾಮ

ಸತತ 2ನೇ ಜಯ ದಾಖಲಿಸಿದ ಪಂಜಾಬ್ ಕಿಂಗ್ಸ್



ಲಕ್ನೋ, ಏ.1– ಪ್ರಭಸಿಮ್ರನ್ ಸಿಂಗ್ ಮತ್ತು ಶ್ರೇಯಸ್ ಅಯ್ಯರ್ ಅವರ ಆಕರ್ಷಕ ಅರ್ಧಶತಕ ಮತ್ತು ಅರ್ಶದೀಪ್ ಸಿಂಗ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಪಂಜಾಬ್ ಕಿಂಗ್ಸ್, ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇದರೊಂದಿಗೆ ಟೂರ್ನಿಯಲ್ಲಿ ಸತತ 2ನೇ ಜಯ ದಾಖಲಿಸಿದ ಪಂಜಾಬ್ 4 ಅಂಕಗಳೊಂದಿಗೆ ಅಂಕಪಟ್ಟಿಯಲ್ಲಿ 2ನೇ ಸ್ಥಾನಕ್ಕೇರಿದೆ.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕಾನಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 7 ವಿಕೆಟ್ ನಷ್ಟಕ್ಕೆ 171 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಪಂಜಾಬ್ ಕಿಂಗ್ಸ್ 16.2 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 177 ರನ್ ಗಳಿಸುವ ಮೂಲಕ ಇನ್ನೂ 22 ಎಸೆತಗಳು ಬಾಕಿ ಇರುವಂತೆಯೇ ಜಯದ ನಗೆ ಬೀರಿತು.

ಪಂಜಾಬ್ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಿಯಾಂಶ್ ಆರ್ಯ 8 ರನ್ ಗಳಿಸಿ ಔಟಾದರೂ 2ನೇ ವಿಕೆಟ್‌ಗೆ ಜೊತೆಯಾದ ಪ್ರಭಸಿಮ್ರನ್ ಸಿಂಗ್ ಮತ್ತು ಶ್ರೇಯಸ್ ಅಯ್ಯರ್ 84 ರನ್ ಜೊತೆಯಾಟವಾಡಿ ತಂಡಕ್ಕೆ ಆಸರೆಯಾದರು. ಈ ವೇಳೆ 34 ಎಸೆತಗಳಲ್ಲಿ 32 ಸಿಕ್ಸರ್, 9 ಬೌಂಡರಿ ಒಳಗೊಂಡ 69 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ನಾಯಕ ಶ್ರೇಯಸ್ ಅಯ್ಯರ್ ಜೊತೆಗೂಡಿದ ನೇಹಲ್ ವಧೇರಾ ಮೂರನೇ ವಿಕೆಟ್‌ಗೆ 67ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ನಾಯಕನಿಗೆ ತಕ್ಕ ಆಟವಾಡಿದ ಶ್ರೇಯಸ್ ಅಯ್ಯರ್ 30 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ ಅಜೇಯ 52 ರನ್ ಗಳಿಸಿದರೇ, ವಧೇರಾ 43 ರನ್ ಗಳಿಸಿ ಅಜೇಯರಾಗಿ ಉಳಿದರು. ಲಕ್ನೋ ಪರ ದಿಗ್ವೇಶ್‌ರಾಠಿ 2 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಸೂಪರ್ ಜೈಂಟ್ಸ್ 35 ರನ್ ಆಗುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಖಾತೆ ತೆರೆಂುದೇ ಮಿಚೆಲ್ ಮಾರ್ಷ್ ಔಟಾದರೆ, ಏಡನ್ ಮಾಕ್ರಂ 28 ರನ್ ಗಳಿಸಿ ನಿರ್ಗಮಿಸಿ ದರು. ನಂತರ ಬಂದ ನಾಯಕ ರಿಷಬ್ ಪಂತ್ ಕೇವಲ 2 ರನ್ ಗಳಿಸಿ ಮತ್ತೊಮ್ಮೆ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ಈ ವೇಳೆ ಜೊತೆಯಾದ ನಿಕೋಲಸ್ ಪೂರಾನ್ ಹಾಗೂ ಆಯುಷ್ ಬದೋನಿ 54 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ ಉತ್ತಮವಾಗಿ ಆಡುತ್ತಿದ್ದ ಪೂರಾನ್ 44 ರನ್ ಗಳಿಸಿ ಔಟಾದರು. ಉಳಿದಂತೆ ಆಯುಷ್ ಬದೋನಿ 41, ಅಬ್ದುಲ್ ಸಮದ್ 27, ಡೇವಿಡ್ ಮಿಲ್ಲರ್ 19 ರನ್ ಗಳಿಸಿದರು. ಪಂಜಾಬ್ ಪರ ಅರ್ಶದೀಪ್ ಸಿಂಗ್ 3, ಲ್ಯೂಕಿ ಫರ್ಗೂಸನ್, ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕೋ ಯಾನ್ಸನ್ ಹಾಗೂ ಯಜುವೇಂದ್ರ ಚಹಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಪ್ರಭಸಿಮ್ರನ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಬೆಂಗಳೂರು	2	2	0	0	4
ಪಂಜಾಬ್	2	2	0	0	4
ಡೆಲ್ಲಿ	2	2	0	0	4
ಗುಜರಾತ್	2	1	1	0	2
ಮುಂಬೈ	3	1	2	0	2
ಲಕ್ನೋ	3	1	2	0	2
ಚೆನ್ನೈ	3	1	2	0	2
ಹೈದರಾಬಾದ್	3	1	2	0	2
ರಾಜಸ್ಥಾನ್	3	1	2	0	2
ಕೋಲ್ಕತ್ತಾ	3	1	2	0	2

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು
V/S
ಗುಜರಾತ್ ಟೈಟಾನ್ಸ್

ಸಮಯ: ಸಂಜೆ 7.30

ಸ್ಥಳ : ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು

ಕೆಎಸ್‌ಐಸಿ ಗುತ್ತಿಗೆ ನೌಕರರ ಅಹವಾಲು ಸ್ವೀಕರಿಸಿದ ಶಾಸಕ ಶ್ರೀವತ್ಸ



ಮೈಸೂರಿನ ಕೆಎಸ್‌ಐಸಿ ಗೇಟ್ ಮುಂದೆ ಜಮಾಯಿಸಿದ್ದ ಗುತ್ತಿಗೆ ನೌಕರರಿಂದ ಶಾಸಕ ಟಿ.ಎಸ್.ಶ್ರೀವತ್ಸ ಮನವಿ ಸ್ವೀಕರಿಸಿದರು.

ಮೈಸೂರು, ಏ.1(ಎಂಟಿವೈ)– ಕರ್ನಾಟಕ ರಾಜ್ಯ ರೇಷ್ಮೋದ್ಯಮ ನಿಗಮ (ಕೆಎಸ್‌ಐಸಿ) ಗುತ್ತಿಗೆ ನವೀಕರಣದ ಕಾರಣವೊಡ್ಡಿ ಗುತ್ತಿಗೆ ನೌಕರರನ್ನು ಕರ್ತವ್ಯಕ್ಕೆ ಹಾಜರಾಗಲು ಅಡ್ಡಿಪಡಿಸಿ, ಸರ್ವಿಸ್ ಬ್ರೇಕ್ ಮಾಡುವ ಸಂಚು ನಡೆಸಲಾಗುತ್ತಿದೆ ಎಂದು ಹೊರಗುತ್ತಿಗೆ ನೌಕರರು ಶಾಸಕ ಟಿ.ಎಸ್.ಶ್ರೀವತ್ಸ ಅವರಿಗೆ ಮನವಿ ಸಲ್ಲಿದ್ದಾರೆ.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿಯಲ್ಲಿ ಮಂಗಳವಾರ ಬೆಳಗ್ಗೆ ಹೊರಗುತ್ತಿಗೆ ನೌಕರರನ್ನು ಇಂದು ಬ್ರೇಕ್ ಡೇ ಹಿನ್ನೆಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಅವಕಾಶವಿಲ್ಲ. ಏ.2ರಿಂದ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಲಾಯಿತು. ಆದರೆ, ಬ್ರೇಕ್ ಡೇ ಹಿಂದೆ ಸಂಚು ನಡೆಯುತ್ತಿದೆ ಎಂದು ಆರೋಪಿಸಿ, ಎಲ್ಲಾ ಹೊರಗುತ್ತಿಗೆ ನೌಕರರು ಕೆಎಸ್‌ಐಸಿ ಗೇಟ್ ಮುಂದೆ ಅಸಹಾಯಕತೆ ಪ್ರದರ್ಶಿಸುತ್ತಿದ್ದರು. ಈ ವೇಳೆ ಸ್ಥಳಕ್ಕಾಗಮಿಸಿದ ಶಾಸಕ ಟಿ. ಎಸ್.ಶ್ರೀವತ್ಸ ಹೊರಗುತ್ತಿಗೆ ನೌಕರರಿಂದ ಸಮಸ್ಯೆ ಆಲಿಸಿದರು. ಬಳಿಕ ಕೆಎಸ್‌ಐಸಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿರುವುದಕ್ಕೆ ಕಾರಣ ಹಾಗೂ ಸ್ಪಷ್ಟನೆ ಪಡೆದ ನಂತರ ನೌಕರರೊಂದಿಗೆ ಮಾತನಾಡಿ, ನಾಳೆಯಿಂದ ಕರ್ತವ್ಯಕ್ಕೆ ಹಾಜರಾಗಬಹುದು. ನಿಮ್ಮ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ. ಇಲಾಖೆ ಹಿರಿಯ ಅಧಿಕಾರಿಗಳು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚಿಸುತ್ತೇನೆ ಎಂದು ಭರವಸೆ ನೀಡಿದರು.

ಸವಲತ್ತು ನೀಡುವುದನ್ನು ತಪ್ಪಿಸಲು ಹುನ್ನಾರ: ಹೊರ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ 800ಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರು ಸೇವೆಗೆ ಹಾಜರಾಗಲು ತಡೆಯೊಡ್ಡಲಾಗಿದೆ. ಇದರಿಂದ ಸರ್ವಿಸ್ ಬ್ರೇಕ್ ಮಾಡಿ, ಹೊರಗುತ್ತಿಗೆ ನೌಕರರಿಗೆ ನ್ಯಾಯಯುತವಾಗಿ ದೊರಕುವ ಸವಲತ್ತು ಸಿಗದಂತೆ ಸಂಚು ನಡೆಸಲಾಗಿದೆ. ಅಲ್ಲದೆ, ಕಳೆದ ನಾಲ್ಕು ವರ್ಷದಿಂದ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಂದ ಕೆಲಸ ಕಸಿದುಕೊಳ್ಳುವ ಹುನ್ನಾರ ನಡೆಸಲಾಗುತ್ತಿದೆ ಎಂದು ನೌಕರರು ಆರೋಪಿಸಿದರು.

ಎರಡು ತಿಂಗಳ ಹಿಂದೆಯೇ ದೂರು: ಟೆಂಡರ್ ನವೀಕರಣದ ನೆಪವೊಡ್ಡಿ ಒಂದು ದಿನ ಸರ್ವಿಸ್ ಬ್ರೇಕ್ ನೆಪವೊಡ್ಡಿ ನಮ್ಮನ್ನು ಕೆಲಸಕ್ಕೆ ಬರದಂತೆ ತಡೆಯುವ ಹುನ್ನಾರ ನಡೆಸಲಾಗುತ್ತಿದೆ. ಸತತ ನಾಲ್ಕು ವರ್ಷ ಸೇವೆ ಪೂರ್ಣಗೊಳಿಸಿ, ಐದನೇ ವರ್ಷ ಸೇವೆ ಮುಂದುವರೆಸಿದರೆ ಗುತ್ತಿಗೆ ನೌಕರರಿಗೂ ಕೆಲವು ಸೌಲಭ್ಯ ನೀಡಬೇಕಾಗುತ್ತದೆ. ಇದರಿಂದ ಸರ್ವಿಸ್ ಬ್ರೇಕ್ ಮಾಡಲು ನಡೆಸುತ್ತಿರುವ ಹುನ್ನಾರದ ಬಗ್ಗೆ ಎರಡು ತಿಂಗಳ ಹಿಂದೆಯೇ ಕಾರ್ಮಿಕ ಇಲಾಖೆಗೆ ದೂರು ನೀಡಿ, ಗುತ್ತಿಗೆ ನೌಕರರ ಹಿತಕಾಯುವಂತೆ ಮನವಿ ಮಾಡಲಾಗಿದೆ ಎಂದು ಗುತ್ತಿಗೆ ಕಾರ್ಮಿಕರು ತಿಳಿಸಿದ್ದಾರೆ.

ನಿವೃತ್ತ ನೌಕರರಿಗೆ ಬಂಪರ್: ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ನಿವೃತ್ತ ಅಧಿಕಾರಿ ಹಾಗೂ ನೌಕರರನ್ನು ತಾತ್ಕಾಲಿಕ ಅಥವಾ ಗುತ್ತಿಗೆ ಆಧಾರದಲ್ಲಿ ಕೆಲಸ ನೀಡದಂತೆ ಸರ್ಕಾರದ ಆದೇಶವಿದೆ. ಅಲ್ಲದೆ, ವಿವಿಧ ಇಲಾಖೆಗಳಲ್ಲಿ ಸೇವೆ ಮುಂದುವರೆಸಿರುವ ನಿವೃತ್ತ ಅಧಿಕಾರಿ, ಸಿಬ್ಬಂದಿಗಳನ್ನು ಬಿಡುಗಡೆ ಮಾಡುವಂತೆ ಕಳೆದ ವರ್ಷವೇ ಸರ್ಕಾರ ಆದೇಶಿಸಿದೆ. ಆದರೂ ಕೆಎಸ್‌ಐಸಿಯಲ್ಲಿ 50ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಈ ನಿವೃತ್ತ ನೌಕರರಿಗೆ ಪಿಂಚಣಿಯೂ ಬರುತ್ತಿದೆ. ಮತ್ತೊಂದು ಕಡೆ ಸಂಬಳವೂ ಬರುತ್ತಿದೆ. ಇದರಿಂದ ಬೇರೊಬ್ಬರ ಹಕ್ಕನ್ನು ಕಸಿದುಕೊಂಡಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಪಾಲಿಸಿ, ನಿವೃತ್ತ ನೌಕರರನ್ನು ಬಿಡುಗಡೆ ಮಾಡಬೇಕು. ಕೆಎಸ್‌ಐಸಿಯಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಸರ್ಕಾರದ ಗಮನ ಸೆಳೆಯುತ್ತೇನೆ

ಕೆಎಸ್‌ಐಸಿಯಲ್ಲಿ ಗುತ್ತಿಗೆ ಕಾರ್ಮಿಕರ ಸಮಸ್ಯೆ ಆಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಟೆಂಡರ್ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಟೆಂಡರ್ ನವೀಕರಣ ಮಾಡಲಾಗಿದೆ. ನವೀಕರಣದ ಹಿನ್ನೆಲೆಯಲ್ಲಿ ಒಂದು ದಿನ ಬ್ರೇಕ್ ಡೇ ಎಂದು ಆಚರಿಸಿ, ಬಳಿಕ ಗುತ್ತಿಗೆ ನೌಕರರನ್ನು ಕರ್ತವ್ಯಕ್ಕೆ ಅವಕಾಶ ನೀಡಲಾಗುತ್ತದೆ. ಈ ಹಿಂದೆ ನೀಡುತ್ತಿದ್ದ ವೇತನ ನೀಡಿ ಕೆಲಸ ಮುಂದುವರೆಸಲಾಗುತ್ತದೆ. ಸಿಬ್ಬಂದಿಗಳು ಸರ್ವಿಸ್ ಬ್ರೇಕ್ ಮಾಡುವ ಸಂಚು ನಡೆಯುತ್ತಿದೆ ಎಂದು ಆರೋಪಿಸಿದ್ದಾರೆ. ಈ ಸಂಬಂಧ ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚಿಸುತ್ತೇನೆ.

- ಟಿ.ಎಸ್.ಶ್ರೀವತ್ಸ, ಶಾಸಕ

ಮ್ಯಾನ್ಮಾರ್ ತಲುಪಿದ ಭಾರತೀಯ ಹಡಗುಗಳು



ನವದೆಹಲಿ, ಏ.1– ಭೂಕಂಪ ಪೀಡಿತ ಮ್ಯಾನ್ಮಾರ್‌ಗೆ ಭಾರತ ಸುಮಾರು 50 ಟನ್ ಪರಿಹಾರ ಸಾಮಗ್ರಿಗಳನ್ನು ರವಾನಿಸಿದೆ. ಪರಿಹಾರ ಸಾಮಗ್ರಿಗಳನ್ನು ಹೊತ್ತ ಭಾರತೀಯ ನೌಕಾಪಡೆಯ ಎರಡು ಹಡಗುಗಳಾದ ಐಎನ್‌ಎಸ್ ಸಾತ್ಪುರ ಮತ್ತು ಐಎನ್‌ಎಸ್ ಸಾವಿತ್ರಿ ಮ್ಯಾನ್ಮಾರ್‌ನ ಯಾಂಗೂನ್ ನಗರಕ್ಕೆ ತಲುಪಿವೆ.

ಭಾರತೀಯ ನೌಕಾಪಡೆಯ ಇನ್ನೂ ಮೂರು ಹಡಗುಗಳಾದ ಎಲ್‌ಸಿಯು–52, ಐಎನ್‌ಎಸ್ ಕಾರ್ಮುಖ್, ಐಎನ್‌ಎಸ್ ಘರಿಯಲ್ 500 ಟನ್‌ಗಳಿಗೂ ಹೆಚ್ಚು ಹೆಚ್ಚುವರಿ ಸಾಮಗ್ರಿಗಳೊಂದಿಗೆ ಯಾಂಗೊನ್‌ಗೆ ತೆರಳುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್, 'ಆಪರೇಷನ್ ಬ್ರಹ್ಮ' ಮಾನವೀಯ ಕಾರ್ಯಾಚರಣೆಯ ಭಾಗವಾಗಿ ಐಎನ್‌ಎಸ್ ಸಾತ್ಪುರ ಮತ್ತು ಐಎನ್‌ಎಸ್ ಸಾವಿತ್ರಿ ಇಂದು ಪರಿಹಾರ ಸಾಮಗ್ರಿಗಳೊಂದಿಗೆ ಯಾಂಗೂನ್ ತಲುಪಿವೆ ಎಂದು ಹೇಳಿದ್ದಾರೆ.

ಬ್ಯಾಂಕ್‌ಗಳಲ್ಲಿ ಕಾರ್ಯ ಒತ್ತಡದ ಹಿನ್ನೆಲೆ

ಗೂಗಲ್ ಪೇ, ಫೋನ್ ಪೇ ವಹಿವಾಟು ಕೆಲ ಕಾಲ ಸ್ಥಗಿತ

ಮೈಸೂರು, ಏ.1(ಬಿಎಲ್‌ಯು)– ಬ್ಯಾಂಕ್‌ಗಳ ಕಾರ್ಯ ಒತ್ತಡದಿಂದಾಗಿ ಆನ್‌ಲೈನ್ ಹಣ ಪಾವತಿ ವ್ಯವಸ್ಥೆ ಕೆಲಕಾಲ ಸ್ಥಗಿತ ಗೊಂಡಿತ್ತು. ಈ ಹಿನ್ನೆಲೆ ಇಂದು ಗೂಗಲ್ ಪೇ ಹಾಗೂ ಫೋನ್ ಪೇ ಕಾರ್ಯಾಚರಣೆ ಸ್ಥಗಿತಗೊಂಡಿತ್ತು. ಮಾರ್ಚ್ 31 ರ ಆರ್ಥಿಕ ವರ್ಷಾಂತ್ಯದಲ್ಲಿ ಬ್ಯಾಂಕ್‌ಗಳು ಎಲ್ಲಾ ಲೆಕ್ಕಗಳನ್ನು ಪೂರ್ಣಗೊಳಿಸಬೇಕಿತ್ತು. ನಿನ್ನೆ ಬೆಳಿಗ್ಗೆಯಿಂದ ರಾತ್ರಿ ತನಕ ಬ್ಯಾಂಕ್ ನೌಕರರು ಕೆಲಸ ನಿರ್ವಹಿಸಿದ್ದರು. ಅಲ್ಲದೆ ಬಾಕಿ ಉಳಿದಿದ್ದ ಕೆಲಸವನ್ನು ಇಂದು ಮಾಡುತ್ತಿದ್ದರು. ಇದರಿಂದ ಬ್ಯಾಂಕ್‌ನಲ್ಲಿ ಒತ್ತಡವಿತ್ತು. ಈ ಹಿನ್ನೆಲೆಯಲ್ಲಿ ಆನ್‌ಲೈನ್ ಹಣದ ವಹಿವಾಟು ಸ್ಥಗಿತಗೊಳ್ಳುತ್ತದೆ ಎಂದು ಬ್ಯಾಂಕ್‌ಗಳು ಇಂದು ಬೆಳಿಗ್ಗೆಯೇ ಗ್ರಾಹಕರ ಮೊಬೈಲ್‌ಗೆ ಮಾಹಿತಿ ನೀಡಿತ್ತು. ಅದರಂತೆ ಇಂದು ಬೆಳಿಗ್ಗೆಯಿಂದ ಸಂಜೆ ವರೆಗೆ ಆನ್‌ಲೈನ್ ಹಣ ವರ್ಗಾವಣೆ ಸ್ಥಗಿತಗೊಂಡಿತ್ತು.

ಗೂಗಲ್ ಪೇ ಮತ್ತು ಫೋನ್ ಪೇ ಬಂದ ನಂತರ ಇತ್ತೀಚಿಗೆ ಜನರು ಬ್ಯಾಂಕ್ ಹಾಗೂ ಎಟಿಎಂಗಳಿಗೆ ಹೋಗುತ್ತಿಲ್ಲ. ಹಣದ ವಹಿವಾಟುಗಳನ್ನು ಆನ್‌ಲೈನ್ ಮೂಲಕವೇ ಮಾಡುತ್ತಿದ್ದಾರೆ. ಅಷ್ಟರ ಮಟ್ಟಿಗೆ ಆನ್‌ಲೈನ್ ವಹಿವಾಟು ಮಹತ್ವ ಪಡೆದುಕೊಂಡಿದೆ.

ಇದರಿಂದ ಬಹಳಷ್ಟು ಜನರು ಜೇಬಿನಲ್ಲಿ ಹಣ ಇಟ್ಟುಕೊಳ್ಳದೆ ಮೊಬೈಲ್ ಮೂಲಕ ವ್ಯವಹರಿಸುತ್ತಾರೆ. ಹೋಟೆಲ್, ವಸ್ತುಗಳ ಖರೀದಿ ಸೇರಿದಂತೆ ಇತರೆ ವ್ಯವಹಾರದ ವೇಳೆ ಗ್ರಾಹಕರು ಇಂದು ಗೂಗಲ್ ಪೇ ಮತ್ತು ಫೋನ್ ಪೇ ಹಣ ವರ್ಗಾವಣೆ ಮಾಡಲು ಸಾಧ್ಯವಾಗದೇ ಪರಿತಪಿಸಿದರು. ಇದರಿಂದ ಜೇಬಿನಲ್ಲಿ ಹಣ ಇಟ್ಟುಕೊಳ್ಳದವರು ಮುಜುಗರಕ್ಕೊಳಗಾದರು. ಸಂಜೆ ವೇಳೆಗೆ ಆನ್‌ಲೈನ್ ಹಣ ವಹಿವಾಟು ವ್ಯವಸ್ಥೆ ಚಾಲನೆಗೊಂಡಿತು.

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಏ.7ರಂದು ಮೈಸೂರಿನಲ್ಲಿ ಬಿಜೆಪಿ ರ‍್ಯಾಲಿ

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಇಂದು ಅಹೋರಾತ್ರಿ ಧರಣಿ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.1(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರದ ದರ ಏರಿಕೆ ನೀತಿ ವಿರೋಧಿಸಿ ನಾಳೆ (ಏ.2) ಬೆಂಗಳೂರಿನಲ್ಲಿ ಅಹೋ ರಾತ್ರಿ ಧರಣಿ ನಡೆಯಲಿದ್ದು, ಏಪ್ರಿಲ್ 7 ರಂದು ಮೈಸೂರಿನಲ್ಲಿ ಬೃಹತ್ ರ‍್ಯಾಲಿ ಆಯೋಜಿಸಲಾಗುವುದು ಎಂದು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದರು.

ನಗರ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿನಿಂದ ಹಲವು ವಸ್ತುಗಳ ಬೆಲೆ ಏರಿಕೆ ಜಾರಿಗೆ ಬಂದಿದ್ದು, ಸರ್ಕಾರ ಏಪ್ರಿಲ್ 1 ರಂದು ಜನರನ್ನು ಮೂರ್ಖರನ್ನಾಗಿ ಮಾಡಿದೆ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಾಲಿನ ದರ 9 ರೂಪಾಯಿ ಏರಿಕೆ ಆಗಿದೆ. ಈ ಹಣವನ್ನು ರೈತರಿಗೆ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ ಕೊಟ್ಟ ಮಾತು ಉಳಿಸಿಕೊಂಡಿಲ್ಲ. ಈ ಹಿಂದೆ ಹಾಲಿನ ದರ ಹೆಚ್ಚಳದ 662 ಕೋಟಿ ರೂಪಾಯಿಯನ್ನು ರೈತರಿಗೆ ನೀಡದೆ, ವಂಚಿಸಿದೆ ಎಂದು ಆರೋಪಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವಾ ದರ ಏರಿಕೆ, ಆಸ್ತಿ ಖರೀದಿಯಲ್ಲಿ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಹೆಚ್ಚಳ, ಮೆಟ್ರೋ ದರ ಏರಿಕೆ, ವಿದ್ಯುತ್ ದರ ಹೆಚ್ಚಳ ಸೇರಿದಂತೆ ಪ್ರತಿಯೊಂದು ವಸ್ತುವಿನ ಬೆಲೆ ಹೆಚ್ಚಳ ಮಾಡಲಾಗಿದೆ. ಗ್ಯಾರಂಟಿ ಯೋಜನೆಯ ಕುಕ್ಕರ್‌ನಲ್ಲಿ ಒಂದೆಡೆ ವಿಷಲ್ ಹೊಡೆಯುತ್ತಿದ್ದರೆ, ಮತ್ತೊಂದೆಡೆ ಕುಕ್ಕರ್ ಕೆಳಗೆ ಬೆಲೆ ಏರಿಕೆ ಬಿಸಿ ಜನರಿಗೆ ತಟ್ಟುತ್ತಿದೆ ಎಂದು ನಾಗೇಂದ್ರ ಆಪಾದಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂತ್ರಿಗಳ ಮೇಲೆ ಹಿಡಿತವಿಲ್ಲದ ಕಾರಣ ಸಚಿವರು ಲೂಟಿ ಮಾಡುತ್ತಿದ್ದಾರೆ. ಇದರ ಹೊರೆಯನ್ನು ಜನ ಸಾಮಾನ್ಯರ ಮೇಲೆ ಹೊರಿಸುತ್ತಿದ್ದಾರೆ ಎಂದು ದೂರಿದರು.

ಸರ್ಕಾರದ ಬೆಲೆ ಏರಿಕೆ ವಿರೋಧಿಸಿ ವಿಧಾನಸಭೆಯ ಒಳಗೆ ಹಾಗೂ ಹೊರಗೆ ಬಿಜೆಪಿ ಹೋರಾಟ ನಡೆಸುತ್ತಿದೆ ನಾಳೆ (ಏಪ್ರಿಲ್ 2) ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುತ್ತದೆ. ತರುವಾಯ ಏಪ್ರಿಲ್ 7 ರಂದು ಮೈಸೂರಿನಲ್ಲಿ ಬೃಹತ್ ರ‍್ಯಾಲಿ ಮತ್ತು ಸಮಾವೇಶ ನಡೆಸಲಿದ್ದು, ಜಾಗ ಇನ್ನು ತೀರ್ಮಾನವಾಗಿಲ್ಲ ಎಂದು ಹೇಳಿದರು.

ದೇಶದ ಯಾವ ರಾಜ್ಯದಲ್ಲೂ ಸರ್ಕಾರಿ ಕಾಮಗಾರಿ ಗುತ್ತಿಗೆಯಲ್ಲಿ ಮುಸ್ಲಿಂರಿಗೆ ಮೀಸಲಾತಿ ನೀಡಿಲ್ಲ. ಆದರೆ ತುಷ್ಟೀಕರಣ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರ ಮುಸ್ಲಿಂರಿಗೆ ಗುತ್ತಿಗೆಯಲ್ಲಿ ಶೇಕಡ 4ರಷ್ಟು ಮೀಸಲಾತಿ ನೀಡುತ್ತಿದೆ. ಈ ರೀತಿಯ ಮೀಸಲಾತಿ ನೀಡಲು ಸಂವಿಧಾನದಲ್ಲೂ ಉಲ್ಲೇಖವಿಲ್ಲ. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನಕ್ಕೆ ವಿರೋಧಿ ನೀತಿ ಅನುಸರಿಸಿದ್ದಾರೆ. ಅಲ್ಲದೆ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದಾರೆ ಎಂದು ಸರ್ಕಾರದ ವಿರುದ್ಧ ನಾಗೇಂದ್ರ ಕಿಡಿಕಾರಿದರು.

ಸೋಲಿನ ಭೀತಿಯ ಕಾರಣ ಈ ತನಕ ನಗರ ಪಾಲಿಕೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿಲ್ಲ. ಇಂತಹ ಹಲವು ಜನ ವಿರೋಧಿ ನೀತಿ ಅನುಸರಿಸುತ್ತಿರುವ ಕಾಂಗ್ರೆಸ್ ಸರ್ಕಾರ ತಮ್ಮನ್ನು ಆಯ್ಕೆ ಮಾಡಿದ ಜನರಿಗೆ ಮೋಸ ಮಾಡುತ್ತಿದೆ ಎಂದು ಆರೋಪಿಸಿದರು.

ಅಕ್ರಮವಾಗಿ ತಲೆ ಎತ್ತಿರುವ ಬಡಾವಣೆಗಳ ನಿವೇಶನ ಅಥವಾ ಮನೆಗಳಿಗೆ ಬಿ ಖಾತೆ ನೀಡುವುದಾಗಿ ಸರ್ಕಾರ ಘೋಷಿಸಿದೆ. ಬಿ–ಖಾತಾ ಕೇಳಲು ಕಚೇರಿಗೆ ಹೋದರೆ ನೋಂದಣಿ ಪತ್ರ ತರುವಂತೆ ಷರತ್ತು ವಿಧಿಸಿದ್ದಾರೆ. ನೋಂದಣಿ ಮಾಡಿಕೊಡುವಂತೆ ನಿವೇಶನ ಮಾರಿದ ಮಾಲೀಕನನ್ನು ಕೇಳಿದರೆ ಆತ ಲಕ್ಷಾಂತರ ರೂಪಾಯಿ ಹಣ ಕೇಳುತ್ತಿದ್ದಾನೆ. ಸಾರ್ವಜನಿಕರ ಅಭಿಪ್ರಾಯ ಪಡೆಯದೆ ಅವೈಜ್ಞಾನಿಕವಾಗಿ ಸರ್ಕಾರ ತೆಗೆದುಕೊಂಡ ಈ ನಿರ್ಧಾರದಿಂದ ಜನರು ಬವಣೆ ಪಡುತ್ತಿದ್ದಾರೆ ಎಂದು ನಾಗೇಂದ್ರ ಆಪಾದಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ನಗರ ವಕ್ತಾರ ಮೋಹನ್, ಓಬಿಸಿ ನಗರಾಧ್ಯಕ್ಷ ಜೋಗಿ ಮಂಜು, ನಗರ ಮಾಧ್ಯಮ ಸಂಚಾಲಕ ಮಹೇಶ್ ರಾಜ್ ಅರಸ್, ಕೇಬಲ್ ಮಹೇಶ್ ಸೇರಿದಂತೆ ಹಲವರು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಬ್ಯಾಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
L2 ಎಂಪುರಾನ್ (ತ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ಫಾರೆಸ್ಟ್(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗುರು ಇಲ್ಲದ ವಿದ್ಯಾರ್ಜನೆ ಅಪೂರ್ಣ



ಮೈಸೂರಿನ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಮಂಗಳವಾರ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಡಾ.ಶ್ರೀ ಶಿವಕುಮಾರಸ್ವಾಮೀಜಿ ಅವರ 118 ನೇ ಜಯಂತಿ ಕಾರ್ಯಕ್ರಮ ನಡೆಯಿತು.

ಮೈಸೂರು, ಏ.1(ಬಿಎಲ್‌ಯು)– ಗುರು ಇಲ್ಲದಿದ್ದರೆ ವಿದ್ಯಾರ್ಜನೆ ಅಪೂರ್ಣ ಎಂದು ಜ್ಯೋತಿಷಿ ವಿಷ್ಣು ಸಾಲಿಗ್ರಾಮ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಇಂದು ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರ 118 ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಗುರುವಿನ ಅವಶ್ಯಕತೆ ಇಲ್ಲ ಎಂದು ಕೆಲವರು ಹೇಳುತ್ತಾರೆ. ಆದರೆ ಗುರು ಇಲ್ಲದಿದ್ದರೆ ವಿದ್ಯಾರ್ಜನೆ ಪರಿಪೂರ್ಣವಾಗುವುದಿಲ್ಲ ಎಂದರು.

ಕಂಪ್ಯೂಟರ್‌ಗಳು ಬಂದಿವೆ ಎಂಬ ಮಾತ್ರಕ್ಕೆ ಅದೇ ಎಲ್ಲಾ ಕೆಲಸಗಳನ್ನು ಮಾಡುವುದಿಲ್ಲ. ಕಂಪ್ಯೂಟರ್ ಆಪರೇಟ್ ಮಾಡಲು ವ್ಯಕ್ತಿ ಬೇಕು. ಆ ವ್ಯಕ್ತಿಗೆ ಗುರುವಿನ ಮಾರ್ಗದರ್ಶನ ಬೇಕು ಎಂದು ಹೇಳಿದರು.

ಗುರುಗಳು ಶಿಷ್ಯರಿಗೆ ವಿದ್ಯೆ ಧಾರೆ ಎರೆಯಬೇಕು. ಆದರೆ ಗುರುವಿಗೆ ಇದರಿಂದ ಹಣ ಸಂಪಾದನೆಯ ಏಕಮೇವ ಉದ್ದೇಶ ಆಗಬಾರದು ಎಂದು ವಿಷ್ಣು ಸಾಲಿಗ್ರಾಮ ಸ್ವಾಮೀಜಿ ಹೇಳಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಜ್ಯೋತಿಷಿ ಡಾ.ಜೆ.ಲೀಲಾ ಪ್ರಕಾಶ್, ಚಿತ್ರನಟ ಸುಪ್ರಿತ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಸಂಸ್ಥಾಪಕ ಅಧ್ಯಕ್ಷ ಬಸವ ರಾಜೇಂದ್ರ ಸ್ವಾಮೀಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕ್ರಿಶ್ಚಿಯನ್ ವಿವಾಹದ ನೋಂದಣಾಧಿಕಾರಿ



ಮೈಸೂರು, ಏ.1– ಮೈಸೂರು ಜಿಲ್ಲೆಗೆ ಸೀಮಿತಗೊಳಿಸಿ ಕ್ರಿಶ್ಚಿಯನ್ ಜನಾಂಗದ ವಿವಾಹದ ನೋಂದಣಾಧಿಕಾರಿಯಾಗಿ ನ್ಯಾಯವಾದಿ ಪಿ.ಮ್ಯಾಥೇಲಿಯನ್ ಮರಿಯಾ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿದೆ.

ಕ್ರಿಶ್ಚಿಯನ್ ಸಂಪ್ರದಾಯದ ಪ್ರಕಾರ ವಿವಾಹ ನೋಂದಣಿ ಉದ್ದೇಶಕ್ಕಾಗಿ ಇವರನ್ನು ನೇಮಕ ಮಾಡಲಾಗಿದೆ ಎಂದು ಒಳಾಡಳಿತ ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ಡಿ.ಎಸ್.ನಳಿನ ಮಂಗಳವಾರ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ರಾಜೀನಾಮೆ ವಿಚಾರದಲ್ಲಿ ನಿಲುವು ಅಚಲ



ಸಕಲೇಶಪುರ, ಏ.1– ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಅಧಿವೇಶನದಲ್ಲಿ ಶಾಸಕರು ಹನಿಟ್ರ್ಯಾಪ್ ವಿಷಯದ ಮೇಲೆ ಮಾತ್ರ ಗಮನಹರಿಸುತ್ತಿರುವುದರಿಂದ ಅಮೂಲ್ಯ ಸಮಯ ವ್ಯರ್ಥವಾಗುತ್ತಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವ ರಾಜ ಹೊರಟ್ಟಿ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ. ತಮ್ಮ ಕೆಲವು ಸಹೋದ್ಯೋಗಿಗಳ ನಡವಳಿಕೆ ಬಗ್ಗೆ ಅವರು ಪ್ರಶ್ನಿಸಿದ್ದಾರೆ. ಸಕಲೇಶಪುರದಲ್ಲಿ ಮಾತನಾಡಿದ ಅವರು, ರಾಜಕೀಯ ನಾಯಕರು ವಿಧಾನಸಭೆಯಲ್ಲಿ ಸ್ಪೀಕರ್ ಅವರತ್ತ ಕಾಗದಗಳನ್ನು ಎಸೆದು ಪವಿತ್ರವಾದ ಪ್ರಜಾಪ್ರಭುತ್ವದ ದೇವಾಲಯವನ್ನು ಈ ರೀತಿ ಅವಮಾನಿಸಬಹುದು ಎಂದು ತಾವು ಎಂದಿಗೂ ನಿರೀಕ್ಷಿಸಿರಲಿಲ್ಲ ಎಂದು ಹೇಳಿದರು.

ಪರಿಷತ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಲು ನಿರ್ಧರಿಸಿರುವುದಾಗಿ ಪುನರುಚ್ಚರಿಸಿದ ಹೊರಟ್ಟಿ, "ರಾಜಕೀಯ ಬದಲಾಗಿದೆ ರಾಜಕೀಯ ಶೌರ್ಯದ ಹಳೆಯ ದಿನಗಳನ್ನು ಪ್ರಸ್ತುತ ಸನ್ನಿವೇಶಕ್ಕೆ ಹೋಲಿಸಲು ಸಾಧ್ಯವಿಲ್ಲ. ನಾನು ಇದರ ಬಗ್ಗೆ ಅನೇಕ ನಾಯಕರು ಮತ್ತು ಶಾಸಕರೊಂದಿಗೆ ಚರ್ಚಿಸಿದ್ದೇನೆ ಮತ್ತು ಈ ನಿಟ್ಟಿನಲ್ಲಿ ನನ್ನ ನಿರ್ಧಾರವನ್ನು ವ್ಯಕ್ತಪಡಿಸಿದ್ದೇನೆ. ಅನೇಕ ಶಾಸಕರು ತಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದಾಗಿ ಭರವಸೆ ನೀಡಿದ್ದಾರೆ ಎಂದರು.

ರಾಜಕೀಯ ನಾಯಕರು ಕೇವಲ ಹಣವನ್ನು ಖರ್ಚು ಮಾಡಿ ಚುನಾವಣೆಗಳನ್ನು ಗೆಲ್ಲುತ್ತಾರೆ ನಂತರ ಬಂದು ಬೆಂಗಳೂರಿನಲ್ಲಿ ಕುಳಿತುಕೊಳ್ಳುತ್ತಾರೆ. ಸದನದಲ್ಲಿ ಪ್ರಶ್ನೆಗಳು ಎದ್ದಾಗ, ಉತ್ತರ ನೀಡಲು ಯಾರೂ ಇರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಶಾಸಕರ ಅಮಾನತು ಆದೇಶ ಹಿಂಪಡೆಯಿರಿ

ಸ್ಪೀಕರ್ ಯು.ಟಿ.ಖಾದರ್‌ಗೆ ಯತ್ನಾಳ್ ಪತ್ರ



ಬೆಂಗಳೂರು, ಏ.1– ವಿಧಾನಸಭೆಯಿಂದ ಬಿಜೆಪಿಯ 18 ಶಾಸಕರ ಅಮಾನತುಗೊಳಿಸಿದ ಆದೇಶವನ್ನು ಮರುಪರಿಶೀಲಿಸುವಂತೆ ವಿಧಾನಸಭಾ ಸ್ಪೀಕರ್ ಯುಟಿ.ಖಾದರ್ ಅವರಿಗೆ ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮನವಿ ಮಾಡಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಅವರು, ವಿಧಾನಸಭೆಯ ಒಟ್ಟಾರೆ ಕಾರ್ಯ ನಿರ್ವಹಣೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆರಡೂ ಆರೋಗ್ಯಕರ ಚರ್ಚೆಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ವಿಧಾನಸಭೆ ಆವರಣದಲ್ಲಿ ನಡೆದ ಪ್ರತಿಭಟನೆಗಳು ಜನರ ಧ್ವನಿಯನ್ನು ಪ್ರತಿನಿಧಿಸುವ ವಿರೋಧ ಪಕ್ಷದ ಕರ್ತವ್ಯದ ಅಭಿವ್ಯಕ್ತಿಯಾಗಿತ್ತು. ಸದನದಲ್ಲಿ ಸಭ್ಯತೆ ಕಾಪಾಡಿಕೊಳ್ಳುವುದು ಮುಖ್ಯ. ಆದರೆ, ಅಮಾನತುಗೊಂಡಿರುವ 18 ಶಾಸಕರ ಪೈಕಿ ಬಹುತೇಕರು ಮೊದಲ ಬಾರಿಗೆ ಶಾಸಕರಾಗಿರುವವರಿದ್ದಾರೆ. ಇದು ಕಠಿಣ ಕ್ರಮವೆಂದು ತೋರುತ್ತದೆ. ಈ ದೀರ್ಘಾವಧಿಯ ಅಮಾನತು ಅವರು ಸೇವೆ ಸಲ್ಲಿಸುವ ಕ್ಷೇತ್ರಗಳ ಪ್ರಾತಿನಿಧ್ಯದ ಮೇಲೆ ಪರಿಣಾಮ ಬೀರುವುದಲ್ಲದೆ, ಪ್ರಜಾಸತ್ತಾತ್ಮಕ ಸಂಸ್ಥೆಯಲ್ಲಿ ಒಂದು ಪೂರ್ವನಿದರ್ಶನವನ್ನು ಕೂಡ ಹೊಂದಿಸುತ್ತದೆ, ಅಲ್ಲಿ ಭಿನ್ನಾಭಿಪ್ರಾಯ ಮತ್ತು ಚರ್ಚೆಯನ್ನು ಹುಟ್ಟುಹಾಕುವ ಬದಲು, ಮೌನಗೊಳಿಸಲು ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಹೇಳಿದ್ದಾರೆ.

ಮ್ಯಾನ್ಮಾರ್, ಥೈಲ್ಯಾಂಡ್ ಭೂಕಂಪ: 2,700 ದಾಟಿದ ಮೃತರ ಸಂಖ್ಯೆ

ಬ್ಯಾಂಕಾಕ್: ಮ್ಯಾನ್ಮಾರ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ ಮೃತಪಟ್ಟವರ ಸಂಖ್ಯೆ 2,700 ದಾಟಿದೆ. ರಾಜಧಾನಿಯಲ್ಲಿ ಧರೆಗುರುಳಿದ್ದ ಕಟ್ಟಡದ ಅವಶೇಷಗಳಡಿ 91 ಗಂಟೆಗಳಿಂದ ಸಿಲುಕಿದ್ದ 63 ವರ್ಷದ ಮಹಿಳೆಯನ್ನು ರಕ್ಷಣಾ ಸಿಬ್ಬಂದಿ ಮಂಗಳವಾರ ರಕ್ಷಣೆ ಮಾಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ ಎಂದು ಅಗ್ನಿಶಾಮಕ ಇಲಾಖೆ ತಿಳಿಸಿದೆ.

ಮ್ಯಾನ್ಮಾರ್ ಸೇನಾ ಸರ್ಕಾರದ ಹಿರಿಯ ಜನರಲ್ ಮಿನ್ ಆಂಗ್ ಹ್ಲೇಂಗ್ ಮಾತನಾಡಿ, ಭೂಕಂಪದಲ್ಲಿ ಈವರೆಗೆ 2,719 ಮಂದಿ ಮೃತಪಟ್ಟಿದ್ದಾರೆ. 4,521 ಮಂದಿ ಗಾಯಗೊಂಡಿದ್ದು, 441 ಮಂದಿ ನಾಪತ್ತೆಯಾಗಿದ್ದಾರೆ ಎಂದು ಹೇಳಿದ್ದಾರೆ.

ಅನಿಲ ಸೋರಿಕೆ; ಮಾಲೀಕ ಸೇರಿ ಮೂವರು ಸಾವು

ಜೈಪುರ, ಏ.1– ರಾಜಸ್ಥಾನದ ಬೀವರ್ ಜಿಲ್ಲೆಯ ರಾಸಾಯನಿಕ ಕಾರ್ಖಾನೆಯೊಂದರಲ್ಲಿ ನಿಲ್ಲಿಸಲಾಗಿದ್ದ ಟ್ಯಾಂಕರ್‌ನಿಂದ ವಿಷಕಾರಿ ಅನಿಲ ಸೋರಿಕೆಯಾಗಿ ಮಾಲೀಕ ಸೇರಿ ಮೂವರು ಸಾವನ್ನಪ್ಪಿದ್ದು, 50 ಕ್ಕೂ ಹೆಚ್ಚು ಜನರು ಅಸ್ವಸ್ಥರಾಗಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಡಿಯಾದ ವಸತಿ ಪ್ರದೇಶದಲ್ಲಿ ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿದ್ದ ಈ ರಾಸಾಯನಿಕ ಕಾರ್ಖಾನೆಯಲ್ಲಿ ಸೋಮವಾರ ತಡರಾತ್ರಿ ನೈಟ್ರಿಕ್ ಆಮ್ಲ ಸೋರಿಕೆಯಾಗಿ 53 ಜನ ಅಸ್ವಸ್ಥರಾಗಿದ್ದಾರೆ ಎಂದು ಜಿಲ್ಲಾಧಿಕಾರಿ ಮಹೇಂದ್ರ ಖಡ್ಗಾವತ್ ತಿಳಿಸಿದ್ದಾರೆ. ಅನಿಲ ಸೋರಿಕೆಪರಿಸ್ಥಿತಿಯನ್ನು ಸಕಾಲಕ್ಕೆ ನಿಯಂತ್ರಿಸಲಾಗಿದೆ ಎಂದು ಅವರು ಹೇಳಿದರು. ಪೊಲೀಸ್ ವರಿಷ್ಠಾಧಿಕಾರಿ ಶ್ಯಾಮ್ ಸಿಂಗ್ ಅವರ ಪ್ರಕಾರ, ವಿಷಕಾರಿ ಅನಿಲ ಉಸಿರಾಡಿದ ನಂತರ ಸುತ್ತಮುತ್ತಲಿನ ಹಲವಾರು ಜನ ಅಸ್ವಸ್ಥರಾಗಿದ್ದು, ಅವರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಚಿಕಿತ್ಸೆ ಫಲಕಾರಿಯಾಗದೆ ಕಾರ್ಖಾನೆ ಮಾಲೀಕ ಸುನಿಲ್ ಸಿಂಘಾಲ್(47) ಸೋಮವಾರ ರಾತ್ರಿ ನಿಧನರಾದರು, ಸ್ಥಳೀಯ ನಿವಾಸಿಗಳಾದ ದಯಾರಾಮ್ (52) ಮತ್ತು ನರೇಂದ್ರ ಸೋಲಂಕಿ (40) ಅವರು ಮಂಗಳವಾರ ನಿಧನರಾದರು ಎಂದು ಅವರು ಹೇಳಿದ್ದಾರೆ.

ಅಜ್ಮೀರ್‌ನ ಜೆಎಲ್‌ಎನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಅವರು ತಿಳಿಸಿದ್ದಾರೆ. ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದ ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಅತ್ಯಾಚಾರ ಪ್ರಕರಣ: ಪಾದ್ರಿ ಬಜೀಂದರ್ ಸಿಂಗ್‌ಗೆ ಜೀವಾವಧಿ ಶಿಕ್ಷೆ




ಮೊಹಾಲಿ, ಏ.1– 2018 ರಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣದಲ್ಲಿ ಪಾದ್ರಿ ಬಜೀಂದರ್ ಸಿಂಗ್ ಅವರಿಗೆ ಪಂಜಾಬ್‌ನ ಮೊಹಾಲಿ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆ ವಿಧಿಸಿದೆ.

ಮಹಿಳೆಯೊಬ್ಬರಿಗೆ ಲೈಂಗಿಕ ದೌರ್ಜನ್ಯವೆಸಗಿದ ಪ್ರಕರಣದಲ್ಲಿ ಸ್ವಯಂ ಘೋಷಿತ ಕ್ರಿಶ್ಚಿಯನ್ ಪಾದ್ರಿ ಬಜೀಂದರ್ ಸಿಂಗ್ ಅವರಿಗೆ ಜೀವಾವಧಿ ಶಿಕ್ಷೆಯನ್ನು ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶ ವಿಕ್ರಾಂತ್ ಕುಮಾರ್ ಅವರು ಮಂಗಳವಾರ ತೀರ್ಪು ನೀಡಿದರು.

ಮೊಹಾಲಿಯ ಜಿರಾಕ್‌ಪುರ ಪೊಲೀಸ್ ಠಾಣೆಯಲ್ಲಿ ಮಹಿಳೆಯೊಬ್ಬರು ನೀಡಿದ ದೂರಿನ ಆಧಾರದ ಮೇಲೆ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 376 (ಅತ್ಯಾಚಾರ) 323(ಸ್ವಯಂಪ್ರೇರಿತವಾಗಿ ನೋವುಂಟುಮಾಡುವ ಶಿಕ್ಷೆ) ಮತ್ತು 506 (ಕ್ರಿಮಿನಲ್ ಬೆದರಿಕೆ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.


ವಿದೇಶಕ್ಕೆ ಕರೆದುಕೊಂಡು ಹೋಗುವುದಾಗಿ ಆಮಿಷವೊಡ್ಡಿದ್ದ ಬಜೀಂದರ್, ತನ್ನ ಮೇಲೆ ಅತ್ಯಾಚಾರ ಎಸಗಿ ವಿಡಿಯೋ ಮಾಡಿಕೊಂಡಿದ್ದ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದರು. ಈ ಪ್ರಕರಣದಲ್ಲಿ ಬಜೀಂದರ್ ಸಿಂಗ್ ದೋಷಿ ಎಂದು ಮಾರ್ಚ್ 27 ರಂದು ನ್ಯಾಯಾಲಯ ತೀರ್ಪು ನೀಡಿತ್ತು. ಮಂಗಳವಾರ ಶಿಕ್ಷೆ ಪ್ರಕಟ ಹಿನ್ನೆಲೆಯಲ್ಲಿ ನ್ಯಾಯಾಲಯದ ಆವರಣದಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ವಿವಾದಿತ ಆಧ್ಯಾತ್ಮಿಕ ಗುರು ನಿತ್ಯಾನಂದ ಸಾವಿನ ವದಂತಿ!



ನವದೆಹಲಿ, ಏ.1– ವಿವಾದಾತ್ಮಕ ಆಧ್ಯಾತ್ಮಿಕ ಗುರು ನಿತ್ಯಾನಂದ ನಿಧನರಾಗಿದ್ದಾರೆ ಎಂಬ ವದಂತಿ ಹಬ್ಬಿದೆ ಈ ವದಂತಿ ರವಾನೆ ಹಿಂದೆ ಏಪ್ರಿಲ್ ಫೂಲ್ ಮಾಡುವ ಉದ್ದೇಶವಿದೆ ಎಂದು ಕೆಲವರು ಹೇಳುತ್ತಾರೆ.

ಇತ್ತೀಚೆಗೆ ನಡೆದ ಶಿವರಾತ್ರಿ ಸತ್ಸಂಗದಲ್ಲಿ ನಿತ್ಯಾನಂದ ಮಾತನಾಡುತ್ತಿರುವ ವಿಡಿಯೋ ವೈರಲ್ ಆಗಿದೆ. ಅವರು ಮಾತನಾಡುತ್ತಿರುವಾಗ ವೀಡಿಯೊ ಇದ್ದಕ್ಕಿದ್ದಂತೆ ನಿಂತುಹೋಯಿತು. ತಾಂತ್ರಿಕ ದೋಷಗಳಿಂದಾಗಿ ಇದು ನಿಂತುಹೋಗಿದೆ ಎಂದು ಹಲವರು ಭಾವಿಸಿದ್ದರು. ಆದರೆ, ಅಂದಿನಿಂದ ನಿತ್ಯಾನಂದ ಎಲ್ಲಿದ್ದಾನೆ ಎಂಬುದು ತಿಳಿದುಬಂದಿಲ್ಲ. ಇತ್ತೀಚೆಗೆ ಯುಗಾದಿ ಹಬ್ಬದ ಸಮಯದಲ್ಲಿಯೂ ಅವನು ಎಲ್ಲಿಯೂ ಕಾಣಿಸಲಿಲ್ಲ. ಇದು ಅವರು ಜೀವಂತವಾಗಿಲ್ಲ ಎಂಬ ಊಹಾಪೋಹ ಗಳಿಗೆ ಕಾರಣವಾಗುತ್ತಿದೆ ನಿತ್ಯಾನಂದ ಎರಡು ದಿನಗಳ ಹಿಂದೆ ನಿಧನರಾದರು ಎಂಬ ವದಂತಿ ಹರಡಿದೆ. ಶಿವರಾತ್ರಿಯ ನಂತರ ನಿತ್ಯಾನಂದ ಯಾವುದೇ ಸತ್ಸಂಗದಲ್ಲಿ ಭಾಗವಹಿಸಿರಲಿಲ್ಲ.




ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ಸಿದ್ಧಾರ್ಥನಗರ, ವಿನಯ ಮಾರ್ಗ, 11ನೇ ಕ್ರಾಸ್, ಸೋಲಂಕಿ ನಿವಾಸ್, ನಂಬರ್ 45 ರ ನಿವಾಸಿಯಾದ ಪ್ರಕಾಶ್ ಚಂದ್ ಕೆ. ಬಿನ್. ಕೇಶವ್ ರಾಮ್ ಸೋಲಂಕಿ, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್ : ಮೈಸೂರು ನಗರ, ಲಷ್ಕರ್ ಮೊಹಲ್ಲಾ, ಹಲ್ಲದಕೇರಿ, 1ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ ಇಲ್ಲಿರುವ ಪೂರ್ವ–ಪಶ್ಚಿಮ: 20 ಅಡಿ, ಉತ್ತರ–ದಕ್ಷಿಣ: 39 ಅಡಿ, ಒಟ್ಟು ವಿಸ್ತೀರ್ಣ: 780 ಚದರ ಅಡಿ ಅಳತೆಯ ಆಸ್ತಿ ಸಂಖ್ಯೆ: 2860, L-64, L-64/1, L-64/2 ಮತ್ತು ಇದರಲ್ಲಿ ಕಟ್ಟಿರುವ ಕಟ್ಟಡ ಇದಕ್ಕೆ ಚಕ್ಕುಬಂದಿ : ಪೂರ್ವಕ್ಕೆ:– ಲೇಟ್. ಕೆ. ವಿ. ಮಲ್ಲಪ್ಪ ರವರ ಮನೆ , ಪಶ್ಚಿಮಕ್ಕೆ:– ಲೇಟ್. ಕಾಳಪ್ಪ ರವರ ಮನೆ , ಉತ್ತರಕ್ಕೆ: 2ನೇ ಅಡ್ಡ ರಸ್ತೆ , ದಕ್ಷಿಣಕ್ಕೆ:– ಜಿ.ಆರ್. ಅಂಬಬಾಯಿ ರವರ ಸ್ವತ್ತು

Sd/-Prakash Kalappa, Advocate
2-3, First Floor, PRI Complex, 67/7A, New Sayyajirao Road, Fort Mohalla, Mysore 570004 India , Cell: 93431 12535. E-mail: mnprakashkalappa@gmail.com
ಮೈಸೂರು : 01.04.2025

ಮೊದಲನೇ ವರ್ಷದ ಪುಣ್ಯಸ್ಮರಣೆ



ವಿ.ವಾಸುದೇವ್

ನೀವು ನಮ್ಮನ್ನಗಲಿ ಇಂದಿಗೆ ಒಂದು ವರುಷವಾಯಿತು ಸದಾ ನಿಮ್ಮ ನೆನಪಿನಲ್ಲಿರುವ ಆಟೋ ಮಹದೇವ್.ವಿ ಮತ್ತು ಕುಟುಂಬವರ್ಗ, ಒಂಟಿಕೊಪ್ಪಲು.

ಏಳನೇ ವರ್ಷದ ಚಿರಸ್ಮರಣೆ



(ಶಿವೈಕ್ಯ ಸಿ.ಎಸ್.ಸುಬ್ಬಣ್ಣ, ಜೈನರಬೀದಿ, ಚಾಮರಾಜನಗರ ಇವರ ಧರ್ಮಪತ್ನಿ)
ಶ್ರೀಮತಿ ನಾಗರತ್ನಮ್ಮ
ಜನನ: 25–10–1940
ಶಿವೈಕ್ಯ: 02–04–2018

ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ ದುಃಖತಪ್ತರು: ಮಕ್ಕಳು ಮತ್ತು ಕುಟುಂಬವರ್ಗ ಜೈನರ ಬೀದಿ, ಚಾಮರಾಜನಗರ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ.ಕೆ.ಗೋವಿಂದರಾಜು

ಇವರು ದಿನಾಂಕ 23-03-2025ನೇ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 02-04-2025ರ ಬುಧವಾರ ಸಂಜೆ 07 ಗಂಟೆಗೆ ೪75/2, 2ನೇ ಕ್ರಾಸ್, ಕುರುಬಾರಹಳ್ಳಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಮೋಹನಲಕ್ಷ್ಮಿ ಮತ್ತು ಮಕ್ಕಳು, ಅಳಿಯ, ಹಾಗೂ ಕುಟುಂಬವರ್ಗದವರು
ಭೋಜನ: ರಾತ್ರಿ 7.30ಕ್ಕೆ

ಮೈಸೂರು ಮಿತ್ರ – ಓದುಗರ ಗಮನಕ್ಕೆ

45

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು–570023, ಕುವೆಂಪುನಗರ, ಗಂಗೆ ರಸ್ತೆ, ಇ & ಎಫ್ ಬ್ಲಾಕ್, 1ನೇ ಅಂತಸ್ತು ನಂಬರ್.729 ಇಲ್ಲಿ ವಾಸವಾಗಿರುವ ಶ್ರೀ. ಬಿ. ಆರ್. ರಿತೇಶ್ ಬಿನ್ ಬಿ. ಬಿ. ರವಿಶಂಕರ್ ಮತ್ತು ಶ್ರೀ. ಬಿ. ಆರ್. ತನುಶ್ ಬಿನ್ ಬಿ. ಬಿ. ರವಿಶಂಕರ್, ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಅದರ ಮಾಲೀಕರನ್ನು ಹೊರತುಪಡಿಸಿ ಇತರ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಅದರ ಮಾಲೀಕರು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ಮರಳೆ ಗ್ರಾಮದ ಈ ಕೆಳಕಂಡ ಸರ್ವೆ ನಂಬರ್. 96/4, 98/2, 98/8, 99/2, 100ಒಟ್ಟು ವಿಸ್ತೀರ್ಣ ಹತ್ತು ಎಕರೆ ಮುವತ್ತೆಂಟು ಗುಂಟೆ (10.38.00)ಗಳ ಕೃಷಿ ಜಮೀನು

Sy No	Extent: Acre	Gunta	Kharab A	Kharab B	BOUNDARIES: East	West	North	South
96/4	01	00	00	00	Sy. No. 96/2, 96/7, 96/8	Sy. No. 98/2	Sy, No. 99/2	Sy. No. 96/1
98/2	04	36	00	00	Sy. No. 99/2, 96/4	Sy. No. 98/3 & 98/4	Sy. No. 100	Sy. No. 97/1, 97/2, 97/3
98/8	00	25	00	00	Sy. No. 98/2	Remaining Land of Sy. No. 98/3	Sy. No. 100	Sy. No. 98/1
99/2	02	02	00	00	Sy. No. 99/1	Sy. No. 98/2, 100, 101, & 107/3	Remaining Land of Sy. No. 99/2	Sy. No. 96/4
100	02	15	00	00	Sy. No. 99/2	Sy. No. 102	Sy. No. 101	Sy. No. 98/8 & 98/2
Total	10	38	00	00				

Sd/- Prakash Kalappa, Advocate, # 2-3, First Floor, PRI Complex, 67/7A, New Sayyajirao Road, Fort Mohalla, Mysore 570004 India , Cell: 93431 12535. E-mail: mnprakashkalappa@gmail.com

ಸ್ಥಳ: ಮೈಸೂರು, ದಿನಾಂಕ:01.04.2025

ಮೈಸೂರು ಮಿತ್ರ – ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2025ಕ್ಕೆ 45 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 46ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳು ಏಪ್ರಿಲ್ 10, 2025 ರೊಳಗೆ ತಲುಪುವಂತೆ ಮಾಡಲು ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡಿಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋಮ್: 8951668960
ಪ್ರೇಮಾ: 9880549879
ಕೆ.ಆರ್. ಸರ್ಕಲ್ ಕಚೇರಿ: 0821-2431774
ದೇವರಾಜ ಅರಸ್ ರಸ್ತೆ ಕಚೇರಿ: 0821-2428695

- **ಕೊಡಗು** – ಪ್ರಸಾದ್, ಸೀತಾ ನಿಲಯ, ಮಡಿಕೇರಿ ರೇಂಜ್ ಫಾರೆಸ್ಟ್ ಹತ್ತಿರ, ಹೊಸ ಬಡಾವಣೆ, ಮಡಿಕೇರಿ 9731469871
- **ಮಂಡ್ಯ** – ಕೆ. ಮೋಹನ್‌ರಾಜ್ 8762960325
- **ಶ್ರೀರಂಗಪಟ್ಟಣ** – ವಿನಯ್ ಕಾರೇಕುರ, ಶ್ರೀರಂಗಪಟ್ಟಣ 9686893234
- **ಹುಣಸೂರು** – ಕೆ. ಕೃಷ್ಣ (ಕ.ಕ.), EWS 204, KHB ಕಾಲೋನಿ, ಕಲ್ಕುಣಿಕೆ, ಹುಣಸೂರು. 9448720626
- **ಚಾಮರಾಜನಗರ** – ಸಿದ್ದಲಿಂಗಸ್ವಾಮಿ, ಸಿ.ಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ 9242265657
- **ಟಿ.ನರಸೀಪುರ** – ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ. 9986719590
- **ಗುಂಡ್ಲುಪೇಟೆ** – ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ. 9845995426
- **ಕೆ.ಆರ್. ನಗರ** – ಮಂಜುನಾಥ, ವಾರ್ಡ್ ನಂ.17, ಕನಕನಗರ Extn. ಮುಳ್ಳೂರು ರಸ್ತೆ, ಕೆ.ಆರ್.ಟೌನ್ 9483084345
- **ಮಳವಳ್ಳಿ** – ಶಿವಶಂಕರ, ನಂ.47, 1ನೇ ಕ್ರಾಸ್, ಎಸ್.ಟಿ.ಎಸ್ ಮಳವಳ್ಳಿ ಟೌನ್–571430 9632407806
- **ಕೊಳ್ಳೇಗಾಲ** – ಎಸ್.ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಹುರುಳಿಕೇರಿ ಬೀದಿ, ಕೊಳ್ಳೇಗಾಲ 9916621007
- **ಹಾಸನ** – ಆರ್.ಎನ್.ಸೋಮೇಶ್‌ಗೌಡ, ಮೋರಿ ಟಿಲ್ಟನ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401175
- **ಕುಶಾಲನಗರ** – ರಘು ಹೆಬ್ಬಾಲೆ, ಮೈಸೂರು ಮಿತ್ರ ರಿಪೋರ್ಟರ್ C/o ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ 9845698401
- **ಜಯಪುರ** – ಬಿಳಿಗಿರಿ, ಜಯಪುರ 9945479288
- **ಪಿರಿಯಾಪಟ್ಟಣ** – ವಿರೇಶ್, ಪಿರಿಯಾಪಟ್ಟಣ 8660057128
- **ವಿರಾಜಪೇಟೆ** – ಮಂಜುನಾಥ, ವಿರಾಜಪೇಟೆ 9900949353
- **ಯಳಂದೂರು** – ವಿ.ನಾಗರಾಜು, ಮೈತ್ರಿ ಮೆಡಿಕಲ್, ಬಳೆಪೇಟೆ, ಯಳಂದೂರು 9844349191
- **ಕೆ.ಆರ್.ಪೇಟೆ** – ಶ್ರೀನಿವಾಸ, ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ 9449326847, 7022757438
- **ಹೆಚ್.ಡಿ.ಕೋಟೆ** – ಮಂಜುನಾಥ ಎಸ್., ಹೆಚ್.ಡಿ.ಕೋಟೆ 9483574452
- **ಕೆ.ಎಂ.ದೊಡ್ಡಿ** – ಸತೀಶ್ ವಿ.ಎಲ್, ಕೆ.ಎಂ.ದೊಡ್ಡಿ 9242120338
- **ನಂಜನಗೂಡು** – ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301 9901602226
- **ಹುಣಸೂರು** – ಹೆಚ್.ಆರ್. ಕೃಷ್ಣಕುಮಾರ್ (ಜನ ಸ್ನೇಹಿ), ಸಂಜೀವಿನಿ ಮಾರಾಟ ಕೇಂದ್ರ ಮಾರುತಿ ಪೆಟ್ರೋಲ್ ಬಂಕ್ ಹತ್ತಿರ ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು 9060406093
- **ಕೊಳ್ಳೇಗಾಲ** – ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ 9448576247, 7899849858